ಡಾ|| ರಾಜ್‌ಕುಮಾರ್ ಅಕಾಡೆಮಿ
ಬೆಂಗಳೂರು

ಡಾ|| ರಾಜ್‌ಕುಮಾರ್ ಕುಟುಂಬದವರ ಕೊಡುಗೆ

# ವಾರದ ಸುದ್ದಿ ಸಂಕಲನ

## ಸ್ಪಷ್ಟ ಮತ್ತು ಸಮಗ್ರ ವಿದ್ಯಮಾನಗಳು



## ಆಗಸ್ಟ್ ೨ನೇ ವಾರ

11-08-2025 TO 16-08-2025

- ಹಣದುಬ್ಬರ: 8 ವರ್ಷದ ಕನಿಷ್ಠ
- ಕನಿಷ್ಠ ಮೊತ್ತ ಬ್ಯಾಂಕ್‌ಗಳ ವಿವೇಚನೆ
- ಭೂಶಾಖದಿಂದ ವಿದ್ಯುತ್ ಸನ್ನಿಹಿತ
- ಏಷ್ಯನ್ ಬಾಕ್ಸಿಂಗ್

## ❖ ರಾಜ್ಯದಲ್ಲೂ ಮತ ಪಟ್ಟಿ ಪರಿಷ್ಕರಣೆ?

- ಬಿಹಾರದ ಸ್ವರೂಪದಲ್ಲೇ ಕರ್ನಾಟಕದಲ್ಲಿ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆಗೆ (ಎಸ್ ಐಆರ್) ಕೇಂದ್ರ ಚುನಾವಣಾ ಆಯೋಗ ಮುಂದಾಗಿದೆ.
- ಬಿಹಾರದಲ್ಲಿ ಈಚೆಗೆ ಮತದಾರರ ಪಟ್ಟಿಯನ್ನು ಪರಿಷ್ಕರಿಸಿ, ಸುಮಾರು 65 ಲಕ್ಷ ಜನರ ಮತದಾನದ ಚೀಟಿಯನ್ನು ರದ್ದು ಮಾಡಿ ಕರಡು ಪಟ್ಟಿಯನ್ನು ಸಿದ್ಧಪಡಿಸಲಾಗಿದೆ. ಇದೇ ಮಾದರಿಯಲ್ಲಿ ಕರ್ನಾಟಕದಲ್ಲೂ ಮತದಾರರ ಪಟ್ಟಿಯನ್ನು ಪರಿಷ್ಕರಿಸಲು ಚುನಾವಣಾ ಆಯೋಗವು ಕ್ರಮ ತೆಗೆದುಕೊಂಡಿದೆ ಎಂದು ಗೊತ್ತಾಗಿದೆ.
- ಈ ಸಂಬಂಧ ಗ್ರೇಟರ್ ಬೆಂಗಳೂರು ಪ್ರಾಧಿಕಾರದ (ಜಿಬಿಎ) ಮಟ್ಟದಲ್ಲಿ, ಚುನಾವಣಾ ಕರ್ತವ್ಯಕ್ಕೆ ನಿಯೋಜಿತರಾದ ಜಿಬಿಎ ಕಂದಾಯ ವಿಭಾಗದ ಅಧಿಕಾರಿಗಳ ಸಭೆ ನಡೆಸಲಾಗಿದೆ.
- ‘ಜಿಬಿಎಯ ಕಂದಾಯ ಅಧಿಕಾರಿಯೇ ಚುನಾವಣಾ ಕರ್ತವ್ಯದಲ್ಲಿ ಎಲೆಕ್ಟೋರಲ್ ಆಫೀಸರ್ (ಇಆರ್‌ಒ) ಆಗಿರುತ್ತಾರೆ. ಜಿಬಿಎ ವ್ಯಾಪ್ತಿಯ ಎಲ್ಲ ಇಆರ್‌ಒಗಳು ತಮ್ಮ ಅಧೀನದ ಸಹಾಯಕ ಕಂದಾಯ ಅಧಿಕಾರಿಗಳು, ಕಂದಾಯ ನಿರೀಕ್ಷಕರು ಮತ್ತು ತೆರಿಗೆ ಅಧಿಕಾರಿಗಳ ಜತೆ ಜುಲೈ ಮೂರನೇ ವಾರದಲ್ಲಿ ಸಭೆ ನಡೆಸಿದ್ದಾರೆ’ ಎಂದು ಮೂಲಗಳು ತಿಳಿಸಿವೆ.

### ಬಿಎಲ್‌ಒಗೆ ಕೇಂದ್ರದ ಸಿಬ್ಬಂದಿ?

- ಮತದಾರರ ಚೀಟಿ-ಪಟ್ಟಿ ಪರಿಷ್ಕರಣೆ, ಚುನಾವಣಾ ಕರ್ತವ್ಯದಲ್ಲಿ ಮತಗಟ್ಟೆ ಅಧಿಕಾರಿ (ಬಿಎಲ್‌ಒ) ಮಟ್ಟದ ಕರ್ತವ್ಯಗಳಿಗೆ ರಾಜ್ಯ ಸರ್ಕಾರ ಮತ್ತು ಸ್ಥಳೀಯ ಸಂಸ್ಥೆಗಳ ‘ಸಿ’ ದರ್ಜೆಯ ಸಿಬ್ಬಂದಿಯನ್ನು ನಿಯೋಜನೆ ಮಾಡಿಕೊಳ್ಳಲಾಗುತ್ತಿತ್ತು. ಈಗ ಕೇಂದ್ರ ಸರ್ಕಾರದ ‘ಸಿ’ ದರ್ಜೆಯ ಸಿಬ್ಬಂದಿಯನ್ನೂ ಬಳಸಿಕೊಳ್ಳಲು ಚುನಾವಣಾ ಆಯೋಗ ಮುಂದಾಗಿದೆ.

## ❖ ವಂದೇ ಭಾರತ್: 3 ರೈಲಿಗೆ ಚಾಲನೆ

- ಬೆಳಗಾವಿ-ಬೆಂಗಳೂರು, ಶ್ರೀ ಮಾತಾ ವೈಷ್ಣೋದೇವಿ ಕತ್ರಾ-ಅಮೃತಸರ ಹಾಗೂ ಅಜ್ನಿ (ನಾಗ್ಪುರ)–ಪುಣೆ ಮಾರ್ಗಗಳಲ್ಲಿ ಸಂಚರಿಸುವ ವಂದೇ ಭಾರತ್ ಎಕ್ಸ್‌ಪ್ರೆಸ್‌ನ ಹೊಸ ರೈಲುಗಳಿಗೆ ಪ್ರಧಾನಿ ನರೇಂದ್ರ ಮೋದಿ ಚಾಲನೆ ನೀಡಿದರು.

## ❖ ಗೋದ್ನಾ ವಿದ್ಯುತ್ ಯೋಜನೆಗೆ ಮರುಜೀವ

- ಹದಿನೇಳು ವರ್ಷಗಳಿಂದ ನನೆಗುದಿಯಲ್ಲಿದ್ದ 1,600 ಮೆಗಾವಾಟ್ ಸಾಮರ್ಥ್ಯದ ಗೋದ್ನಾ ಶಾಖೋತ್ಪನ್ನ ವಿದ್ಯುತ್ ಯೋಜನೆಗೆ ಮರುಜೀವ ನೀಡಿರುವ ಕರ್ನಾಟಕ ವಿದ್ಯುತ್ ನಿಗಮ ನಿಯಮಿತ (ಕೆಪಿಸಿಎಲ್), ಸಾರ್ವಜನಿಕ-ಖಾಸಗಿ ಸಹಭಾಗಿತ್ವದಲ್ಲಿ ಅನುಷ್ಠಾನಗೊಳಿಸಲು ಟೆಂಡರ್ ಕರೆದಿದೆ.

Dr. Rajkumar IAS/KAS Academy

- ರಾಜ್ಯ ಸರ್ಕಾರ ಮೊದಲ ಬಾರಿಗೆ ಸಾರ್ವಜನಿಕ- ಖಾಸಗಿ ಸಹಭಾಗಿತ್ವದಲ್ಲಿ (ಪಿಪಿಪಿ) ವಿದ್ಯುತ್ ಯೋಜನೆಯನ್ನು ಕೈಗೆತ್ತಿಕೊಳ್ಳಲು ಮುಂದಾಗಿದೆ. ಟೆಂಡರ್‌ನಲ್ಲಿ ಭಾಗಿಯಾಗಲು ಈ ತಿಂಗಳ 14ರವರೆಗೂ ಅವಕಾಶ ಇದೆ.
- ಈ ಯೋಜನೆಗೆ ಸುಮಾರು ₹18 ಸಾವಿರ ಕೋಟಿ ವೆಚ್ಚವಾಗಲಿದೆ ಎಂದು ಅಂದಾಜಿಸಲಾಗಿದೆ. ಶೇ 74ರಷ್ಟನ್ನು ಖಾಸಗಿಯವರು ಹಾಗೂ ಉಳಿದ 26ರಷ್ಟನ್ನು ಕೆಪಿಸಿಎಲ್ ಭರಿಸಲಿದೆ.
- ಅದಾನಿ ಪವರ್ ಲಿಮಿಟೆಡ್, ಜೆಎಸ್‌ಡಬ್ಲ್ಯು ಎನರ್ಜಿ, ಹಲ್ದಿಯಾ ಎನರ್ಜಿ ಕಂಪನಿ ಹಾಗೂ ಮೇಘಾ ಎಂಜಿನಿಯರಿಂಗ್ ಇನ್ಫ್ರಾಸ್ಟ್ರಕ್ಚರ್ ಲಿಮಿಟೆಡ್‌ನ ಪ್ರತಿನಿಧಿಗಳು ಈಗಾಗಲೇ ಗೋದ್ನಾಗೆ ಭೇಟಿ ನೀಡಿ ಸ್ಥಳ ಪರಿಶೀಲನೆ ನಡೆಸಿದ್ದಾರೆ.
- ಛತ್ತೀಸಗಢದ ಗೋದ್ನಾದಲ್ಲಿ ಈ ಯೋಜನೆಯನ್ನು ಆರಂಭಿಸುವ ಸಂಬಂಧ 2008ರಲ್ಲಿ ಆಗಿನ ಸರ್ಕಾರವು ಅಲ್ಲಿನ ಸರ್ಕಾರದೊಂದಿಗೆ ಒಪ್ಪಂದ ಮಾಡಿಕೊಂಡಿತ್ತು. ಇದಾದ ಬಳಿಕ ಭೂ ಸ್ವಾಧೀನ, ಕಲ್ಲಿದ್ದಲು ಗಣಿ ಹಂಚಿಕೆಯಲ್ಲಿ ಆದ ವಿಳಂಬ ಸೇರಿದಂತೆ ಹಲವು ಕಾರಣಗಳಿಂದ ಈ ಯೋಜನೆ ನನೆಗುದಿಯಲ್ಲಿತ್ತು. ಈಗ ಪೂರ್ವಭಾವಿ ಪ್ರಕ್ರಿಯೆಗಳು ಒಂದು ಹಂತಕ್ಕೆ ಬಂದಿದ್ದು, ಇದಕ್ಕೆ ಇದ್ದ ಬಹುತೇಕ ಅಡೆತಡೆಗಳು ನಿವಾರಣೆಯಾಗಿವೆ.
- ಈ ಯೋಜನೆಗಾಗಿ 1,016 ಎಕರೆ ಖಾಸಗಿ ಜಮೀನು ಹಾಗೂ 160 ಎಕರೆ ಸರ್ಕಾರಿ ಜಮೀನನ್ನು 2013ರಲ್ಲಿ ಸ್ವಾಧೀನಪಡಿಸಿಕೊಳ್ಳಲಾಗಿದೆ. ಇದಕ್ಕಾಗಿ ಸುಮಾರು ₹220 ಕೋಟಿ ಖರ್ಚಾಗಿದೆ.
- ಈ ಯೋಜನೆಗೆ ಅಗತ್ಯವಿರುವ ನೀರನ್ನು ಮಹಾನದಿಯಿಂದ ನೀಡಲು ಛತ್ತೀಸಗಢ ಸರ್ಕಾರ ಸಮ್ಮತಿಸಿದೆ. ಇದಕ್ಕೆ ಅಗತ್ಯವಿರುವ ಬ್ಯಾರೇಜ್ ನಿರ್ಮಿಸಲು ₹64 ಕೋಟಿ ವೆಚ್ಚವಾಗಿದೆ. ಇದೂ ಸೇರಿದಂತೆ ಗೋದ್ನಾದಲ್ಲಿ ಕಚೇರಿ ಆರಂಭ, ಸಿವಿಲ್ ಕಾಮಗಾರಿ, ಬ್ಯಾಂಕ್ ಖಾತರಿ ಇತ್ಯಾದಿಗಳಿಗೆ ಒಟ್ಟು ₹350 ಕೋಟಿ ವೆಚ್ಚ ಮಾಡಲಾಗಿದೆ.
- ಕಲ್ಲಿದ್ದಲು ಹಂಚಿಕೆ: ಗೋದ್ನಾ ಸಮೀಪದಲ್ಲೇ ಎರಡು ಕಲ್ಲಿದ್ದಲು ಗಣಿಗಳನ್ನು ಕೇಂದ್ರ ಸರ್ಕಾರವು 2019ರಲ್ಲಿ ಕೆಪಿಸಿಎಲ್‌ಗೆ ಹಂಚಿಕೆ ಮಾಡಿದೆ. 1,600 ಮೆಗಾವಾಟ್ ವಿದ್ಯುತ್ ಉತ್ಪಾದನೆಗಾಗಿ ವರ್ಷಕ್ಕೆ 70 ಲಕ್ಷ ಟನ್ ಕಲ್ಲಿದ್ದಲು ಬೇಕಾಗುತ್ತದೆ. 21 ಕೋಟಿ ಟನ್ ಕಲ್ಲಿದ್ದಲು ಅಲ್ಲಿ ಲಭ್ಯವಿದ್ದು, 30 ವರ್ಷಗಳವರೆಗೆ ಬಳಸಬಹುದು.
- ಯೂನಿಟ್‌ಗೆ ಎಷ್ಟು ದರ ಎಂಬುದನ್ನು ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗ (ಕೆಇಆರ್‌ಸಿ) ನಿಗದಿ ಮಾಡುತ್ತದೆ.

Dr. Rajkumar IAS/KAS Academy

# ಭೂಶಾಖದಿಂದ ವಿದ್ಯುತ್ ಸನ್ನಿಹಿತ

**ವಿದ್ಯುತ್ ಉತ್ಪಾದನೆ ಕ್ಷೇತ್ರದಲ್ಲಿ ಹೊಸ ಮೈಲಿಗಲ್ಲು ನೆಡಲು ಭಾರತ ಸಜ್ಜಾಗುತ್ತಿದೆ. ದೇಶದ ಮೊದಲ ವಾಣಿಜ್ಯ ಉದ್ದೇಶದ ಭೂಶಾಖ ವಿದ್ಯುತ್ ಸ್ಥಾವರದ ಆರಂಭ ಸನ್ನಿಹಿತವಾಗಿದೆ. ಬಿಸಿನೀರ ಬುಗ್ಗೆಗಳಿಗೆ ಹೆಸರುವಾಸಿಯಾಗಿರುವ ಲಡಾಖ್‌ನ ಪುಗಾ ಕಣಿವೆಯಲ್ಲಿ ಭೂಶಾಖ ವಿದ್ಯುತ್ ಸ್ಥಾವರಕ್ಕಾಗಿ ಕೊಳವೆ ಬಾವಿ ಕೊರೆಯುವ ಪ್ರಕ್ರಿಯೆ ಕೊನೆ ಹಂತ ತಲುಪಿದೆ. ಭೂಶಾಖವನ್ನು ಬಳಸಿಕೊಂಡು ವರ್ಷದ ಎಲ್ಲ ದಿನಗಳಲ್ಲೂ ಪರಿಸರಸ್ನೇಹಿಯಾದ ವಿದ್ಯುತ್ ಉತ್ಪಾದಿಸುವ ದಿನ ದೂರವಿಲ್ಲ ಎಂದು ಈ ಯೋಜನೆ ಅನುಷ್ಠಾನದ ಜವಾಬ್ದಾರಿ ಹೊತ್ತಿರುವ ಒಎನ್‌ಜಿಸಿ ಹೇಳಿದೆ**



ಲಡಾಖ್‌ನ ಪುಗಾ ಕಣಿವೆಯಲ್ಲಿ ಭೂಶಾಖದಿಂದ ವಿದ್ಯುತ್ ಉತ್ಪಾದಿಸುವ ಸ್ಥಾವರದ ಕಾಮಗಾರಿ ನಡೆಯುತ್ತಿದೆ ಚಿತ್ರ: ಒಎನ್‌ಜಿಸಿ ಎಕ್ಸ್ ಖಾತೆ

• ಸೂರ್ಯನಾರಾಯಣ ವಿ.

ಭೂಮಿಯ ಆಳದಲ್ಲಿರುವ ಶಾಖವನ್ನು (ಜಿಯೊಥರ್ಮಲ್) ಬಳಸಿ ವಿದ್ಯುತ್ ಉತ್ಪಾದನೆ ಮಾಡುವ ರಾಷ್ಟ್ರಗಳ ಸಾಲಿಗೆ ಭಾರತ ಶೀಘ್ರದಲ್ಲಿ ಸೇರ್ಪಡೆಯಾಗಲಿದೆ. ದೇಶದ ತುತ್ತ ತುದಿ, ಸಮುದ್ರ ಮಟ್ಟದಿಂದ 14 ಸಾವಿರ ಅಡಿ ಎತ್ತರದಲ್ಲಿರುವ ಲಡಾಖ್‌ನ ಪುಗಾ ಕಣಿವೆಯಲ್ಲಿ ದೇಶದ ಮೊದಲ ಭೂಶಾಖ ವಿದ್ಯುತ್ ಸ್ಥಾವರ ಆರಂಭಗೊಳ್ಳಲು ಇನ್ನು ಹೆಚ್ಚು ಸಮಯ ಬೇಡ. ಸರ್ಕಾರಿ ಸ್ವಾಮ್ಯದ ಒಎನ್‌ಜಿಸಿಯು (ತೈಲ ಮತ್ತು ನೈಸರ್ಗಿಕ ಅನಿಲ ನಿಗಮ) ಪುಗಾ ಕಣಿವೆಯಲ್ಲಿ ಭೂಮಿಯ ಅಡಿಯಲ್ಲಿರುವ ಬಿಸಿ ನೀರನ್ನು ಮೇಲಕ್ಕೆತ್ತುವುದಕ್ಕಾಗಿ ಕೊರೆಯುತ್ತಿರುವ ಕೊಳವೆ ಬಾವಿಯೊಂದರ ನಿರ್ಮಾಣ ಕಾಮಗಾರಿ ಅಂತಿಮ ಹಂತ ತಲುಪಿದೆ.

ಮೂಲಸೌಕರ್ಯಗಳಿಲ್ಲದ, ಸಂಪರ್ಕವೂ ದುಸ್ತರವಾಗಿರುವ ಕಡಿದಾದ ಹಿಮಾಲಯದ ಭೂಪ್ರದೇಶದಲ್ಲಿ ಸ್ವದೇಶಿ ತಾಂತ್ರಿಕತೆಯನ್ನು ಬಳಸಿಕೊಂಡು ವಿದ್ಯುತ್ ಸ್ಥಾವರವನ್ನು ನಿರ್ಮಿಸಲಾಗುತ್ತಿದ್ದು, ಇದು ದೇಶದ ಮೊದಲ ಭೂಶಾಖ ವಿದ್ಯುತ್ ಸ್ಥಾವರವಾಗಲಿದೆ ಎಂದು ಒಎನ್‌ಜಿಸಿ ಕೆಲವು ದಿನಗಳ ಹಿಂದೆ 'ಎಕ್ಸ್' ಮತ್ತು 'ಫೇಸ್‌ಬುಕ್'ನಲ್ಲಿ ಹೇಳಿದೆ. ಇಂಗಾಲ ಮುಕ್ತ ಗುರಿಯನ್ನು ಸಾಧಿಸುವ ಉದ್ದೇಶದಿಂದ ಪರಿಸರಸ್ನೇಹಿ ವಿದ್ಯುತ್ ಅನ್ನು ನಿರಂತರವಾಗಿ ಪೂರೈಸುವ ಸಾಮರ್ಥ್ಯ ಹೊಂದುವ ದಿಸೆಯಲ್ಲಿ ಭಾರತ ಹಾಕುತ್ತಿರುವ ಶ್ರಮವನ್ನು ಈ ಮೈಲಿಗಲ್ಲು ಪ್ರತಿಬಿಂಬಿಸುತ್ತದೆ ಎಂದು ಅದು ಹೇಳಿದೆ.

ಒಎನ್‌ಜಿಸಿಯ ಎನರ್ಜಿ ಸೆಂಟರ್ (ಒಇಸಿ), ಲಡಾಖ್‌ನ ಕೇಂದ್ರಾಡಳಿತ ಪ್ರದೇಶದ ಆಡಳಿತ ಮತ್ತು ಲೇಹ್‌ನ ಲಡಾಖ್ ಸ್ವಾಯತ್ತ ಪರ್ವತ ಅಭಿವೃದ್ಧಿ ಮಂಡಳಿಯ (ಎಲ್‌ಎಎಚ್‌ಡಿಸಿ) ಸಹಕಾರದೊಂದಿಗೆ ಈ ಯೋಜನೆಯನ್ನು ಅನುಷ್ಠಾನಗೊಳಿಸುತ್ತಿದ್ದು, ಭೂಶಾಖದಿಂದ ವಿದ್ಯುತ್ ಉತ್ಪಾದನೆಯಲ್ಲಿ ಪರಿಣತಿ ಹೊಂದಿರುವ ಐಸ್‌ಲ್ಯಾಂಡ್‌ನ ಜಿಯೊಸರ್ವೆ ಇಲಾಖೆಯು ಸ್ಥಾವರ ನಿರ್ಮಾಣಕ್ಕೆ ನೆರವಾಗುತ್ತಿದೆ.

2021ರ ಫೆಬ್ರುವರಿಯಲ್ಲಿ ಪುಗಾ ಕಣಿವೆಯಲ್ಲಿ ಸ್ಥಾವರ ನಿರ್ಮಾಣ ಸಂಬಂಧ ತಿಳಿವಳಿಕೆ ಪತ್ರಕ್ಕೆ (ಎಂಒಯು) ಸಹಿಹಾಕಲಾಗಿತ್ತು. ಯೋಜನೆ ಆರಂಭಗೊಂಡ ಒಂದು ವರ್ಷದಲ್ಲಿ ಕಾಮಗಾರಿ ಸ್ಥಗಿತಗೊಂಡಿತ್ತು. ಕೊಳವೆ ಬಾವಿ ಕೊರೆಯುವ ಯಂತ್ರೋಪಕರಣಗಳು ಹೆಚ್ಚು ಆಧುನಿಕವಾಗಿರದೇ ಇದ್ದುದು ಒಂದು ಕಾರಣವಾಗಿದ್ದರೆ, ಕೊಳವೆ ಬಾವಿ ಕೊರೆಯುತ್ತಿರುವ ಸಂದರ್ಭದಲ್ಲಿ ಭೂಮಿಯ ಆಳದಿಂದ ಬಂದ ವಿವಿಧ ಖನಿಜಯುಕ್ತ ಬಿಸಿ ದ್ರವ ಕಣಿವೆಯಲ್ಲಿ ಹರಿಯುತ್ತಿದ್ದ ನೀರನ್ನು ಸೇರಿತ್ತು. ಇದರಿಂದ ಜಲಮಾಲಿನ್ಯ ಉಂಟಾಗುವ ಆತಂಕವನ್ನು ಸ್ಥಳೀಯ ಪರಿಸರವಾದಿಗಳು ವ್ಯಕ್ತಪಡಿಸಿದ್ದರು. ಈ ಬಗ್ಗೆ ಜಿಲ್ಲಾಧಿಕಾರಿಗಳಿಗೂ ದೂರು ನೀಡಿದ್ದರು. ಎರಡು ವರ್ಷಗಳ ಬಳಿಕ, 2024ರಲ್ಲಿ ಒಎನ್‌ಜಿಸಿ ಮತ್ತೆ ಕೊಳವೆಬಾವಿ ಕೊರೆಯುವ ಕೆಲಸವನ್ನು ಆರಂಭಿಸಿತ್ತು.

## ಪ್ರಯೋಜನ ಏನು?

ಭೂಶಾಖದಿಂದ ತಯಾರಿಸುವ ವಿದ್ಯುತ್ ಪರಿಸರ ಸ್ನೇಹಿ. ನವೀಕರಿಸಬಹುದಾದ್ದು. ಭೂಮಿಯ ಆಳದಲ್ಲಿರುವ ಬಿಸಿನೀರನ್ನು ಬಳಸಿ ವರ್ಷದ 365 ದಿನವೂ ವಿದ್ಯುತ್ ಉತ್ಪಾದಿಸಬಹುದು. ಸ್ಥಾವರವು ಹೆಚ್ಚು ಇಂಗಾಲವನ್ನು ಉಗುಳುವುದಿಲ್ಲ. ಹೀಗಾಗಿ ಪರಿಸರದ ಮೇಲಿನ ಹಾನಿ ಕಡಿಮೆ. ಭೂಮಿಯ ಆಳದಲ್ಲಿರುವ ಶಾಖವನ್ನು ಬಳಸುವುದರಿಂದ ಭೂಮಿಯಲ್ಲಿ ಮಳೆ, ಚಳಿ ಸೇರಿದಂತೆ ವಾತಾವರಣದ ತಾಪಮಾನ ಯಾವ ರೀತಿ ಇದ್ದರೂ ವಿದ್ಯುತ್ ಉತ್ಪಾದನೆಯ ಮೇಲೆ ಪರಿಣಾಮ ಬೀರುವುದಿಲ್ಲ. ಸ್ಥಾವರ ನಿರ್ಮಾಣಕ್ಕೆ ಕಡಿಮೆ ಜಾಗ ಸಾಕು. ವಿದ್ಯುತ್ ಉತ್ಪಾದನೆಯ ವೆಚ್ಚವೂ ಕಡಿಮೆ.

## ದೇಶಕ್ಕಿದೆ ಸಾಮರ್ಥ್ಯ

ಭೂಶಾಖದಿಂದ ಭಾರಿ ಪ್ರಮಾಣದಲ್ಲಿ ವಿದ್ಯುತ್ ಉತ್ಪಾದನೆ ಮಾಡುವ ಸಾಮರ್ಥ್ಯ ಭಾರತಕ್ಕೆ ಇದೆ. ಈ ಬಗ್ಗೆ ಜಿಯಾಲಜಿಕಲ್ ಸರ್ವೆ ಇಂಡಿಯಾವು ದೇಶದಾದ್ಯಂತ ಇರುವ 381 ಸ್ಥಳಗಳ ಅಧ್ಯಯನ ನಡೆಸಿದ್ದು, 2022ರಲ್ಲಿ 'ಜಿಯೊಥರ್ಮಲ್ ಅಟ್ಲಾಸ್ ಆಫ್ ಇಂಡಿಯಾ' ಎಂಬ ವರದಿ ಪ್ರಕಟಿಸಿದೆ. ಅದರ ಪ್ರಕಾರ, ಭಾರತಕ್ಕೆ 10,600 ಮೆಗಾ ವಾಟ್‌ನಷ್ಟು ಭೂಶಾಖ ವಿದ್ಯುತ್ ಉತ್ಪಾದಿಸುವ ಸಾಮರ್ಥ್ಯ ಇದೆ.

## ಇದೇ ಮೊದಲಲ್ಲ

ಲಡಾಖ್‌ನಲ್ಲಿ ನಿರ್ಮಾಣವಾಗುತ್ತಿರುವುದು ದೇಶದ ಮೊದಲ ಭೂಶಾಖ ವಿದ್ಯುತ್ ಸ್ಥಾವರವೇನಲ್ಲ. ತೆಲಂಗಾಣದ ಭದ್ರಾದ್ರಿ ಕೋತ್ತಗುಡೆಂ ಜಿಲ್ಲೆಯ ಮಣುಗೂರು ಪ್ರದೇಶದಲ್ಲಿರುವ ಸರ್ಕಾರಿ ಸ್ವಾಮ್ಯದ ಸಿಂಗರೇಣಿ ಕಾಲರೀಸ್ ಕಲ್ಲಿದ್ದಲು ಕಂಪನಿಯು 20 ಕಿಲೊ ವಾಟ್ ಸಾಮರ್ಥ್ಯದ ಭೂಶಾಖ ವಿದ್ಯುತ್ ಸ್ಥಾವರವನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸಿದೆ

## ಏನಿದು ಯೋಜನೆ?

ಭೂ ಮೇಲ್ಮೈನಿಂದ ಕೆಳಗಡೆ ಶಿಲಾಪದರದ ಅಡಿಯಲ್ಲಿ 200 ಡಿಗ್ರಿ ಸೆಲ್ಸಿಯಸ್‌ಗಿಂತಲೂ ಹೆಚ್ಚು ಬಿಸಿಯಾಗಿರುವ ನೀರಿನ (ದ್ರವ ಎಂದೂ ಕರೆಯಲಾಗುತ್ತದೆ) ದೊಡ್ಡ ಸಂಗ್ರಹವೇ ಇದೆ. ಆ ಕಾದ ನೀರು/ದ್ರವವನ್ನು ಮೇಲಕ್ಕೆತ್ತಿ ಅದರಿಂದ ವಿದ್ಯುತ್ ಉತ್ಪಾದಿಸುವುದು ಯೋಜನೆಯ ಉದ್ದೇಶ. ನೈಸರ್ಗಿಕವಾದ ಬಿಸಿನೀರ ಚಿಲುಮೆಗಳು ಕಂಡು ಬರುವ ಪುಗಾ ಕಣಿವೆಯಲ್ಲಿ ಮೊದಲ ಹಂತದಲ್ಲಿ 1,000 ಮೀಟರ್ ಆಳದ ಎರಡು ಕೊಳವೆ ಬಾವಿಗಳನ್ನು ಕೊರೆದು ಒಂದು ಮೆಗಾ ವಾಟ್‌ನಷ್ಟು ವಿದ್ಯುತ್ ಅನ್ನು ಪ್ರಾಯೋಗಿಕವಾಗಿ ಉತ್ಪಾದಿಸುವ ಯೋಜನೆ ಒಎನ್‌ಜಿಸಿಯದ್ದು. ಎರಡನೇ ಹಂತದಲ್ಲಿ ಕೊಳವೆ ಬಾವಿಯನ್ನು ಇನ್ನಷ್ಟು ಆಳದವರೆಗೆ ಕೊರೆಯಲಾಗುತ್ತದೆ. ಮೂರನೇ ಹಂತದಲ್ಲಿ ವಾಣಿಜ್ಯ ಉದ್ದೇಶದ ಸ್ಥಾವರವನ್ನು ನಿರ್ಮಿಸಿ, 240 ಮೆಗಾ ವಾಟ್‌ನಷ್ಟು ಪರಿಸರಸ್ನೇಹಿ ವಿದ್ಯುತ್ ಉತ್ಪಾದಿಸುವ ಗುರಿಯನ್ನು ಹೊಂದಲಾಗಿದೆ.

## ಪರಿಸರವಾದಿಗಳ ಎಚ್ಚರಿಕೆ

ಭೂಮಿಯ ಆಳದಿಂದ ಬಿಸಿನೀರು ಅಥವಾ ಖನಿಜಯುಕ್ತ ದ್ರವವನ್ನು ಮೇಲಕ್ಕೆತ್ತಿ ವಿದ್ಯುತ್ ಉತ್ಪಾದನೆಯನ್ನು ಅತ್ಯಂತ ವೈಜ್ಞಾನಿಕವಾಗಿ ನಡೆಸದೇ ಇದ್ದರೆ ಪರಿಸರಕ್ಕೆ ಹಾನಿಯಾಗಲಿದೆ ಎಂದು ಎಚ್ಚರಿಸುತ್ತಾರೆ ಪರಿಸರವಾದಿಗಳು. ಲಡಾಖ್‌ನ ಪುಗಾ ಕಣಿವೆಯಲ್ಲಿ ಕಾಮಗಾರಿ ತಾತ್ಕಾಲಿಕವಾಗಿ ಸ್ಥಗಿತಗೊಳ್ಳಲು ಇದು ಕೂಡ ಒಂದು ಕಾರಣ. ಪುಗಾ ಕಣಿವೆಯು ಸೂಕ್ಷ್ಮ ಪರಿಸರವನ್ನು ಹೊಂದಿದ್ದು, ಸ್ಥಳೀಯ ಪಕ್ಷಿಗಳಲ್ಲದೆ, ವಲಸೆ ಬರುವ ಪಕ್ಷಿಗಳೂ ಇಲ್ಲಿ ಕಾಣಸಿಗುತ್ತವೆ. ಕೊಳವೆ ಬಾವಿ ಕೊರೆಯುವಾಗ ಭೂಮಿಯ ಆಳದ ಖನಿಜಯುಕ್ತ ದ್ರವವು ಕಣಿವೆಯ ನೀರಿನೊಂದಿಗೆ ಸೇರಿತ್ತು. ಇದು ಸ್ಥಳೀಯರ ಆಕ್ಷೇಪಕ್ಕೆ ಕಾರಣವಾಗಿತ್ತು.


## ವಿದ್ಯುತ್ ಉತ್ಪಾದನೆ ಹೇಗೆ?


ಮೊದಲೇ ಹೇಳಿದಂತೆ, ಭೂಮಿಯ ಒಳಗಡೆ ಸಂಗ್ರಹವಾಗಿರುವ ಬಿಸಿ ನೀರು ಅಥವಾ ಬಿಸಿ ದ್ರವವನ್ನು ಬಳಸಿ ವಿದ್ಯುತ್ ತಯಾರಿಸಲಾಗುತ್ತದೆ. ಬಿಸಿ ನೀರು ಅಥವಾ ದ್ರವವನ್ನು ಕೊಳವೆ ಬಾವಿ ಮೂಲಕ ಮೇಲಕ್ಕೆ ಎತ್ತಿ, ಅದನ್ನು ತಂಪಾಗಿಸಿದಾಗ ಹಬೆ ಉಂಟಾಗುತ್ತದೆ. ಅದನ್ನು ಟರ್ಬೈನ್‌ಗೆ ಹಾಯಿಸಲಾಗುತ್ತದೆ. ಟರ್ಬೈನ್ ತಿರುಗುವಿಕೆಯಿಂದ ವಿದ್ಯುತ್ ಉತ್ಪಾದನೆಯಾಗುತ್ತದೆ. ಆ ಹಬೆಯನ್ನು ಮತ್ತೆ ತಂಪಾಗಿಸಿದಾಗ ಅದು ದ್ರವ ರೂಪಕ್ಕೆ ಪರಿವರ್ತನೆಯಾಗುತ್ತದೆ. ಅದನ್ನು ಮತ್ತೆ ಭೂಮಿಗೆ ಮರುಪೂರಣ ಮಾಡಲಾಗುತ್ತದೆ. ಭೂಶಾಖದಿಂದ ವಿದ್ಯುತ್ ಉತ್ಪಾದನೆ ಮಾಡುವ ಮೂರು ವಿಧಾನಗಳು ಚಾಲ್ತಿಯಲ್ಲಿವೆ.

**1. ಶುಷ್ಕ ಹಬೆ (ಡ್ರೈ ಸ್ಟೀಮ್) ವಿದ್ಯುತ್ ಸ್ಥಾವರ:** ಭೂಮಿಯ ಒಳಗಿರುವ ಕಾದ ದ್ರವವನ್ನು ಮೇಲಕ್ಕೆ ತರುವಾಗ ಅದು ಬಹುತೇಕ ಹಬೆಯಾಗಿ ಪರಿವರ್ತನೆಯಾಗುತ್ತದೆ. ಈ ವಿಧಾನದಲ್ಲಿ ಅದನ್ನೇ ನೇರವಾಗಿ ಟರ್ಬೈನ್‌ಗೆ ಹಾಯಿಸಲಾಗುತ್ತದೆ. ಜನರೇಟರ್ ಚಾಲೂ ಆಗಿ ವಿದ್ಯುತ್ ಉತ್ಪಾದನೆಯಾಗುತ್ತದೆ. ಇದು ಅತ್ಯಂತ ಹಳೆಯ ತಂತ್ರಜ್ಞಾನ. ಇಟಲಿಯಲ್ಲಿ ಮೊದಲ ಬಾರಿಗೆ ಇದನ್ನೇ ಅಳವಡಿಸಿಕೊಳ್ಳಲಾಗಿತ್ತು. ಈಗಲೂ ಇದು ಬಳಕೆಯಲ್ಲಿದ್ದು, ಕ್ಯಾಲಿಫೋರ್ನಿಯಾದ ನೈಸರ್ಗಿಕ ಬಿಸಿ ನೀರ ಚಿಲುಮೆಗಳಲ್ಲಿ ಇದೇ ವಿಧಾನದಿಂದ ವಿದ್ಯುತ್ ಉತ್ಪಾದಿಸಲಾಗುತ್ತದೆ

**2. ಫ್ಲ್ಯಾಷ್ ಸ್ಟೀಮ್ ವಿದ್ಯುತ್ ಸ್ಥಾವರ:** ಈಗಿನ ಭೂಶಾಖ ವಿದ್ಯುತ್ ಸ್ಥಾವರಗಳಲ್ಲಿ ಈ ತಂತ್ರಜ್ಞಾನವನ್ನು ಬಳಸಲಾಗುತ್ತಿದೆ. ಇದರಲ್ಲಿ 182 ಡಿಗ್ರಿ ಸೆಲ್ಸಿಯಸ್‌ಗಿಂತಲೂ ಹೆಚ್ಚು ಬಿಸಿಯಾಗಿರುವ ನೀರನ್ನು ಭೂಮಿಯ ಆಳದಿಂದ ಮೇಲಕ್ಕೆತ್ತಿ (ಅತ್ಯಂತ ಹೆಚ್ಚು ಒತ್ತಡದ ವಾತಾವರಣದಲ್ಲಿ ಇದು ಮೇಲಕ್ಕೆ ಬರುತ್ತದೆ), ಭೂಮಿಯ ಮೇಲ್ಮೈನಲ್ಲಿ ಸ್ಥಾಪಿಸಲಾಗಿರುವ ಕಡಿಮೆ ಒತ್ತಡ ವಿರುವ ಟ್ಯಾಂಕ್‌ಗೆ ಹರಿಸಲಾಗುತ್ತದೆ. ಒತ್ತಡದಲ್ಲಾಗುವ ಬದಲಾವಣೆಯಿಂದಾಗಿ ದ್ರವವು ತಕ್ಷಣ ಆವಿಯಾಗಿ ಪರಿವರ್ತನೆಯಾಗುತ್ತದೆ. ಈ ಆವಿಯನ್ನು ಟರ್ಬೈನ್‌ಗೆ ಹಾಯಿಸಲಾಗುತ್ತದೆ. ಒಂದು ವೇಳೆ ಟ್ಯಾಂಕ್‌ನಲ್ಲಿ ಬಿಸಿ ನೀರು/ದ್ರವ ಉಳಿದರೆ ಮತ್ತೊಂದು ಟ್ಯಾಂಕ್‌ಗೆ ಅದನ್ನು ಹರಿಸಿ ಮತ್ತೆ ಅದು ಹಬೆಯಾಗಿ ಪರಿವರ್ತನೆಯಾಗುವಂತೆ ಮಾಡಲಾಗುತ್ತದೆ

**3. ಬೈನರಿ ಸೈಕಲ್ ವಿದ್ಯುತ್ ಸ್ಥಾವರ:** ಭೂಶಾಖ ಸಂಪನ್ಮೂಲಗಳ (ನೀರು/ದ್ರವ) ಉಷ್ಣತೆ ಕಡಿಮೆ ಇದ್ದ ಸಂದರ್ಭದಲ್ಲಿ ಈ ತಂತ್ರಜ್ಞಾನವನ್ನು ಬಳಸಲಾಗುತ್ತದೆ. ಈ ವಿಧಾನ ಅಳವಡಿಸಿಕೊಳ್ಳುವ ಸ್ಥಾವರವು ಮೊದಲೆರಡು ತಂತ್ರಜ್ಞಾನ ಹೊಂದಿರುವ ಸ್ಥಾವರಗಳಿಗಿಂತ ಭಿನ್ನವಾಗಿರುತ್ತದೆ. ಈ ವಿಧಾನದಲ್ಲಿ ಭೂಮಿಯ ಆಳದಿಂದ ಮೇಲಕ್ಕೆತ್ತಲಾದ ನೀರು ಅಥವಾ ದ್ರವ ನೇರವಾಗಿ ಟರ್ಬೈನ್‌ನ ಸಂಪರ್ಕಕ್ಕೆ ಬರುವುದಿಲ್ಲ. ಕಡಿಮೆ ಉಷ್ಣತೆ ಹೊಂದಿರುವ (180 ಡಿಗ್ರಿ ಸೆಲ್ಸಿಯಸ್‌ಗಿಂತ ಕಡಿಮೆ ಉಷ್ಣತೆಯ) ನೀರು/ದ್ರವವನ್ನು ಮೇಲಕ್ಕೆ ತಂದು, ನೀರಿಗಿಂತ ಕಡಿಮೆ ಕುದಿಯುವ ಬಿಂದು (boiling point) ಹೊಂದಿರುವ ಮತ್ತೊಂದು (ಎರಡನೇ) ದ್ರವದೊಂದಿಗೆ ಬೆರೆಯುವಂತೆ ಮಾಡಲಾಗುತ್ತದೆ. ಈ ಬೆರೆಯುವ ಪ್ರಕ್ರಿಯೆಯು ಹಬೆಯನ್ನು ಸೃಷ್ಟಿಸುತ್ತದೆ. ಆ ಹಬೆಯನ್ನು ಟರ್ಬೈನ್‌ಗೆ ಹಾಯಿಸಲಾಗುತ್ತದೆ




## ಶತಮಾನದ ಇತಿಹಾಸ

ಭೂಶಾಖ ಬಳಸಿ ವಿದ್ಯುತ್ ಉತ್ಪಾದನೆ ಮಾಡುವ ತಂತ್ರಜ್ಞಾನ ಹೊಸದೇನಲ್ಲ. ಇದಕ್ಕೆ ಒಂದೂಕಾಲು ಶತಮಾನದ ಇತಿಹಾಸವಿದೆ. 1904ರಲ್ಲಿ ಇಟಲಿಯ ಲಾರ್ಡೆರೆಲ್ಲೊ ಎಂಬಲ್ಲಿ ಮೊದಲ ಬಾರಿಗೆ ಭೂಶಾಖ ವಿದ್ಯುತ್ ಸ್ಥಾವರ ಸ್ಥಾಪಿಸಲಾಗಿತ್ತು. ಪ್ರಸ್ತುತ ಜಗತ್ತಿನ 30 ರಾಷ್ಟ್ರಗಳಲ್ಲಿ ಭೂಶಾಖದಿಂದ ವಿದ್ಯುತ್ ಉತ್ಪಾದಿಸಲಾಗುತ್ತಿದೆ. ಥಿಂಕ್‌ಜಿಯೊಎನರ್ಜಿ.ಕಾಂ ವರದಿಯ ಪ್ರಕಾರ, 2024ರ ಡಿಸೆಂಬರ್ ಅಂತ್ಯಕ್ಕೆ ಭೂಶಾಖದಿಂದ 16,876 ಮೆಗಾ ವಾಟ್‌ನಷ್ಟು ವಿದ್ಯುತ್ ಉತ್ಪಾದಿಸುವ ಸಾಮರ್ಥ್ಯವನ್ನು ಜಗತ್ತು ಹೊಂದಿತ್ತು. ಅಮೆರಿಕವು ಜಗತ್ತಿನಲ್ಲೇ ಭೂಶಾಖದಿಂದ ಅತಿ ಹೆಚ್ಚು ವಿದ್ಯುತ್ ಉತ್ಪಾದಿಸುವ ರಾಷ್ಟ್ರ. 2024ರ ಡಿಸೆಂಬರ್ ವೇಳೆಗೆ ಅದು ಭೂಶಾಖದಿಂದ 3,937 ಮೆಗಾವಾಟ್‌ನಷ್ಟು ವಿದ್ಯುತ್ ಉತ್ಪಾದಿಸುವ ಸಾಮರ್ಥ್ಯ ಹೊಂದಿತ್ತು ಎಂದು ಥಿಂಕ್‌ಜಿಯೊಎನರ್ಜಿ.ಕಾಂ ತನ್ನ ವರದಿಯಲ್ಲಿ ತಿಳಿಸಿದೆ. ಅಮೆರಿಕದ ಇಂಧನ ಇಲಾಖೆ ಪ್ರಕಾರ, ದೇಶದಲ್ಲಿ ಭೂಶಾಖದಿಂದ ಸದ್ಯ ನಾಲ್ಕು ಗಿಗಾ ವಾಟ್‌ನಷ್ಟು ವಿದ್ಯುತ್ ಉತ್ಪಾದಿಸಲಾಗುತ್ತಿದೆ.

ಪುಗಾ ಕಣಿವೆ ಯೋಜನೆಯಲ್ಲಿ ಭಾರತಕ್ಕೆ ನೆರವಾಗುತ್ತಿರುವ ಐಸ್‌ಲ್ಯಾಂಡ್ ತನ್ನ ಅಗತ್ಯಕ್ಕೆ ಬೇಕಾದ ಒಟ್ಟು ವಿದ್ಯುತ್‌ನಲ್ಲಿ ಶೇ 25ರಷ್ಟನ್ನು ಭೂಶಾಖದಿಂದಲೇ ಉತ್ಪಾದಿಸುತ್ತಿದೆ.

## ಪದ

ಎಡದಿಂದ ಬಲಕ್ಕೆ

1.ದೂರದ ವಸ್ತುಗಳನ್ನು ನೋಡುವ ದುರ್ಬೀನು (5)
4.ಈತ ಚಿನ್ನದ ವ್ಯಾಪಾರಿ (3)
5.ಮಾತು ಕೇಳುತ್ತಿರುವ ಸೋದರ ಮಾವ (3)
6.ಗರ ಬಡಿದಂತಿರುವ ಗಾವಿಲ (3)
8.ನಿಬಿಡತೆಗೊಂದು ಪರ್ಯಾಯ ಪದ (3)
9.ಒಂದು ಗೊತ್ತಾದ ಉದ್ದೇಶಕ್ಕಾಗಿ ರಚಿತವಾದ ಸದ್ಯಸರ ಗುಂಪು (3)
12.ಆತಂಕ ಹುಟ್ಟಿಸಿದ ಕೊಲೆಗಾರ (3)
15.ಪೋಲಕ ಧರಿಸಿದವಳ ಕೆನ್ನೆ (3)

ಮೇಲಿಂದ ಕೆಳಕ್ಕೆ

1.ರಾಯಭಾರಿ ವಾಸಸ್ಥಾನ
2.ಈತ ಕಡುಬಡವ
3.ಅರ್ಧ ಚಂದ್ರಾಕೃತಿಯ ರಚನೆಯಿದ
4.ಆನೆಗಳ ನಾಯಕ
7.ಮಾತಿನಲ್ಲೇ ಹನುಮಂತ ಕಾಣಿಸುತ್ತಿದ್ದಾನಲ್ಲಾ!
8.ಸದ್ಯದ ಸಮಯ
10.ಮಿಡಿಯಲ್ಲಿರುವ ಒಯ್ಯಾರಿ
11.ನೆರೆಮನೆಯವ ಸೇರಿರುವ ಜೈಲು

## ❖ ರಷ್ಯಾದಿಂದ ಖರೀದಿ ನಿಲ್ಲಿಸಿದರೆ ಕಷ್ಟ

- ರಷ್ಯಾದ ಕಚ್ಚಾ ತೈಲದ ಅತಿದೊಡ್ಡ ಬಳಕೆದಾರರಾಗಿ ರುವ ಭಾರತದ ತೈಲ ಸಂಸ್ಕರಣಾ ಕಂಪನಿಗಳು, ಅಲ್ಲಿಂದ ಕಚ್ಚಾ ತೈಲ ಖರೀದಿಸದೆಯೂ ತಮ್ಮ ವಹಿವಾಟು ಮುಂದುವರಿಸುವುದು ತಾಂತ್ರಿಕವಾಗಿ ಸಾಧ್ಯವಿದೆ ಎಂದು ತಜ್ಞರು ಹೇಳಿದ್ದಾರೆ. ಆದರೆ ಹೀಗೆ ಮಾಡುವ ಮೊದಲು ಅವು ಆರ್ಥಿಕವಾಗಿ ಬಹಳಷ್ಟು ಹೊಂದಾಣಿಕೆಗಳಿಗೆ ಸಿದ್ಧವಾಗಬೇಕಿದೆ.
- ರಷ್ಯಾದ ಕಚ್ಚಾ ತೈಲವನ್ನು ಸಂಸ್ಕರಿಸಿದಾಗ ಹೆಚ್ಚಿನ ಪ್ರಮಾಣದಲ್ಲಿ ಪೆಟ್ರೋಲ್, ಡೀಸೆಲ್‌ನಂತಹ ಇಂಧನ ಲಭ್ಯವಾಗುತ್ತದೆ.
- **ಭಾರತದ ಸಂಸ್ಕರಣಾ ಕಂಪನಿಗಳು ಖರೀದಿಸುತ್ತಿರುವ ಒಟ್ಟು ಕಚ್ಚಾ ತೈಲದಲ್ಲಿ ರಷ್ಯಾದ ಕಚ್ಚಾ ತೈಲದ ಪಾಲು ಶೇ 38ರಷ್ಟು ಇದೆ.** ಇದರ ಬದಲು ಬೇರೆಡೆಗಳಿಂದ ಕಚ್ಚಾ ತೈಲ ಖರೀದಿಸಿದರೆ ಸಂಸ್ಕರಣೆಯ ನಂತರ ಸಿಗುವ ಇಂಧನದ ಪ್ರಮಾಣ ಕಡಿಮೆ ಆಗುತ್ತದೆ ಎಂದು ಕೆಪ್ಲರ್ ಸಂಸ್ಥೆ ಹೇಳಿದೆ.
- ಜುಲೈ ತಿಂಗಳಲ್ಲಿ ಭಾರತವು ರಷ್ಯಾದಿಂದ ಪ್ರತಿದಿನ 16 ಲಕ್ಷ ಬ್ಯಾರೆಲ್ ಕಚ್ಚಾ ತೈಲವನ್ನು ಖರೀದಿಸಿದೆ. ದೊಡ್ಡ ಮಟ್ಟದ ರಿಯಾಯಿತಿ ಹಾಗೂ ಭಾರತದ ಸಂಸ್ಕರಣಾ ವ್ಯವಸ್ಥೆಗೆ ಸರಿಹೊಂದುವ ಕಾರಣದಿಂದಾಗಿ ರಷ್ಯಾದಿಂದ ಉರಲ್ ಕಚ್ಚಾ ತೈಲವನ್ನು ಖರೀದಿಸುವುದು ಹೆಚ್ಚಳ ಕಂಡಿದೆ ಎಂದು ಕೆಪ್ಲರ್ ವರದಿಯು ತಿಳಿಸಿದೆ.
- ‘ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯ ನೀಡಿರುವ ದತ್ತಾಂಶದ ಪ್ರಕಾರ, ಬೇರೆಡೆಗಳಿಂದ ಖರೀದಿಸುವ ಕಚ್ಚಾ ತೈಲದ ಬೆಲೆಯು ರಷ್ಯಾದಿಂದ ಖರೀದಿಸಿರುವ ಕಚ್ಚಾ ತೈಲದ ಬೆಲೆಗಿಂತ ಬ್ಯಾರೆಲ್‌ಗೆ 5 ಡಾಲರ್‌ನಷ್ಟು ಹೆಚ್ಚು. ರಷ್ಯಾದ ಬದಲು ಪ್ರತಿದಿನ 18 ಬ್ಯಾರೆಲ್‌ನಷ್ಟು ಕಚ್ಚಾ ತೈಲವನ್ನು ಬೇರೆ ಮೂಲಗಳಿಂದ ಖರೀದಿಸಿದರೆ ವಾರ್ಷಿಕ ಗರಿಷ್ಠ 5 ಬಿಲಿಯನ್ ಡಾಲರ್ (ಅಂದಾಜು ₹43 ಸಾವಿರ ಕೋಟಿ) ಹೆಚ್ಚುವರಿ ಪಾವತಿ ಮಾಡಬೇಕಾಗುತ್ತದೆ’ ಎಂದು ಹೇಳಿದೆ.

## ❖ ‘ಇ.ವಿ ಬಳಕೆ ಹೆಚ್ಚಲು ಚಾರ್ಜಿಂಗ್ ಕೇಂದ್ರ ಅಗತ್ಯ’

- ವಿದ್ಯುತ್ ಚಾಲಿತ ವಾಹನ ಗಳ ಬಳಕೆ ತ್ವರಿತವಾಗಿ ಹೆಚ್ಚಳ ಕಾಣುವಲ್ಲಿ ಸಾರ್ವಜನಿಕ ಚಾರ್ಜಿಂಗ್ ಕೇಂದ್ರಗಳ ಸ್ಥಾಪನೆಯು ಪ್ರಮುಖ ಪಾತ್ರ ವಹಿಸಲಿದೆ, ಇವುಗಳ ಸಂಖ್ಯೆ ಹೆಚ್ಚಬೇಕಿದೆ.
- ಪ್ರಸಕ್ತ ಆರ್ಥಿಕ ವರ್ಷ ದಲ್ಲಿ ಕಂಪನಿಯು ತನ್ನ ಮೊದಲ ವಿದ್ಯುತ್ ಚಾಲಿತ ವಾಹನ ಇ-ವಿಟಾರಾ ಬಿಡುಗಡೆ ಮಾಡಲಿದೆ. ಗ್ರಾಹಕರು ವಿದ್ಯುತ್ ಚಾಲಿತ ವಾಹನಗಳನ್ನು (ಇ.ವಿ) ಕುಟುಂಬದ ಪ್ರಾಥಮಿಕ ಕಾರು ಎಂದು ಪರಿಗಣಿಸದ ಕಾರಣಕ್ಕೆ ಈ ವಿಭಾಗವು ಸಾಕಷ್ಟು ಬೆಳವಣಿಗೆ ಕಾಣುತ್ತಿಲ್ಲ. ಒಂದು ಕಾರನ್ನು ಹೊಂದಲು ಬಯಸುವ ವ್ಯಕ್ತಿ ತನ್ನ ಮೊದಲ ಕಾರು ವಿದ್ಯುತ್‌ಚಾಲಿತ ವಾಹನವಾಗಲು ಬಯಸುವುದಿಲ್ಲ.
- ಹೀಗಾಗಿ, ವಾಹನ ತಯಾರಿಕಾ ಕಂಪನಿಗಳು 500 ಕಿ.ಮೀ ರೇಂಜ್ ನೀಡುವ ಕಾರುಗಳನ್ನು ತಯಾರಿಸಬೇಕಿದೆ. ಜೊತೆಗೆ ಸಾರ್ವಜನಿಕ ಚಾರ್ಜಿಂಗ್ ಕೇಂದ್ರಗಳನ್ನು ಸ್ಥಾಪಿಸಬೇಕಿದೆ. ಮಾರುತಿ ಸುಜುಕಿಯು 100 ನಗರಗಳಲ್ಲಿ ಚಾರ್ಜಿಂಗ್ ಕೇಂದ್ರಗಳನ್ನು ಸ್ಥಾಪನೆ ಮಾಡುತ್ತಿದೆ. ಆದರೆ, ಹೆದ್ದಾರಿಗಳಲ್ಲಿ ಜಾರ್ಜಿಂಗ್ ಕೇಂದ್ರಗಳ ಕೊರತೆಯಿದೆ ಎಂದು ಹೇಳಿದ್ದಾರೆ.

Dr. Rajkumar IAS/KAS Academy

## ❖ ನೌಕಾಪಡೆ: 'ಉದಯಗಿರಿ' , 'ಹಿಮಗಿರಿ' ಸೇರ್ಪಡೆ 26ಕ್ಕೆ

- ರಹಸ್ಯ ಕಾರ್ಯಾಚರಣೆ ಉದ್ದೇಶದ 'ಉದಯಗಿರಿ' ಹಾಗೂ 'ಹಿಮಗಿರಿ' ಯುದ್ಧನೌಕೆಗಳನ್ನು ವಿಶಾಖಪಟ್ಟಣ ದಲ್ಲಿ ಆ.26ಕ್ಕೆ ನಡೆಯುವ ಕಾರ್ಯಕ್ರಮದಲ್ಲಿ ಏಕಕಾಲಕ್ಕೆ ನೌಕಾಪಡೆಗೆ ಸೇರ್ಪಡೆ ಮಾಡಲಾಗುವುದು.
- 'ಪ್ರಾಜೆಕ್ಟ್ 17ಎ' ಭಾಗವಾಗಿ ಈ ನೌಕೆಗಳನ್ನು ನಿರ್ಮಿಸಲಾಗಿದೆ.
- ಈ ಯೋಜನೆ ಭಾಗವಾಗಿ ನಿರ್ಮಿಸಿರುವ ಮೊದಲ ಯುದ್ಧನೌಕೆ 'ನೀಲಗಿರಿ' ಯನ್ನು ಜನವರಿಯಲ್ಲಿ ಮುಂಬೈನಲ್ಲಿ ನಡೆದ ಕಾರ್ಯಕ್ರಮ ದಲ್ಲಿ ನೌಕಾಪಡೆಗೆ ಸೇರ್ಪಡೆ ಮಾಡಲಾಗಿತ್ತು. ಈ ಯುದ್ಧನೌಕೆ ಯನ್ನು ಮಜಗಾಂವ್ ಡಾಕ್ ಶಿಪ್ ಬಿಲ್ಡರ್ಸ್ ಲಿಮಿಟೆಡ್ (ಎಂಡಿಎಲ್) ನಿರ್ಮಿಸಿದೆ.
- ಇದೇ ಶ್ರೇಣಿಯ ಎರಡನೇ ಯುದ್ಧನೌಕೆ 'ಉದಯಗಿರಿ' ಯನ್ನು ಎಂಡಿಎಲ್ ನಿರ್ಮಿಸಿದ್ದು, ಜುಲೈ 1ರಂದು ನೌಕಾಪಡೆಗೆ ಹಸ್ತಾಂತರಿಸಲಾಗಿತ್ತು.
- ಯುದ್ಧನೌಕೆ 'ಹಿಮಗಿರಿ' ಯನ್ನು ಕೋಲ್ಕತ್ತದ ಗಾರ್ಡನ್ ರೀಚ್ ಶಿಪ್ ಬಿಲ್ಡರ್ಸ್ ಆ್ಯಂಡ್ ಎಂಜಿನಿಯರ್ಸ್ ಕಂಪನಿ ನಿರ್ಮಿಸಿದೆ.

## ❖ ಟರ್ಕಿ: 6.1ರಷ್ಟು ತೀವ್ರತೆಯ ಭೂಕಂಪನ

- ಟರ್ಕಿಯ ವಾಯವ್ಯ ಪ್ರಾಂತ್ಯ ಬಲಿಕೆಸಿರ್‌ನಲ್ಲಿ 6.1 ತೀವ್ರತೆಯ ಭೂಕಂಪನವಾಗಿದೆ. 10ಕ್ಕೂ ಹೆಚ್ಚು ಕಟ್ಟಡಗಳು ಕುಸಿದಿವೆ. ಅವಶೇಷಗಳಡಿ ಕನಿಷ್ಠ ಇಬ್ಬರು ಸಿಲುಕಿದ್ದಾರೆ ಎಂದು ಅಧಿಕಾರಿಗಳು ಹೇಳಿದ್ದಾರೆ.
- ಸಿಂದಿರ್ಗಿ ಪಟ್ಟಣದಲ್ಲಿ ಕಂಪನ ಕೇಂದ್ರ ಕಂಡುಬಂದಿದ್ದು, 200 ಕಿ.ಮೀ. ದೂರದ ಇಸ್ತಾಂಬುಲ್‌ನಲ್ಲಿ ಕಂಪನದ ಅನುಭವವಾಗಿದೆ. ಹಲವೆಡೆ ಕೂಡ ಭೂಮಿ ಕಂಪಿಸಿದ್ದು, ಒಂದು ಕಡೆ 4.6ರಷ್ಟು ತೀವ್ರತೆ ದಾಖಲಾಗಿದೆ.

## ❖ 'ಅಮೆರಿಕದ ಉಪಗ್ರಹ ಇಸ್ರೊ ಉಡಾವಣೆ'

- ಭಾರತೀಯ ಬಾಹ್ಯಾಕಾಶ ಸಂಸ್ಥೆಯು (ಇಸ್ರೊ), ಅಂದು ಅಮೆರಿಕ ನೀಡಿದ್ದ ಪುಟ್ಟ ರಾಕೆಟ್‌ನೊಂದಿಗೆ ಬಾಹ್ಯಾಕಾಶದಲ್ಲಿ ಯಶಸ್ವಿ ಆರಂಭದ ಹೆಜ್ಜೆ ಇಟ್ಟಿತ್ತು.
- ಇದೀಗ ಅಮೆರಿಕ ನಿರ್ಮಿಸಿರುವ 6,500 ಕೆ.ಜಿ. ತೂಕದ ಉಪಗ್ರಹವನ್ನು ಅದು ತನ್ನದೇ ಲಾಂಚರ್‌ನಲ್ಲಿ ಉಡಾವಣೆ ಮಾಡಲಿದೆ ಎಂದು ಇಸ್ರೊ ಹೇಳಿದರು.
- 'ಇಸ್ರೊ ಹಾಗೂ ಅಮೆರಿಕದ ನಾಸಾದ 'ಸಿಂಥೆಟಿಕ್ ಅಪಾರ್ಚರ್ ರೇಡಾರ್' (ಎನ್‌ಐಎಸ್‌ಎಆರ್) ಎಂಬ ಜಂಟಿ ಕಾರ್ಯಕ್ರಮದಡಿ ಜುಲೈ 30ರಂದು ಜಿಎಸ್‌ಎಲ್‌ವಿ-ಎಫ್16 ರಾಕೆಟ್ ಅನ್ನು ಉಡಾವಣೆ ಮಾಡಲಾಯಿತು. ಇನ್ನು ಕೆಲವೇ ತಿಂಗಳಲ್ಲಿ ಅಮೆರಿಕದ ಮತ್ತೊಂದು ರಾಕೆಟ್ ಅನ್ನು ಇಸ್ರೊ ಉಡಾವಣೆ ಮಾಡಲಿದೆ' ಎಂದರು.
- ಈ ವೇಳೆ ಇಸ್ರೊ ನಡೆದು ಬಂದ ಹಾದಿಯನ್ನು ಅವರು ಮೆಲುಕು ಹಾಕಿದರು. '1963ರಲ್ಲಿ ಇಸ್ರೊವನ್ನು ಸ್ಥಾಪಿಸಲಾಯಿತು. ಆಗ ಮುಂದುವರಿದ ರಾಷ್ಟ್ರಗಳಿಗಿಂತ ಭಾರತವು 6ರಿಂದ 7ವರ್ಷ ಹಿಂದೆ ಇತ್ತು. ಅದೇ ವರ್ಷ ಅಮೆರಿಕವು ಸಣ್ಣದೊಂದು ರಾಕೆಟ್ ಅನ್ನು ಭಾರತಕ್ಕೆ ನೀಡಿತು. ಇದರಿಂದ ನ.21 1963ರಲ್ಲಿ ಬಾಹ್ಯಾಕಾಶ ಕಾರ್ಯಕ್ರಮವನ್ನು ಆರಂಭಿಸಿದೆವು' ಎಂದು ವಿವರಿಸಿದರು.
- 'ಇಂದು ಇಸ್ರೊ ಮತ್ತು ನಾಸಾ ಜಂಟಿಯಾಗಿ ಅಭಿವೃದ್ಧಿಪಡಿಸಿದ 'ನಿಸಾರ್' ಉಪಗ್ರಹವನ್ನು ಉಡಾವಣೆ ಮಾಡಿದೆವು. **ಇದು ವಿಶ್ವದಲ್ಲೇ ಈವರೆಗೆ ನಿರ್ಮಿಸಲಾದ ಅತ್ಯಂತ ದುಬಾರಿ ಉಪಗ್ರಹ.**

Dr. Rajkumar IAS/KAS Academy

ಇದರಲ್ಲಿ ಅಳವಡಿಸಲಾದ **ರೇಡಾರ್‌ಗಳಾದ ಎಲ್-ಬ್ಯಾಂಡ್ ಅನ್ನು ಅಮೆರಿಕ ಹಾಗೂ ಎಸ್-ಬ್ಯಾಂಡ್ ಅನ್ನು ಭಾರತ ವಿನ್ಯಾಸಗೊಳಿಸಿವೆ.**

- ಜಿಎಸ್‌ಎಲ್‌ವಿ ಮೂಲಕ ಉಪಗ್ರಹವನ್ನು ಕಕ್ಷೆಗೆ ಸೇರಿಸಲಾಯಿತು. ನಾಸಾ ತಂಡವು ಇಸ್ರೊವನ್ನು ಶ್ಲಾಘಿಸಿತು. ಈಗ ನಾವು ಬಾಹ್ಯಾಕಾಶ ವಿಜ್ಞಾನ ಕ್ಷೇತ್ರದಲ್ಲಿ ಮುಂದುವರಿದ ರಾಷ್ಟ್ರಗಳಿಗೆ ಸರಿಸಮನಾಗಿ ಕೆಲಸ ಮಾಡುತ್ತಿದ್ದೇವೆ ಎಂದು ಅವರು ಹೇಳಿದರು.

## ❖ ಏಷ್ಯನ್ ಬಾಕ್ಸಿಂಗ್: ನಿಶಾ, ಮುಸ್ಕಾನ್, ರಾಹುಲ್‌ಗೆ ಚಿನ್ನ

- ಉದಯೋನ್ಮುಖ ಮಹಿಳಾ ಬಾಕ್ಸರ್‌ಗಳಾದ ನಿಶಾ ಮತ್ತು ಮುಸ್ಕಾನ್ ಅವರು ಇಲ್ಲಿ ನಡೆಯುತ್ತಿರುವ ಏಷ್ಯನ್ ಬಾಕ್ಸಿಂಗ್ 19 ವರ್ಷದೊಳಗಿನವರ ಚಾಂಪಿಯನ್ ಷಿಪ್‌ನಲ್ಲಿ ಚಿನ್ನ ಗೆದ್ದರು. ಪುರುಷರ ವಿಭಾಗದಲ್ಲಿ ರಾಹುಲ್ ಕುಂದು ಚಿನ್ನಕ್ಕೆ ಕೊರಳೊಡ್ಡಿದರು.
- ಈ ವಯೋಮಿತಿಯ ಸ್ಪರ್ಧೆಯಲ್ಲಿ ಭಾರತದ ಬಾಕ್ಸರ್‌ಗಳು ಮೂರು ಚಿನ್ನ, ಏಳು ಬೆಳ್ಳಿ ಮತ್ತು ನಾಲ್ಕು ಕಂಚಿನೊಂದಿಗೆ 14 ಪದಕಗಳನ್ನು ತಮ್ಮದಾಗಿಸಿಕೊಂಡರು. ಭಾರತದ 10 ಮಹಿಳಾ ಬಾಕ್ಸರ್‌ಗಳ ಪೈಕಿ 9 ಮಂದಿ ಪದಕ ಗೆದ್ದುಕೊಂಡರು. ಅದರಲ್ಲಿ ಎರಡು ಚಿನ್ನ, ಐದು ಬೆಳ್ಳಿ ಮತ್ತು ಎರಡು ಕಂಚು ಸೇರಿವೆ.
- ಆರತಿ ಕುಮಾರಿ, ಕೃತಿಕಾ ವಾಸನ್, ಪ್ರಾಚಿ ಟೋಕಸ್, ವಿನಿ, ನಿಶಾ ಬೆಳ್ಳಿ ಪದಕ ಗೆದ್ದರು. ಯಶಿಕಾ ಮತ್ತು ಆಕಾಂಕ್ಷಾ ಫಲಸ್ವಾಲ್ (70 ಕೆ.ಜಿ) ಕಂಚು ಜಯಿಸಿದರು.
- ಮೌಸಮ್ ಸುಹಾಗ್, ಹೇಮಂತ್ ಸಂಗ್ವಾನ್ ಬೆಳ್ಳಿ ಗೆದ್ದರೆ, ಶಿವಂ ಮತ್ತು ಗೌರವ್ ಕಂಚಿನ ಪದಕ ಜಯಿಸಿದರು.

## ❖ ಕುಜೂರ್, ಅನ್ನುರಾಣಿ, ಮುರಳಿಗೆ ಪ್ರಶಸ್ತಿ

- ಉದಯೋನ್ಮುಖ ಸ್ಪ್ರಿಂಟರ್ ಅನಿಮೇಶ್ ಕುಜೂರ್, ಅನುಭವಿ ಜಾವೆಲಿನ್ ಥ್ರೋತಾರೆ ಅನ್ನುರಾಣಿ ಮತ್ತು ಲಾಂಗ್‌ಜಂಪ್ ಪಟು ಮುರಳಿ ಶ್ರೀಶಂಕರ್ ಅವರು ನಿರೀಕ್ಷೆಯಂತೆ ಇಲ್ಲಿನ ಕಳಿಂಗ ಕ್ರೀಡಾಂಗಣದಲ್ಲಿ ವಿಶ್ವ ಅಥ್ಲೆಟಿಕ್ಸ್ ಕಾಂಟಿನೆಂಟಲ್ ಟೂರ್ ಸ್ಪರ್ಧೆಯಲ್ಲಿ ಚಿನ್ನದ ಸಾಧನೆ ಮೆರೆದರು.
- ಕರ್ನಾಟಕದ ನಾಲ್ವರು ಪದಕ ಗೆದ್ದರು. ವಿಜಯಕುಮಾರಿ ಜಿ.ಕೆ. (53.40ಸೆ) ಮಹಿಳೆಯರ 400 ಮೀಟರ್ ಓಟದಲ್ಲಿ ಚಿನ್ನ ಗೆದ್ದರು. ಸ್ನೇಹಾ ಎಸ್.ಎಸ್. (11.70 ಸೆ.) ಮಹಿಳೆಯರ 100 ಮೀ. ಓಟದಲ್ಲಿ ಬೆಳ್ಳಿ ಜಯಿಸಿದರು. 200 ಮೀಟರ್ ಓಟದಲ್ಲಿ ಉನ್ನತಿ ಅಯ್ಯಪ್ಪ (24.56 ಸೆ) ಮತ್ತು ಪುರುಷರ ಲಾಂಗ್ ಜಂಪ್ ನಲ್ಲಿ ಲೋಕೇಶ್ ಸತ್ಯನಾಥನ್ (7.85 ಮೀ) ಕಂಚು ಗೆದ್ದರು.
- 22 ವರ್ಷದ ಕುಜೂರ್ ಪುರುಷರ 200 ಮೀಟರ್ ಓಟದ ಫೈನಲ್‌ನಲ್ಲಿ 20.77 ಸೆಕೆಂಡುಗಳಲ್ಲಿ ಗುರಿ ತಲುಪಿದರು. ಕೊರಿಯಾದ ಕೊ ಸೆಯುಂಗ್ವಾನ್ (20.95 ಸೆ.) ಮತ್ತು ಭಾರತದ ಮತ್ತೊಬ್ಬ ಸ್ಪರ್ಧಿ ರಘುಲ್ ಕುಮಾರ್ (21.17 ಸೆ.) ಕ್ರಮವಾಗಿ ಬೆಳ್ಳಿ ಮತ್ತು ಕಂಚು ಗೆದ್ದರು.


Dr. Rajkumar IAS/KAS Academy

## ❖ ಮಹದಾಯಿ ನ್ಯಾಯಮಂಡಳಿ ಅವಧಿ ಮತ್ತೆ ವಿಸ್ತರಣೆ

- ಮಹ ದಾಯಿ ಜಲವಿವಾದಕ್ಕೆ ಸಂಬಂಧಿಸಿದಂತೆ ಹೆಚ್ಚಿನ ವರದಿ ಸಲ್ಲಿಸುವ ಸಂಬಂಧ ನ್ಯಾಯಮಂಡಳಿಯ ಅವಧಿ ಯನ್ನು ಒಂದು ವರ್ಷ ವಿಸ್ತರಿಸಲಾಗಿದೆ.
- **ಕರ್ನಾಟಕ, ಗೋವಾ ಮತ್ತು ಮಹಾರಾಷ್ಟ್ರ** ನಡುವಿನ ನೀರು ಹಂಚಿಕೆ ವಿವಾದಗಳನ್ನು ಪರಿಹರಿಸಲು ಈ ನ್ಯಾಯಮಂಡಳಿಯನ್ನು 2010ರಲ್ಲಿ ಸ್ಥಾಪಿಸಲಾಗಿತ್ತು.
- ನ್ಯಾಯಮಂಡಳಿಗೆ ಕರ್ನಾಟಕ ಹಾಗೂ ಗೋವಾ ಸರ್ಕಾರಗಳು ಸ್ಪಷ್ಟೀಕರಣ ಅರ್ಜಿ ಸಲ್ಲಿಸಿವೆ. ಹೀಗಾಗಿ, ಹೆಚ್ಚಿನ ವರದಿ ನೀಡಲು ಇನ್ನಷ್ಟು ಕಾಲಾವಕಾಶ ನೀಡಬೇಕು ಎಂದು ಜಲಶಕ್ತಿ ಸಚಿವಾಲಯವನ್ನು ನ್ಯಾಯಮಂಡಳಿ ಕೋರಿತ್ತು. ವರದಿ ನೀಡುವ ಅವಧಿಯನ್ನು ವಿಸ್ತರಿಸಿ ಸಚಿವಾಲಯ ಅಧಿಸೂಚನೆ ಹೊರಡಿಸಿದೆ.
- ಮಹದಾಯಿ ವಿವಾದ ಬಗೆಹರಿಸಲು **ಅಂತರ ರಾಜ್ಯ ನದಿ ನೀರು ವಿವಾದ ಕಾಯ್ದೆ 1956ರ ಸೆಕ್ಷನ್ 4ರ ಅನ್ವಯ** ನ್ಯಾಯಮಂಡಳಿ ರಚಿಸಲಾಗಿತ್ತು.
- ಸುಪ್ರೀಂ ಕೋರ್ಟ್ ಆದೇಶದ ಅನುಸಾರ ನ್ಯಾಯಮಂಡಳಿಯು 2018ರ ಆಗಸ್ಟ್‌ನಲ್ಲಿ ವರದಿ ಸಲ್ಲಿಸಿತ್ತು.
- ಈ ವರದಿಯ ಬಗ್ಗೆ 2020ರ ಫೆ.20ರಂದು ಅಧಿಸೂಚನೆ ಹೊರಡಿಸಲಾಗಿತ್ತು. ಹೆಚ್ಚುವರಿ ವರದಿ ನೀಡಲು ನ್ಯಾಯಮಂಡಳಿಯ ಅವಧಿ ವಿಸ್ತರಿಸುತ್ತಿರುವುದು ಇದು ಆರನೇ ಬಾರಿ.

## ❖ ಪಟ್ಟಿಯಿಂದ 476 ಪಕ್ಷ ಹೊರಗೆ: ಆಯೋಗ

- ನೋಂದಾಯಿತ ಮಾನ್ಯತೆ ಪಡೆಯದ 476 ರಾಜಕೀಯ ಪಕ್ಷಗಳನ್ನು ಪಟ್ಟಿಯಿಂದ ತೆಗೆದುಹಾಕುವ ಪ್ರಕ್ರಿಯೆ ಪ್ರಾರಂಭಿಸಲಾಗಿದೆ ಎಂದು ಚುನಾವಣಾ ಆಯೋಗ ಸೋಮವಾರ ಮಾಹಿತಿ ನೀಡಿದೆ.
- ಇವುಗಳು ಕಳೆದ ಆರು ವರ್ಷಗಳಲ್ಲಿ ಒಂದೂ ಚುನಾವಣೆಯಲ್ಲಿ ಭಾಗವಹಿಸಿಲ್ಲ ಹಾಗೂ ಮಾನದಂಡಗಳನ್ನು ಪಾಲಿಸಿಲ್ಲ ಎಂದು ಅದು ಹೇಳಿದೆ.
- ಕರ್ನಾಟಕದ 12 ಪಕ್ಷ ಗಳು ಸೇರಿದಂತೆ 334 ಪಕ್ಷಗಳನ್ನು ಮೊದಲ ಹಂತದಲ್ಲಿ ಪಟ್ಟಿಯಿಂದ ಕೈಬಿಡಲಾಗಿತ್ತು.

## ❖ ಥರ್ಮಲ್ ಡ್ರೋನ್ ಕಣ್ಗಾವಲು

- ಜಿಲ್ಲೆಯಲ್ಲಿ ಹೆಚ್ಚುತ್ತಿರುವ ಕಾಡಾನೆ-ಮಾನವ ಸಂಘರ್ಷ ನಿವಾರಣೆಗೆ ಮುಂದಾಗಿರುವ ಅರಣ್ಯ ಇಲಾಖೆಯು, ಆನೆಗಳ ಚಲನವಲನದ ಮೇಲೆ ನಿಗಾ ಇಡಲು ಥರ್ಮಲ್ ಡ್ರೋನ್ ಸ್ಕ್ವಾಡ್ ಆರಂಭಿಸಿದೆ.
- ಅರಣ್ಯ ಸಚಿವ ಜಿಲ್ಲಾ ಆನೆ ಕಾರ್ಯಪಡೆಯ ಸಮಗ್ರ ತಂತ್ರಜ್ಞಾನ ಆಧಾರಿತ ಥರ್ಮಲ್ ಡ್ರೋನ್ ಸ್ಕ್ವಾಡ್ ಉದ್ಘಾಟಿಸಿದರು.
- ಈ ಆಧುನಿಕ ಕ್ಯಾಮೆರಾವನ್ನು **ಮೊದಲು ನಾಗರಹೊಳೆ ರಾಷ್ಟ್ರೀಯ ಉದ್ಯಾನಕ್ಕೆ** ತರಿಸಲಾಗಿತ್ತು. ಅಲ್ಲಿಂದ ವಿವಿಧೆಡೆ ಆರಂಭಿಸಲಾಗಿದ್ದು, ಈಗ ಜಿಲ್ಲೆಯಲ್ಲೂ ಕಾರ್ಯಾರಂಭ ಮಾಡಿದಂತಾಗಿದೆ.
- ಜಿಲ್ಲೆಯಲ್ಲಿ ಸುಮಾರು 60–80 ಕಾಡಾನೆಗಳು ಜನವಸತಿ ಪ್ರದೇಶಗಳಿಗೆ ಬಂದಿದ್ದು, ಕಾಫಿ ತೋಟಗಳಲ್ಲಿ ಬೀಡು ಬಿಟ್ಟಿವೆ. ಬೇಲೂರು ತಾಲ್ಲೂಕಿನ ಬಿಕ್ಕೋಡು ಹೋಬಳಿಯೇ ಅವುಗಳ ಆವಾಸ ಸ್ಥಾನವಾಗಿದೆ.
- ಹಗಲು- ರಾತ್ರಿ ಕಾಡಾನೆಗಳ ಚಲನವಲನ ಸೆರೆ ಹಿಡಿಯಬಲ್ಲ ಸಾಮರ್ಥ್ಯವಿರುವ ಡ್ರೋನ್ ಬಳಸಲು ಕಾರ್ಯಪಡೆಯ ಸಿಬ್ಬಂದಿಗೆ ತರಬೇತಿ ನೀಡಲಾಗಿದೆ.
- ಜಿಪಿಎಸ್ ಮೂಲಕ ಲೊಕೇಷನ್ ಗುರುತಿಸಿದರೆ, ಡ್ರೋನ್ ವಸ್ತುಸ್ಥಿತಿ ಸೆರೆಹಿಡಿಯಲಿದೆ. ಜೇನುನೊಣದ ರೀತಿ ಡ್ರೋನ್ ಶಬ್ದ ಇರುವುದರಿಂದ ಆನೆ, ಹುಲಿ ಸೇರಿದಂತೆ ಪ್ರಾಣಿಗಳಿಗೂ ತೊಂದರೆಯಾಗದು.

## ❖ ಉಪರಾಷ್ಟ್ರಪತಿ ಚುನಾವಣೆ ಸುತ್ತ

- ಉಪರಾಷ್ಟ್ರಪತಿ ಚುನಾವಣೆಗೆ ಚುನಾವಣಾ ಆಯೋಗವು ಸೆಪ್ಟೆಂಬರ್ 9ರ ದಿನಾಂಕ ಪ್ರಕಟಿಸಿದೆ.
- ಭಾರತ ತನ್ನ 15ನೇ ಉಪರಾಷ್ಟ್ರಪತಿಯನ್ನು ಮುಂದಿನ ತಿಂಗಳು ಹೊಂದಲಿದೆ. ಇದುವರೆಗೆ ಈ ಸ್ಥಾನವನ್ನು 14 ಮಂದಿ ಅಲಂಕರಿಸಿದ್ದಾರೆ. ಅವರಲ್ಲಿ ಇಬ್ಬರು, **ಎರಡು ಅವಧಿಗೆ ಉಪರಾಷ್ಟ್ರಪತಿ ಸ್ಥಾನದಲ್ಲಿ (ರಾಧಾಕೃಷ್ಣನ್ ಹಾಗೂ ಹಮೀದ್ ಅನ್ಸಾರಿ)** ಕಾರ್ಯ ನಿರ್ವಹಿಸಿದ್ದಾರೆ.
- ಉಪರಾಷ್ಟ್ರಪತಿ ಆಗಿದ್ದವರಲ್ಲಿ ಆರು ಮಂದಿ ಮುಂದೆ ರಾಷ್ಟ್ರಪತಿ ಸ್ಥಾನಕ್ಕೂ ಸಂದವರು. ಒಬ್ಬರು (ಭೈರೋನ್ ಸಿಂಗ್ ಶೆಖಾವತ್) ಆ ಸ್ಥಾನಕ್ಕೆ ಸ್ಪರ್ಧಿಸಿ, ಸೋಲು ಕಂಡಿದ್ದರು. ಹಿಂದಿನ ಐವರು ಉಪರಾಷ್ಟ್ರಪತಿಗಳು (ಕೃಷ್ಣಕಾಂತ್ ಅವರ ನಂತರ) ಮುಂದೆ ರಾಷ್ಟ್ರಪತಿಗಳಾಗಲಿಲ್ಲ ಎನ್ನುವುದು ಆಸಕ್ತಿಕರವೂ, ಗಮನಿಸಬೇಕಾದ ಸಂಗತಿಯೂ ಆಗಿದೆ.
- ಮೂವರು ಉಪರಾಷ್ಟ್ರಪತಿಗಳು **ಅವಿರೋಧ ವಾಗಿ ಆಯ್ಕೆ ಆಗಿದ್ದುದನ್ನೂ ನಾವೀಗ ನೆನಪಿಸಿ ಕೊಳ್ಳಬೇಕಿದೆ. ರಾಧಾಕೃಷ್ಣನ್ ಅವರು ಎರಡು ಅವಧಿಗೆ (1952, 1957) ಹಾಗೂ ಶಂಕರ್ ದಯಾಳ್ ಶರ್ಮ (1987)** ಒಮ್ಮೆ ಅವಿರೋಧವಾಗಿ ಆಯ್ಕೆಯಾಗಿದ್ದರು.

Dr. Rajkumar IAS/KAS Academy

## ❖ ಅಣ್ವಸ್ತ್ರ ಬೆದರಿಕೆ ಪಾಕಿಸ್ತಾನದ ಚಾಳಿ

# ಅಣ್ವಸ್ತ್ರ ಬೆದರಿಕೆ ಪಾಕಿಸ್ತಾನದ ಚಾಳಿ



**ಅಣ್ವಸ್ತ್ರ ಹೊಂದಿರುವ ರಾಷ್ಟ್ರ ತಮ್ಮದಾಗಿದ್ದು, ತಾವು ಸೋಲುವ ಸ್ಥಿತಿ ಬಂದರೆ, ಅರ್ಧ ಜಗತ್ತನ್ನು ನಾಶಪಡಿಸುವುದಾಗಿ ಪಾಕಿಸ್ತಾನದ ಸೇನಾ ಪಡೆಗಳ ಮುಖ್ಯಸ್ಥ ಆಸಿಮ್ ಮುನೀರ್ ಅಮೆರಿಕದ ನೆಲದಲ್ಲಿ ನಿಂತು ಅಕ್ಷರಶಃ ಬೆದರಿಕೆ ಹಾಕಿದ್ದಾರೆ. ಆಸಿಮ್ ಮುನೀರ್ ಮಾತುಗಳು ಭಾರತಕ್ಕಷ್ಟೇ ಅಲ್ಲ, 'ಅರ್ಧ ಜಗತ್ತಿಗೇ' ಒಡ್ಡಿದ ಬೆದರಿಕೆಯಾಗಿದೆ. ಪಾಕಿಸ್ತಾನದ ರೀತಿಯಲ್ಲೇ ಚೀನಾ ಮತ್ತು ಉತ್ತರ ಕೊರಿಯಾದಲ್ಲಿಯೂ ಅಣ್ವಸ್ತ್ರಗಳಿದ್ದು, ಅಲ್ಲಿಯೂ ಸರ್ವಾಧಿಕಾರಿಗಳೇ ಆಡಳಿತ ನಡೆಸುತ್ತಿದ್ದಾರೆ. ಇವರೆಲ್ಲರೂ ವಿಶ್ವಶಾಂತಿಗೆ ಕಂಟಕವಾಗುವಂಥ ಸ್ವಭಾವ, ಸಾಮರ್ಥ್ಯ ಹೊಂದಿದ್ದು, ಅಪಾಯಕಾರಿಗಳಾಗಿದ್ದಾರೆ. ಇದರಲ್ಲಿ ವಿಶ್ವದ 'ದೊಡ್ಡಣ್ಣ' ಎಂದೇ ಕರೆಸಿಕೊಳ್ಳುವ ಅಮೆರಿಕದ ಬೆಂಬಲ ಅಥವಾ 'ಮೌನ ಸಮ್ಮತಿ'ಯ ಪಾಲೂ ಇದೆ ಎಂದು ವಿಶ್ಲೇಷಿಸಲಾಗುತ್ತಿದೆ**

ಪ್ರಜಾವಾಣಿ ವಾರ್ತೆ

ಜನರಲ್ ಆಸಿಮ್ ಮುನೀರ್, ಪಾಕಿಸ್ತಾನದ ಸೇನಾ ಮುಖ್ಯಸ್ಥ. ಅವರು ಪಾಕ್‌ನ ಮುಂದಿನ ಅಧ್ಯಕ್ಷರಾಗುವ ಕನಸು ಕಾಣುತ್ತಿದ್ದಾರೆ ಎನ್ನುವ ವರದಿಗಳು ಇತ್ತೀಚೆಗೆ ಹರಿದಾಡಿದ್ದವು. ಆದರೆ, ಅಧ್ಯಕ್ಷರಿಗಿಂತಲೂ ಅವರೇ ಪ್ರಭಾವಿಯಾಗಿದ್ದು, ದೇಶದ ಒಳಗಷ್ಟೇ ಅಲ್ಲ, ಹೊರಗೂ ಪಾಕಿಸ್ತಾನವನ್ನು ಪ್ರತಿನಿಧಿಸುತ್ತಿದ್ದಾರೆ. ಶ್ವೇತಭವನದ ಆಹ್ವಾನದ ಮೇರೆಗೆ ಆಸಿಮ್ ಮುನೀರ್ ಇದೇ ಜೂನ್‌ನಲ್ಲಿ ಅಮೆರಿಕಕ್ಕೆ ಭೇಟಿ ನೀಡಿದ್ದರು. ಇದೀಗ ಎರಡನೇ ಬಾರಿ ಅಮೆರಿಕಕ್ಕೆ ಭೇಟಿ ನೀಡಿರುವ ಮುನೀರ್, ಅಲ್ಲಿ ಆಡಿರುವ ಮಾತುಗಳು ಅವರ ಮನಃಸ್ಥಿತಿಯನ್ನೂ, ಪಾಕಿಸ್ತಾನ ಸೇರಿದಂತೆ ಸರ್ವಾಧಿಕಾರಿ ಆಡಳಿತವಿರುವ, ಅಣ್ವಸ್ತ್ರ ಹೊಂದಿರುವ ರಾಷ್ಟ್ರಗಳ ಪರಿಸ್ಥಿತಿಯನ್ನೂ ಬಿಂಬಿಸುತ್ತಿವೆ.

ಅಮೆರಿಕದಲ್ಲಿ ನಿಂತು ಭಾರತಕ್ಕೆ ಸಂಬಂಧಿಸಿದ ಹಲವು ವಿಚಾರಗಳ ಬಗ್ಗೆ ಮುನೀರ್ ಪ್ರಸ್ತಾಪಿಸಿದ್ದಾರೆ. 'ಕಾಶ್ಮೀರ ವಿವಾದವು ಭಾರತದ ಆಂತರಿಕ ವಿಚಾರವಲ್ಲ, ಅದು ಬಗೆಹರಿಯದ ಅಂತರರಾಷ್ಟ್ರೀಯ ವಿವಾದ' ಎಂದಿದ್ದಾರೆ. 'ಭಾರತವು ಸಿಂಧೂ ನದಿಗೆ ಅಣೆಕಟ್ಟುಗಳನ್ನು ಕಟ್ಟಲಿ, ನಂತರ 10 ಕ್ಷಿಪಣಿಗಳಿಂದ ನಾವು ಅವುಗಳನ್ನು ಧ್ವಂಸ ಮಾಡುತ್ತೇವೆ' ಎಂದಿದ್ದಾರೆ. 'ಭಾರತವು ಮರ್ಸಿಡಿಸ್ ಕಾರ್ ಇದ್ದಂತೆ. ಪಾಕಿಸ್ತಾನವು ಕಲ್ಲು ಸಾಗಿಸುವ ಟ್ರಕ್ ಇದ್ದಂತೆ. ಟ್ರಕ್ ಕಾರಿಗೆ ಡಿಕ್ಕಿ ಹೊಡೆದರೆ, ಯಾರಿಗೆ ನಷ್ಟ ಹೇಳಿ' ಎಂದೂ ಪ್ರಶ್ನಿಸಿದ್ದಾರೆ.

**ಪ್ರಚೋದನಕಾರಿ ಮಾತು:** ಇದೇ ಮುನೀರ್ ಅವರು ಹಿಂದೊಮ್ಮೆ 'ಕಾಶ್ಮೀರವು ಪಾಕಿಸ್ತಾನದ ಕಂಠನಾಳ' ಎಂದಿದ್ದರು. ಆದಾದ ಕೆಲವೇ ದಿನಗಳಲ್ಲಿ ಪಹಲ್ಗಾಮ್ ಮೇಲೆ ಉಗ್ರರು ದಾಳಿ ನಡೆಸಿ 26 ಪ್ರವಾಸಿಗರನ್ನು ಹತ್ಯೆ ಮಾಡಿದ್ದರು. ಭಯೋತ್ಪಾದಕರ ದಾಳಿಗೆ ಮುನೀರ್ ಅವರ ಆ ಮಾತೇ ಪ್ರೇರಣೆ ಎನ್ನಲಾಗಿತ್ತು. ಈಗ ಅಮೆರಿಕದ ನೆಲದಿಂದ ಅಂಥವೇ ಪ್ರಚೋದನಕಾರಿ ಮಾತುಗಳನ್ನು ಆಡಿದ್ದಾರೆ.

ಪಾಕ್‌ನಲ್ಲಿ ಅಧ್ಯಕ್ಷ, ಪ್ರಧಾನಿ ಅವರಿಗಿಂತಲೂ ಸೇನಾ ಮುಖ್ಯಸ್ಥರೇ ಪ್ರಭಾವಿ ಹಾಗೂ ನಿರ್ಣಾಯಕ. ಪಾಕಿಸ್ತಾನ ಜನ್ಮ ತಾಳಿದಂದಿನಿಂದಲೂ ಯಾವ ಪ್ರಧಾನಿಯೂ ಅಲ್ಲಿ ಪೂರ್ಣಾವಧಿ ಆಡಳಿತ ನಡೆಸಿಯೇ ಇಲ್ಲ. ಮಿಲಿಟರಿ ದಂಗೆಯ ಮೂಲಕ ಸೇನಾ ಮುಖ್ಯಸ್ಥ ಪ್ರಧಾನಿಯನ್ನು ಪದಚ್ಯುತಗೊಳಿಸುವುದು, ಪದಚ್ಯುತ ಪ್ರಧಾನಿ ದೇಶ ತೊರೆದು ಹೋಗುವುದು ಇಲ್ಲವೇ ಹತ್ಯೆಗೆ ಒಳಗಾಗುವುದು ಅಲ್ಲಿ ಹಲವು ಭಾರಿ ಘಟಿಸಿದೆ. ಈ ದಿಸೆಯಲ್ಲಿ ಆಸಿಮ್ ಮುನೀರ್ ಮಾತುಗಳಿಗೆ ವಿಶೇಷ ಮಹತ್ವ ಪ್ರಾಪ್ತವಾಗಿದೆ.

**ಪದೇ ಪದೇ ಬೆದರಿಕೆ:** ಅಣ್ವಸ್ತ್ರ ಹೊಂದಿರುವ ಯಾವುದೇ ರಾಷ್ಟ್ರವು, ಮತ್ತೊಂದು ರಾಷ್ಟ್ರದ ಮೇಲೆ ಅಣ್ವಸ್ತ್ರ ಪ್ರಯೋಗಿಸುವುದು ಸುಲಭ ಅಲ್ಲ. ಆದರೂ ಪಾಕಿಸ್ತಾನವು ಹಿಂದಿನಿಂದಲೂ ಭಾರತವನ್ನು ಗುರಿಯಾಗಿಸಿಕೊಂಡು ಆಗಿಂದಾಗ್ಗೆ ಈ ಬಗ್ಗೆ ಪುನರುಚ್ಚಾರ ಮಾಡುತ್ತಿದ್ದು, ಅದನ್ನೇ ಚಾಳಿಯಾಗಿಸಿಕೊಂಡಿದೆ. 2002ರಲ್ಲಿ ಅಧ್ಯಕ್ಷರಾಗಿದ್ದ ಪರ್ವೇಜ್ ಮುಷರಫ್ ಅವರು, 'ಪಾಕಿಸ್ತಾನದ ಅಣ್ವಸ್ತ್ರಗಳ ಏಕೈಕ ಗುರಿ ಭಾರತವಾಗಿದ್ದು, ದೇಶದ ಅಸ್ತಿತ್ವಕ್ಕೆ ಆತಂಕ ಎದುರಾದಾಗ ಅವುಗಳನ್ನು ಬಳಸಲಾಗುವುದು' ಎಂದು ಹೇಳಿದ್ದರು.

ಆದರೂ ಹಲವು ಸಂದರ್ಭಗಳಲ್ಲಿ ಅಣ್ವಸ್ತ್ರ ಬಳಕೆಯ ಮಾತುಗಳು ಕೇಳಿಬಂದಿದ್ದವು. 1999ರ ಕಾರ್ಗಿಲ್ ಯುದ್ಧದ ಸಂದರ್ಭದಲ್ಲಿ ಪಾಕಿಸ್ತಾನದ ಅಂದಿನ ವಿದೇಶಾಂಗ ಕಾರ್ಯದರ್ಶಿ ಶಂಷಾದ್ ಅಹಮದ್, 'ತನ್ನ ಭೂಪ್ರದೇಶ ರಕ್ಷಿಸಿಕೊಳ್ಳಲು ದೇಶವು ಅಣ್ವಸ್ತ್ರ ಬಳಸಲು ಹಿಂಜರಿಯುವುದಿಲ್ಲ' ಎಂದಿದ್ದರು. 2019ರಲ್ಲಿ ಭಾರತವು ಪಾಕಿಸ್ತಾನದ ಬಾಲಾಕೋಟ್ ಮೇಲೆ 'ನಿರ್ದಿಷ್ಟ ಕಾರ್ಯಾಚರಣೆ' ನಡೆಸಿದಾಗಲೂ ಇಂಥದ್ದೇ ಪ್ರತಿಕ್ರಿಯೆಗಳು ಬಂದಿದ್ದವು.

ಪಹಲ್ಗಾಮ್ ದಾಳಿಯ ನಂತರ, ಮೇ 7ರಿಂದ 10ರವರೆಗೆ ಎರಡೂ ರಾಷ್ಟ್ರಗಳ ನಡುವೆ ಸೇನಾ ಸಂಘರ್ಷದ ಸಮಯದಲ್ಲೂ ಅಣ್ವಸ್ತ್ರ ದಾಳಿಯ ಬಗ್ಗೆ ಚರ್ಚೆಗಳು ನಡೆದಿದ್ದವು. ಮೇ 10ರಂದು ಬೆಳಿಗ್ಗೆ ಪಾಕಿಸ್ತಾನದ ಪ್ರಧಾನಿ, ಅಧ್ಯಕ್ಷರು ಅಣ್ವಸ್ತ್ರಗಳ ಮೇಲುಸ್ತುವಾರಿ ಹೊಂದಿರುವ ನ್ಯಾಷನಲ್ ಕಮಾಂಡ್ ಅಥಾರಿಟಿಯ ಸಭೆ ಕರೆದಿದ್ದರು ಎಂದೂ ವರದಿಯಾಗಿತ್ತು. ಇವುಗಳಲ್ಲಿ ಸತ್ಯ ಎಷ್ಟು ಎನ್ನುವುದು ಸ್ಪಷ್ಟವಾಗಿಲ್ಲ.

ಪಹಲ್ಗಾಮ್ ದಾಳಿಯ ನಂತರ ಭಾರತ ಕೈಗೊಂಡ ರಾಜತಾಂತ್ರಿಕ ಕ್ರಮಗಳು, ಆಪರೇಷನ್ ಸಿಂಧೂರ, ಸೇನಾ ಸಂಘರ್ಷ ನಡೆದಾಗಿನಿಂದಲೂ ಧರ್ಮದ ಹೆಸರಿನಲ್ಲಿ ಪಾಕಿಸ್ತಾನದ ಜನರ ಮನಸ್ಸನ್ನು ಗೆಲ್ಲುವ ಪ್ರಯತ್ನ ವನ್ನು ಮುನೀರ್ ಮಾಡುತ್ತಲೇ ಇದ್ದಾರೆ. ಧಾರ್ಮಿಕ ಶಿಕ್ಷಣ ಪಡೆದಿರುವ ಮೊದಲ ಪಾಕ್ ಸೇನಾ ಮುಖ್ಯಸ್ಥರಾಗಿರುವ ಮುನೀರ್, ಧಾರ್ಮಿಕ ಪರಿಭಾಷೆಯಲ್ಲಿ ಮಾತನಾಡುವ ಮೂಲಕ ಜನರನ್ನು ಪ್ರಚೋದಿಸಲು ಯತ್ನಿಸುತ್ತಿದ್ದಾರೆ.

**ಅಮೆರಿಕದ ಮೌನ:** ಅಮೆರಿಕವು ಜಪಾನ್‌ನ ನಾಗಸಾಕಿ ಮೇಲೆ ಬಾಂಬ್ ಹಾಕಿದ 80ನೇ ವಾರ್ಷಿಕ ದಿನದಂದೇ ಮುನೀರ್ ಅಮೆರಿಕದಿಂದ ಅಣ್ವಸ್ತ್ರ ದಾಳಿಯ ಬಗ್ಗೆ ಮಾತನಾಡಿದ್ದಾರೆ. ಆದರೆ, ಅಮೆರಿಕ ಇದರ ಬಗ್ಗೆ ಮೌನವಾಗಿದೆ. ಸುಂಕಕ್ಕೆ ಸಂಬಂಧಿಸಿದ ಭಾರತ–ಅಮೆರಿಕ ಮಾತುಕತೆ ಯಶಸ್ವಿಯಾಗದೇ ಇರುವುದು, ಭಾರತದ ಉತ್ಪನ್ನಗಳ ಮೇಲೆ ಅಮೆರಿಕ ಶೇ 50ರಷ್ಟು ಸುಂಕ ಹೇರಿರುವುದು.. ಇವೇ ಮುಂತಾದ ಕಾರಣಗಳಿಂದ ಭಾರತ ಮತ್ತು ಅಮೆರಿಕ ಸಂಬಂಧ ಹಳಸಿದೆ. ಇದೇ ವೇಳೆ ಪಾಕ್ ಅಮೆರಿಕಕ್ಕೆ ಹೆಚ್ಚು ಹತ್ತಿರವಾಗಿದ್ದು, ತನ್ನ ಅದ್ಭುತ ಪಾಲುದಾರ ಎಂದು ಪಾಕ್ ಅನ್ನು ಅಮೆರಿಕ ಬಣ್ಣಿಸಿದೆ. ಪಾಕಿಸ್ತಾನದಂಥ ದುರ್ಬಲ ಹಾಗೂ ಅಸ್ಥಿರ ರಾಜಕೀಯ ಪರಿಸ್ಥಿತಿಯ ದೇಶವನ್ನು ಅಮೆರಿಕ ತನ್ನ ಕೈಗೊಂಬೆಯಂತೆ ಮಾಡಿಕೊಳ್ಳಲು ಯತ್ನಿಸುತ್ತಿದೆ. ಆಸಿಮ್ ಮುನೀರ್ ಅವರ ಹೇಳಿಕೆಯನ್ನು ಈ ನೆಲೆಯಲ್ಲಿಯೂ ಅರ್ಥೈಸಲಾಗುತ್ತಿದೆ.

ಎರಡು ರಾಷ್ಟ್ರಗಳ ನಡುವಿನ ವಿಚಾರಗಳನ್ನು ಚರ್ಚಿಸಲು ನಿರ್ದಿಷ್ಟ ಸ್ಥಳ, ಸಂದರ್ಭ, ವೇದಿಕೆಗಳಿರುತ್ತವೆ; ರಾಜತಾಂತ್ರಿಕ ರೀತಿ–ರಿವಾಜುಗಳು ಇರುತ್ತವೆ; ಮಾತುಕತೆಗೆ ಅದರದ್ದೇ ಆದ ಪರಿಭಾಷೆಯೂ ಇರುತ್ತದೆ. ಈ ಎಲ್ಲವನ್ನೂ ಮೀರಿ, ಮೂರನೇ ರಾಷ್ಟ್ರದಿಂದ ಯುದ್ಧದ ಸಂದೇಶ ಬಿತ್ತರಿಸುವುದು, ದಾಳಿಯ ಪರಿಭಾಷೆಯಲ್ಲಿ ಮಾತನಾಡುವುದು, ಕೆಣಕುವುದು ಎರಡೂ ರಾಷ್ಟ್ರಗಳ ನಡುವಿನ ಸಂಬಂಧಕ್ಕೆ ಮತ್ತಷ್ಟು ಹಾನಿಯುಂಟುಮಾಡುತ್ತದೆ. ಮುನೀರ್ ಹೇಳಿಕೆಗೆ ಭಾರತ ನೀಡಿರುವ ತೀಕ್ಷ್ಣ ಪ್ರತಿಕ್ರಿಯೆ ಇದಕ್ಕೆ ಪುಷ್ಟಿನೀಡುವಂತಿದೆ.

ಆಧಾರ: ಪಿಟಿಐ, ಬಿಬಿಸಿ, 'ಸಿಪ್ರಿ', ಮಾಧ್ಯಮ ವರದಿಗಳು

### ಚೀನಾ ನೆರವು, ಉತ್ತರ ಕೊರಿಯಾದೊಂದಿಗೂ ಸ್ನೇಹ

ಸರ್ವಾಧಿಕಾರದ ರೀತಿಯ ಆಡಳಿತವಿರುವ ಚೀನಾ ಮತ್ತು ಉತ್ತರ ಕೊರಿಯಾವೂ ಅಣ್ವಸ್ತ್ರಗಳನ್ನು ಹೊಂದಿವೆ. 'ಸಿಪ್ರಿ' ವರದಿ ಪ್ರಕಾರ ಚೀನಾದ ಬಳಿ 600 ಅಣ್ವಸ್ತ್ರ ಸಿಡಿತಲೆಗಳಿವೆ. ಈ ಪೈಕಿ 24 ಪರಮಾಣು ಬಾಂಬ್‌ಗಳನ್ನು ಅದು ಸನ್ನದ್ಧ ಸ್ಥಿತಿಯಲ್ಲಿ ಇರಿಸಿದೆ. ಚೀನಾ ಈವರೆಗೆ ಯಾವುದೇ ದೇಶದ ವಿರುದ್ಧ ಅಣ್ವಸ್ತ್ರ ದಾಳಿಯ ಬೆದರಿಕೆ ಒಡ್ಡಿಲ್ಲ. ಆದರೆ, ಪಾಕಿಸ್ತಾನಕ್ಕೆ ಅಣ್ವಸ್ತ್ರ ಹಾಗೂ ಸೇನಾ ಅಭಿವೃದ್ಧಿಗೆ ಸಕಲ ನೆರವನ್ನೂ ನೀಡುತ್ತಿದೆ.

ಅಮೆರಿಕ ಸೇರಿದಂತೆ ಜಗತ್ತಿನ ಹಲವು ರಾಷ್ಟ್ರಗಳ ವಿರೋಧದ ನಡುವೆಯೂ ಅಣ್ವಸ್ತ್ರವನ್ನು ಪರೀಕ್ಷೆಗೆ ಒಳಪಡಿಸಿರುವ ರಾಷ್ಟ್ರ ಉತ್ತರ ಕೊರಿಯಾ. 'ಸಿಪ್ರಿ' ಪ್ರಕಾರ ಅದರ ಬಳಿ 50 ಅಣ್ವಸ್ತ್ರ ಸಿಡಿತಲೆಗಳಿವೆ. ಪಾಕಿಸ್ತಾನವೇ ಉತ್ತರ ಕೊರಿಯಾಕ್ಕೆ ಅಣ್ವಸ್ತ್ರ ತಂತ್ರಜ್ಞಾನವನ್ನು ನೀಡಿದೆ ಎಂದು ಹೇಳಲಾಗುತ್ತಿದೆ. 1970ರ ದಶಕದಿಂದಲೂ ಪಾಕ್–ಉತ್ತರ ಕೊರಿಯಾ ಉತ್ತಮ ಬಾಂಧವ್ಯ ಹೊಂದಿವೆ. 1971ರಲ್ಲಿ ವಿದೇಶಾಂಗ ಸಚಿವರಾಗಿದ್ದ ಝುಲ್ಫಿಕರ್ ಅಲಿ ಭುಟ್ಟೋ ಅವರು ಉತ್ತರ ಕೊರಿಯಾಕ್ಕೆ ಭೇಟಿ ನೀಡಿ, ಸೇನೆಯನ್ನು ಬಲಪಡಿಸಲು ನೆರವು ಕೇಳಿದ್ದರು. 1976ರಲ್ಲಿ ಪ್ರಧಾನಿಯಾಗಿ ಮತ್ತೆ ಭೇಟಿ ನೀಡಿದ್ದರು. 1993ರಲ್ಲಿ ಅವರ ಮಗಳು, ಪ್ರಧಾನಿ ಬೆನೆಜೀರ್ ಭುಟ್ಟೋ ಅವರು ಉತ್ತರ ಕೊರಿಯಾಕ್ಕೆ ಭೇಟಿ ನೀಡಿದ್ದರು. ಪಾಕಿಸ್ತಾನದ ಪರಮಾಣು ವಿಜ್ಞಾನಿ ಎ.ಕ್ಯು.ಖಾನ್ ಅವರು 13 ಬಾರಿ ಉತ್ತರ ಕೊರಿಯಾಕ್ಕೆ ಭೇಟಿ ನೀಡಿದ್ದರು. ಅಷ್ಟೇ ಅಲ್ಲದೇ, 1989–2000ದ ನಡುವೆ ಉತ್ತರ ಕೊರಿಯಾಕ್ಕೆ ಪರಮಾಣು ತಂತ್ರಜ್ಞಾನವನ್ನು ಹಸ್ತಾಂತರಿಸಿರುವ ಕುರಿತು 2004ರಲ್ಲಿ ಸಾರ್ವಜನಿಕವಾಗಿ ತಪ್ಪೊಪ್ಪಿಕೊಂಡಿದ್ದರು. ನಂತರ ಪರ್ವೇಜ್ ಮುಷರಫ್ ಅವರಿಗೆ ಕ್ಷಮಾದಾನವನ್ನೂ ನೀಡಿದ್ದರು.




**ಪಾಕ್ ಬಳಿ ಇರುವ ಅಣ್ವಸ್ತ್ರ ಸಾಮರ್ಥ್ಯದ ಕ್ಷಿಪಣಿಗಳು**

| ಕ್ಷಿಪಣಿ | ದಾಳಿ ವ್ಯಾಪ್ತಿ (ಕಿ.ಮೀಗಳಲ್ಲಿ) |
|---|---|
| ಅಬ್ದಾಲಿ (ಹಾಟ್ಫ್–2) | 200 |
| ಘಜ್ನವಿ (ಹಾಟ್ಫ್–3) | 300 |
| ಶಾಹೀನ್–I/1ಎ (ಹಾಟ್ಫ್–4) | 750/900 |
| ಶಾಹೀನ್–II (ಹಾಟ್ಫ್–6) | 2,000 |
| ಶಾಹೀನ್–III | 2,750 |
| ಘೋರಿ (ಹಾಟ್ಫ್–5) | 1,250 |
| ನಾಸರ್ (ಹಾಟ್ಫ್–9) | 70 |
| ಅಬಾಬೀಲ್ | 2,200 |
| ಬಾಬರ್/–1ಎ ಜಿಎಲ್‌ಸಿಎಂ (ಹಾಟ್ಫ್–7) | 350/450 |
| ಬಾಬರ್–2/1ಬಿ ಜಿಎಲ್‌ಸಿಎಂ | 900 |

### ಭಾರತದ ನೀತಿ ಏನು?

ಭಾರತವು 2003ರಲ್ಲಿ ಅಣ್ವಸ್ತ್ರ ಬಳಕೆಗೆ ಸಂಬಂಧಿಸಿದಂತೆ ತನ್ನ ನೀತಿಯನ್ನು ಪ್ರಕಟಿಸಿದೆ.

ಯಾವುದೇ ಸಂದರ್ಭದಲ್ಲೂ ವೈರಿಯ ವಿರುದ್ಧ ಅಣ್ವಸ್ತ್ರವನ್ನು ಮೊದಲು ಬಳಸುವುದಿಲ್ಲ ಎಂಬುದು ಭಾರತದ ಸಿದ್ಧಾಂತ. ಒಂದು ವೇಳೆ ವೈರಿ ರಾಷ್ಟ್ರವು ತನ್ನ ಮೇಲೆ ಅಣ್ವಸ್ತ್ರದಿಂದ ದಾಳಿ ನಡೆಸಿದರೆ, ಅದಕ್ಕೆ ಪ್ರತೀಕಾರವಾಗಿ ಪರಮಾಣು ದಾಳಿ ನಡೆಸಲಾಗುವುದು. ತನ್ನ ನೆಲದ ಮೇಲೆ ದಾಳಿ ನಡೆಸಿದರೆ ಅಥವಾ ವಿದೇಶಿ ನೆಲದಲ್ಲಿರುವ ತನ್ನ ಪಡೆಗಳ ಮೇಲೆ ದಾಳಿ ನಡೆಸಿದರೆ ಅದಕ್ಕೆ ಪ್ರತಿಯಾಗಿ ಅಣ್ವಸ್ತ್ರವನ್ನು ಬಳಸಲಾಗುವುದು. ಅಣ್ವಸ್ತ್ರ ಹೊಂದಿರದ ರಾಷ್ಟ್ರದ ವಿರುದ್ಧ ಪರಮಾಣು ಬಾಂಬ್ ದಾಳಿ ನಡೆಸುವುದಿಲ್ಲ ಎಂದೂ ಭಾರತದ ನೀತಿ ಹೇಳುತ್ತದೆ. ಒಂದು ವೇಳೆ, ಯಾವುದೇ ರಾಷ್ಟ್ರವು ದೇಶದ/ ಸೇನೆಯ ಮೇಲೆ ಜೈವಿಕ ಅಥವಾ ರಾಸಾಯನಿಕ ಅಸ್ತ್ರಗಳಿಂದ ದಾಳಿ ನಡೆಸಿದರೆ, ಅಂತಹ ರಾಷ್ಟ್ರದ ಮೇಲೆ ಅಣ್ವಸ್ತ್ರ ದಾಳಿ ನಡೆಸಲಿದೆ ಎಂದು ನೀತಿಯಲ್ಲಿ ಹೇಳಲಾಗಿದೆ.

2016ರಲ್ಲಿ ಅಂದಿನ ರಕ್ಷಣಾ ಸಚಿವ ಮನೋಹರ್ ಪರಿಕ್ಕರ್ ಅವರು, ಭಾರತ ಈ ನೀತಿಗೆ ಬದ್ಧವಾಗಿರಬೇಕು ಎಂದೇನಿಲ್ಲ ಎಂದು ಹೇಳಿದ್ದು ಭಾರಿ ಸದ್ದು ಮಾಡಿತ್ತು. ನಂತರ ಪರಿಕ್ಕರ್ ಅವರು, ಅದು ತಮ್ಮ ವೈಯಕ್ತಿಕ ಅಭಿಪ್ರಾಯ ಎಂದು ಸ್ಪಷ್ಟನೆ ನೀಡಿದ್ದರು.

ಭಾರತಕ್ಕೆ ಹೋಲಿಸಿದರೆ, ಅಣ್ವಸ್ತ್ರ ಬಳಕೆಗೆ ಸಂಬಂಧಿಸಿದಂತೆ ಪಾಕಿಸ್ತಾನವು ಇಂತಹ ನೀತಿಯನ್ನು ಹೊಂದಿಲ್ಲ. ಪಾಕ್‌ನ ನ್ಯಾಷನಲ್ ಕಮಾಂಡ್ ಅಥಾರಿಟಿಯ (ಎನ್‌ಸಿಎ) ಕಾರ್ಯತಂತ್ರ ಯೋಜನೆಗಳ ವಿಭಾಗದ ಮುಖ್ಯಸ್ಥರಾಗಿದ್ದ ಖಾಲಿದ್ ಕಿದ್ವಾಯಿ ಅವರು 2001ರಲ್ಲಿ 'ದೇಶವು ಭಾರಿ ಪ್ರಮಾಣದಲ್ಲಿ ಭೂಪ್ರದೇಶ ಕಳೆದುಕೊಂಡಾಗ, ಪ್ರಮುಖ ಸೇನಾ ಆಸ್ತಿಗಳಿಗೆ ಧ್ವಂಸವಾದಾಗ, ಆರ್ಥಿಕವಾಗಿ ದೊಡ್ಡ ಹೊಡೆತ ನೀಡಿದಾಗ ಅಥವಾ ರಾಜಕೀಯ ಅಸ್ಥಿರತೆ ಉಂಟುಮಾಡಿದ ಸಂದರ್ಭಗಳಲ್ಲಿ ಅಣ್ವಸ್ತ್ರಗಳನ್ನು ಬಳಸಬಹುದು' ಎಂದು ಹೇಳಿದ್ದರು.

## ❖ ಆಂಧ್ರ ಪ್ರದೇಶ: ಮಹಿಳೆಯರಿಗೆ ಉಚಿತ ಬಸ್ ಪ್ರಯಾಣ

- ಆಂಧ್ರ ಪ್ರದೇಶದಲ್ಲಿ ನೆಲಸಿರುವ ಎಲ್ಲ ಹೆಣ್ಣುಮಕ್ಕಳು, ಮಹಿಳೆಯರು ಮತ್ತು ಲಿಂಗತ್ವ ಅಲ್ಪಸಂಖ್ಯಾತರು 'ಸ್ತ್ರೀ ಶಕ್ತಿ' ಯೋಜನೆಯಡಿ ಉಚಿತ ಬಸ್ ಪ್ರಯಾಣಕ್ಕೆ ಅರ್ಹರಾಗಿರುತ್ತಾರೆ ಎಂದು ಸಾರಿಗೆ ಇಲಾಖೆಯ ಪ್ರಧಾನ ಕಾರ್ಯದರ್ಶಿ ಕಾಂತಿಲಾಲ್ ದಂಡೆ ತಿಳಿಸಿದ್ದಾರೆ.
- ಯೋಜನೆಯು ಆಗಸ್ಟ್ 15ರಿಂದ ಆರಂಭವಾಗಲಿದ್ದು, ಫಲಾನುಭವಿಗಳು ಮಾನ್ಯತೆ ಇರುವ ಗುರುತಿನ ಚೀಟಿ ತೋರಿಸುವ ಮೂಲಕ ಉಚಿತವಾಗಿ ಪ್ರಯಾಣ ಮಾಡಬಹುದು ಎಂದು ದಂಡೆ ಸೋಮವಾರ ತಿಳಿಸಿದರು.
- ಆಂಧ್ರ ಪ್ರದೇಶ ರಾಜ್ಯ ರಸ್ತೆ ಸಾರಿಗೆ ನಿಗಮದಲ್ಲಿ ಲಭ್ಯವಿರುವ ಬಸ್‌ಗಳನ್ನೇ ಬಳಸಿಕೊಂಡು ಈ ಯೋಜನೆಯನ್ನು ಅನುಷ್ಠಾನಕ್ಕೆ ತರಲಾಗುವುದು. ಬೇಡಿಕೆ ಆಧರಿಸಿ ಹೆಚ್ಚುವರಿ ಬಸ್‌ಗಳನ್ನು ಖರೀದಿಸಲಾಗುವುದು ಎಂದು ಅವರು ತಿಳಿಸಿದರು.
- ಎನ್‌ಡಿಎ ನೇತೃತ್ವದ ಸರ್ಕಾರವು 2024ರ ಚುನಾವಣೆಯ ವೇಳೆ ಮಹಿಳೆಯರಿಗೆ ಉಚಿತ ಬಸ್ ಪ್ರಯಾಣ ಕಲ್ಪಿಸುವ ಭರವಸೆಯನ್ನು ನೀಡಿತ್ತು.

## ❖ ಎಂಟು ಮಸೂದೆಗಳಿಗೆ ಅನುಮೋದನೆ

- ವಿರೋಧ ಪಕ್ಷಗಳ ಭಾಗವಹಿಸುವಿಕೆ ಇಲ್ಲದೆಯೇ ಎಂಟು ಮಸೂದೆಗಳನ್ನು ಲೋಕಸಭೆಯಲ್ಲಿ ಅಂಗೀಕರಿಸಲಾಯಿತು.
- ಬಿಹಾರದಲ್ಲಿ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ಕುರಿತು ವಿರೋಧ ಪಕ್ಷಗಳ ಪ್ರತಿಭಟನೆಯ ನಡುವೆಯೂ ಲೋಕಸಭೆಯು ರಾಷ್ಟ್ರೀಯ ಕ್ರೀಡಾ ಮಸೂದೆ-2025, ರಾಷ್ಟ್ರೀಯ ಉದ್ದೀಪನ ಮದ್ದುಸೇವನೆ ತಡೆ (ತಿದ್ದುಪಡಿ) ಮಸೂದೆಗಳನ್ನು ಅಂಗೀಕರಿಸಿತು.
- ರಾಜ್ಯಸಭೆಯು ಗೋವಾ ವಿಧಾನಸಭೆ ಚುನಾವಣೆಯಲ್ಲಿ ಪರಿಶಿಷ್ಟ ಪಂಗಡಕ್ಕೆ (ಎಸ್‌ಟಿ) ಮೀಸಲಾತಿ ಕಲ್ಪಿಸುವ ಮಸೂದೆ ಮತ್ತು ಭಾರತೀಯ ವಾಣಿಜ್ಯ ಹಡಗು ಮಸೂದೆಯನ್ನು ಅಂಗೀಕರಿಸಿತು. ಲೋಕಸಭೆಯು ಈಗಾಗಲೇ ಅಂಗೀಕರಿಸಿದ್ದ ಮಣಿಪುರ ಧನ ವಿನಿಯೋಗ ಮಸೂದೆ ಮತ್ತು ಮಣಿಪುರ ಸರಕು ಮತ್ತು ಸೇವಾ ತೆರಿಗೆ (ತಿದ್ದುಪಡಿ) ಮಸೂದೆಯನ್ನು ಹಿಂದಿರುಗಿಸಿತು.

## ❖ ಹೊಸ ಐ.ಟಿ. ಮಸೂದೆಗೆ ಒಪ್ಪಿಗೆ

- ನಿಗದಿತ ದಿನಾಂಕಕ್ಕೆ ಮೊದಲು ಆದಾಯ ತೆರಿಗೆ (ಐ.ಟಿ) ವಿವರ ಸಲ್ಲಿಸಲು ಸಾಧ್ಯವಾಗದೆ ಇದ್ದರೂ, ಆದಾಯ ತೆರಿಗೆಯ ರೂಪದಲ್ಲಿ ಕಡಿತವಾದ ಮೊತ್ತವನ್ನು ದಂಡ ಪಾವತಿಸದೆಯೂ ಮರಳಿ ಪಡೆಯಲು ಅವಕಾಶ ಕಲ್ಪಿಸುವ ಮಸೂದೆಗೆ ಲೋಕಸಭೆಯು ಅಂಗೀಕಾರ ನೀಡಿದೆ.
- ಆದಾಯ ತೆರಿಗೆ (ಸಂಖ್ಯೆ 2) ಮಸೂದೆಯನ್ನು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಲೋಕಸಭೆಯಲ್ಲಿ ಮಂಡಿಸಿ ದರು. ಈ ಮಸೂದೆಯು 2026ರ ಏಪ್ರಿಲ್ 1ರಿಂದ ಅನ್ವಯವಾಗುವಂತೆ ಆದಾಯ ತೆರಿಗೆ ಕಾಯ್ದೆ – 1961ರ ಬದಲು ಜಾರಿಗೆ ಬರಲಿದೆ. ಹೊಸ ಮಸೂದೆಯನ್ನು ಲೋಕಸಭೆಯು ಗದ್ದಲದ ನಡುವೆ ಚರ್ಚೆ ಇಲ್ಲದೆ ಅಂಗೀಕರಿಸಿತು.

Dr. Rajkumar IAS/KAS Academy

- ವ್ಯಕ್ತಿಗಳ ಹಾಗೂ ಕಂಪನಿಗಳ ಆದಾಯಕ್ಕೆ ವಿಧಿಸುವ ತೆರಿಗೆಗೆ ಸಂಬಂಧಿಸಿದ, 63 ವರ್ಷಗಳಷ್ಟು ಹಳೆಯದಾದ ಕಾಯ್ದೆಯ ಬದಲಿಗೆ ಜಾರಿಗೆ ತರಲು ಉದ್ದೇಶಿಸಲಾಗಿರುವ ಮಸೂದೆಗೆ ಲೋಕಸಭೆಯು ಮೂರು ನಿಮಿಷಗಳಲ್ಲಿ ಅಂಗೀಕಾರ ನೀಡಿದೆ.
- ಆದಾಯ ತೆರಿಗೆ ಕಾಯ್ದೆಗೆ ಹೋಲಿಸಿದರೆ, ಈ ಮಸೂದೆಯು ಪದಗಳನ್ನು ಹಾಗೂ ಸಂಕೀರ್ಣತೆಯನ್ನು ಕಡಿಮೆ ಮಾಡಿದೆ ಎನ್ನಲಾಗಿದೆ. ಮಸೂದೆಯಲ್ಲಿ ಇರುವ ವಿವರಗಳು ಸುಲಭವಾಗಿ ಅರ್ಥವಾಗುವ ಬಗೆಯಲ್ಲಿ ಇವೆ. 'ತೆರಿಗೆ ನಿರ್ಧರಿಸುವ ವರ್ಷ' , 'ಹಿಂದಿನ ವರ್ಷ' ಎಂಬ ಗೊಂದಲ ಮೂಡಿಸುವ ಪದಗಳ ಬಳಕೆಯನ್ನು ಕೈಬಿಟ್ಟಿರುವ ಈ ಮಸೂದೆಯು 'ತೆರಿಗೆ ವರ್ಷ' ಎಂಬ ಪದಗಳನ್ನು ಬಳಸಿದೆ.
- ಮಸೂದೆಗೆ ರಾಜ್ಯಸಭೆಯ ಒಪ್ಪಿಗೆ ಸಿಗಬೇಕಿದೆ. ಅದು ದೊರೆತ ನಂತರ ರಾಷ್ಟ್ರಪತಿಯವರ ಅಂಕಿತ ಬೇಕಾಗುತ್ತದೆ. ನಂತರದಲ್ಲಿ ಈ ಮಸೂದೆಯು ಕಾಯ್ದೆಯಾಗಿ ಜರಿಗೆ ಬರುತ್ತದೆ.
- ಫೆಬ್ರುವರಿಯಲ್ಲಿ ಮಂಡಿಸಲಾಗಿದ್ದ 'ಆದಾಯ ತೆರಿಗೆ ಮಸೂದೆ – 2025'ಅನ್ನು ನಿರ್ಮಲಾ ಅವರು ಹಿಂದಕ್ಕೆ ಪಡೆದಿದ್ದರು. ಪರಿಷ್ಕೃತ ಮಸೂದೆಯನ್ನು ಮಂಡಿಸಿದರು. ಪರಿಷ್ಕೃತ ಮಸೂದೆಯು ಸಂಸತ್ತಿನ ಪರಿಶೀಲನಾ ಸಮಿತಿಯು ನೀಡಿದ್ದ ಬಹುತೇಕ ಎಲ್ಲ ಶಿಫಾರಸುಗಳನ್ನು ಒಳಗೊಂಡಿದೆ. ಈ ಸಮಿತಿಯು ಮೂಲ ಮಸೂದೆಯನ್ನು ಪರಿಶೀಲಿಸಿ, ಶಿಫಾರಸುಗಳನ್ನು ನೀಡಿತ್ತು.
- ನಿಗದಿತ ದಿನಾಂಕಕ್ಕೆ ಮೊದಲು ಐ.ಟಿ. ವಿವರ ಸಲ್ಲಿಸದೆ ಇರುವವರ 'ಮೂಲದಲ್ಲೇ ತೆರಿಗೆ ಕಡಿತ' ದ ಕ್ಲೇಮ್‌ಗೆ ಸಂಬಂಧಿಸಿದ ಕಾನೂನಿನ ಅಂಶಗಳನ್ನು ಬದಲಾಯಿಸಬೇಕು ಎಂದು ಪರಿಶೀಲನಾ ಸಮಿತಿಯು ಹೇಳಿತ್ತು.
- ಪರಿಷ್ಕೃತ ಮಸೂದೆಯ ಪ್ರಕಾರ, ಗಡುವಿನ ನಂತರ ಐ.ಟಿ. ವಿವರ ಸಲ್ಲಿಸುವವರು ಕೂಡ ತಮ್ಮ ಟಿಡಿಎಸ್ ಗೆ ದಂಡಶುಲ್ಕ ಇಲ್ಲದೆ ಮರುಪಾವತಿ ಕ್ಲೇಮ್ ಸಲ್ಲಿಸಲು ಅವಕಾಶ ಇರುತ್ತದೆ.
- ಹಣಕಾಸು ಸಚಿವಾಲಯವು ಈಗ ಜಾರಿಯಲ್ಲಿ ಇರುವ ಆದಾಯ ತೆರಿಗೆ ಕಾಯ್ದೆಯ ಅಂಶಗಳನ್ನು ಹೊಸ ಮಸೂದೆಯಲ್ಲಿ ಸೇರಿಸಿಕೊಂಡಿದೆ.

**ತೆರಿಗೆ ಅಧಿಕಾರಿಗಳಿಗೆ ಹೆಚ್ಚಿನ ಅಧಿಕಾರ**

- ಹೊಸ ಮೂದೆಯು 2026ರ ಏಪ್ರಿಲ್ 1ರಿಂದ ಜಾರಿಗೆ ಬಂದ ನಂತರ, ತೆರಿಗೆ ವಂಚನೆಯ ಅನುಮಾನ ಬಂದರೆ ಆದಾಯ ತೆರಿಗೆ ಇಲಾಖೆಯ ಅಧಿಕಾರಿಗಳು ವ್ಯಕ್ತಿಗಳ ಡಿಜಿಟಲ್ ಖಾತೆಗಳಾದ ಇ-ಮೇಲ್, ಸಾಮಾಜಿಕ ಜಾಲತಾಣ ಖಾತೆಗಳು, ಬ್ಯಾಂಕ್ ಖಾತೆಗಳು, ಷೇರು ಟ್ರೇಡಿಂಗ್ ವೇದಿಕೆಗಳು, ಆನ್‌ಲೈನ್ ಮೂಲಕ ಮಾಡಿರುವ ಹೂಡಿಕೆಗಳನ್ನು ಪರಿಶೀಲಿಸಲು ಅಧಿಕಾರ ಪಡೆಯುತ್ತಾರೆ ಎಂದು ತಜ್ಞರು ಹೇಳಿದ್ದಾರೆ.
- ಆದಾಯ ತೆರಿಗೆ ಇಲಾಖೆ ಅಧಿಕಾರಿಗಳು ಕೀಲಿಕೈ ಸಿಗದೆ ಇದ್ದರೆ ಯಾವುದೇ ಬಾಗಿಲು, ಪೆಟ್ಟಿಗೆ, ಲಾಕರ್, ಕಪಾಟಿನ ಬೀಗವನ್ನು ಮುರಿಯುವ ಅಧಿಕಾರವನ್ನು ಹೊಂದಿರುತ್ತಾರೆ ಎಂದು ಹೊಸ ಮಸೂದೆಯಲ್ಲಿ ಹೇಳಲಾಗಿದೆ. ಕಂಪ್ಯೂಟರ್ ವ್ಯವಸ್ಥೆಯನ್ನು ಪರಿಶೀಲಿಸಲು ಅವರಿಗೆ ಪಾಸ್‌ವರ್ಡ್ ಸಿಗದೆ ಇದ್ದರೆ, ಅದನ್ನು ಮೀರಿ ಆ ವ್ಯವಸ್ಥೆಯನ್ನು ಪರಿಶೀಲಿಸುವ ಅಧಿಕಾರವು ಅವರಿಗೆ ಇರುತ್ತದೆ.

Dr. Rajkumar IAS/KAS Academy

## ❖ 'ಕನಿಷ್ಠ ಮೊತ್ತ ಬ್ಯಾಂಕ್‌ಗಳ ವಿವೇಚನೆ'

- ಉಳಿತಾಯ ಖಾತೆಯಲ್ಲಿ ಗ್ರಾಹಕರು ಇರಿಸಬೇಕಿರುವ ಕನಿಷ್ಠ ಮೊತ್ತ ಎಷ್ಟು ಎಂಬುದರ ಬಗ್ಗೆ ತೀರ್ಮಾನ ತೆಗೆದು ಕೊಳ್ಳಲು ಬ್ಯಾಂಕ್‌ಗಳು ಸ್ವಾತಂತ್ರ್ಯ ಹೊಂದಿವೆ ಎಂದು ಆರ್‌ಬಿಐ ಗವರ್ನರ್ ಸಂಜಯ್ ಮಲ್ಹೋತ್ರಾ ಹೇಳಿದ್ದಾರೆ.
- **ಉಳಿತಾಯ ಖಾತೆಯಲ್ಲಿ ಕನಿಷ್ಠ ಎಷ್ಟು ಮೊತ್ತ ಇರಿಸಿಕೊಳ್ಳಬೇಕು ಎಂಬುದು ಆರ್‌ಬಿಐನ ನಿಯಂತ್ರಣ ವ್ಯಾಪ್ತಿಗೆ ಬರುವುದಿಲ್ಲ** ಎಂದು ಅವರು ಸ್ಪಷ್ಟಪಡಿಸಿದ್ದಾರೆ.
- ಉಳಿತಾಯ ಖಾತೆಯಲ್ಲಿ ಇರಿಸಬೇಕಿರುವ ಕನಿಷ್ಠ ಮೊತ್ತ ವನ್ನು ಖಾಸಗಿ ಬ್ಯಾಂಕೊಂದು ಹೆಚ್ಚು ಮಾಡಿರುವ ಬಗ್ಗೆ ಪ್ರಶ್ನಿಸಿದಾಗ ಮಲ್ಹೋತ್ರಾ ಈ ಉತ್ತರ ನೀಡಿದ್ದಾರೆ. 'ಕನಿಷ್ಠ ಮೊತ್ತ ಎಷ್ಟಿರಬೇಕು ಎಂಬುದನ್ನು ನಿಗದಿ ಮಾಡುವ ಸ್ವಾತಂತ್ರ್ಯವನ್ನು ಆಯಾ ಬ್ಯಾಂಕ್‌ಗಳಿಗೆ ನೀಡಲಾಗಿದೆ.
- ಕೆಲವು ಬ್ಯಾಂಕ್‌ಗಳು ₹10 ಸಾವಿರ, ಇನ್ನು ಕೆಲವು ಬ್ಯಾಂಕ್‌ಗಳು ₹2,000 ಕನಿಷ್ಠ ಮೊತ್ತ ನಿಗದಿ ಮಾಡಿವೆ. ಕೆಲವು ಬ್ಯಾಂಕ್‌ಗಳು ಕನಿಷ್ಠ ಮೊತ್ತ ಕಾಯ್ದುಕೊಳ್ಳುವ ಅಗತ್ಯವೇ ಇಲ್ಲ ಎಂದು ಹೇಳಿವೆ' ಎಂದಿದ್ದಾರೆ.
- ಐಸಿಐಸಿಐ ಬ್ಯಾಂಕ್ ನಗರ ಹಾಗೂ ಮಹಾನಗರ ಪ್ರದೇಶಗಳ ತನ್ನ ಗ್ರಾಹಕರು ಆಗಸ್ಟ್ 1ರ ನಂತರ ತೆರೆದ ಉಳಿತಾಯ ಖಾತೆಗಳಲ್ಲಿ ಮಾಸಿಕ ಸರಾಸರಿ ಕನಿಷ್ಠ ಮೊತ್ತವಾಗಿ ₹50 ಸಾವಿರ ಇರಿಸಬೇಕು ಎಂದು ಹೇಳಿದೆ. ಆದರೆ **ದೇಶದ ಅತಿದೊಡ್ಡ ಬ್ಯಾಂಕ್ ಆಗಿರುವ ಎಸ್‌ಬಿಐ, ಉಳಿತಾಯ ಖಾತೆಯಲ್ಲಿ ಕನಿಷ್ಠ ಮೊತ್ತ ಕಾಯ್ದುಕೊಳ್ಳುವ ಅಗತ್ಯ ಇಲ್ಲ ಎಂದು ತನ್ನ ಗ್ರಾಹಕರಿಗೆ ಹೇಳಿದೆ.**

## ❖ ರಫ್ತು ಹೆಚ್ಚಿಸಲು 50 ದೇಶಗಳ ಕಡೆ ಗಮನ

- ಭಾರತದ ಸರಕುಗಳಿಗೆ ಅಮೆರಿವು ಭಾರಿ ಪ್ರಮಾಣದಲ್ಲಿ ಸುಂಕ ವಿಧಿಸಿರುವ ಸಂದರ್ಭದಲ್ಲಿ, ಭಾರತದಿಂದ ರಫ್ತು ಹೆಚ್ಚಿಸಲು ಕೇಂದ್ರ ಸರ್ಕಾರವು ಕೆಲವು ಕ್ರಮಗಳನ್ನು ಕೈಗೊಳ್ಳಲು ಮುಂದಾಗಿದೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.
- ಪಶ್ಚಿಮ ಏಷ್ಯಾ ಹಾಗೂ ಆಫ್ರಿಕಾದ ದೇಶಗಳು ಸೇರಿ ಒಟ್ಟು 50 ದೇಶಗಳನ್ನು ಗುರಿಯಾಗಿಸಿಕೊಂಡು ರಫ್ತು ಹೆಚ್ಚು ಮಾಡುವುದು ಕೂಡ ಕೇಂದ್ರದ ಕ್ರಮಗಳ ಭಾಗವಾಗಿದೆ ಎಂದು ಅವರು ಹೇಳಿದ್ದಾರೆ. ಈ ದೇಶಗಳು ಭಾರತದ ಒಟ್ಟು ರಫ್ತಿನ ಶೇ 90ರಷ್ಟು ಪಾಲನ್ನು ಹೊಂದಿವೆ.
- ಕೇಂದ್ರ ವಾಣಿಜ್ಯ ಸಚಿವಾಲಯವು 20 ದೇಶಗಳನ್ನು ಕೇಂದ್ರೀಕರಿಸಿಕೊಂಡು ಅದಾಗಲೇ ಕ್ರಮಗಳನ್ನು ಕೈಗೊಂಡಿತ್ತು. ಆದರೆ ಈಗ ಹೆಚ್ಚುವರಿಯಾಗಿ 30 ದೇಶಗಳನ್ನು ಈ ಪಟ್ಟಿಗೆ ಸೇರಿಸಲಾಗಿದೆ ಎಂದು ಗೊತ್ತಾಗಿದೆ.
- ಹೊಸ ಮಾರುಕಟ್ಟೆ ಅರಸಲು ಸಲಹೆ: ಸಾಗರೋತ್ಪನ್ನಗಳ ರಫ್ತು ದಾರರು ಅಮೆರಿಕ ವಿಧಿಸಿರುವ ಭಾರಿ ಸುಂಕದ ಸವಾಲನ್ನು ಧೈರ್ಯ ದಿಂದ ಎದುರಿಸಬೇಕು, ಸಿಗಡಿ ಹಾಗೂ ಇತರ ಉತ್ಪನ್ನಗಳನ್ನು ರಫ್ತು ಮಾಡಲು ಪರ್ಯಾಯ ಮಾರುಕಟ್ಟೆಗಳನ್ನು ಅರಸಬೇಕು ಎಂದು ಕೇಂದ್ರ ಹೇಳಿದೆ.
- 'ಭಾರತದ ಸಾಗರೋತ್ಪನ್ನಗಳ ರಫ್ತಿಗೆ ಪರ್ಯಾಯ ಮಾರುಕಟ್ಟೆ ಲಭ್ಯವಿವೆ' ಎಂದು ಕೇಂದ್ರ ಮೀನುಗಾರಿಕಾ ಸಚಿವ ರಾಜೀವ್ ರಂಜನ್ ಸಿಂಗ್ ಅವರು ಪತ್ರಿಕಾಗೋಷ್ಠಿಯಲ್ಲಿ ಹೇಳಿದ್ದಾರೆ.
- 'ಐರೋಪ್ಯ ಒಕ್ಕೂಟ, ಜಪಾನ್, ದಕ್ಷಿಣ ಕೊರಿಯಾ, ಬ್ರಿಟನ್, ರಷ್ಯಾ, ಆಸ್ಟ್ರೇಲಿಯಾ, ಪಶ್ಚಿಮ ಏಷ್ಯಾದ ದೇಶಗಳಿಗೆ ರಫ್ತು ಮಾಡಲು ಅವಕಾಶ ಇದೆ' ಎಂದು ಅವರು ಹೇಳಿದ್ದಾರೆ.

Dr. Rajkumar IAS KAS Academy

## ❖ ಏಷ್ಯನ್ ಬಾಕ್ಸಿಂಗ್: ರಿತಿಕಾಗೆ ಚಿನ್ನದ ಪದಕ

- ಭಾರತದ ಬಾಕ್ಸರ್‌ಗಳು ಇಲ್ಲಿ ನಡೆದ 19 ಮತ್ತು 22 ವರ್ಷದೊಳಗಿನ ಏಷ್ಯನ್ ಬಾಕ್ಸಿಂಗ್ ಚಾಂಪಿಯನ್ ಷಿಪ್‌ನಲ್ಲಿ ಉತ್ತಮ ಸಾಧನೆ ಮಾಡಿದರು. 19 ವರ್ಷದೊಳಗಿನವರ ಭಾರತ ತಂಡವು 14 ಪದಕಗಳೊಂದಿಗೆ ಟೂರ್ನಿಯ ಪದಕಪಟ್ಟಿಯಲ್ಲಿ ಎರಡನೇ ಸ್ಥಾನ ಪಡೆದರೆ, 22 ವರ್ಷದೊಳಗಿನವರ ತಂಡವು ನಾಲ್ಕನೇ ಸ್ಥಾನ (13 ಪದಕ) ಗಳಿಸಿತು.
- ಟೂರ್ನಿಯ ಅಂತಿಮ ದಿನವಾದ ಸೋಮವಾರ, ರಿತಿಕಾ 22 ವರ್ಷದೊಳಗಿನ ಮಹಿಳೆಯರ ವಿಭಾಗದ 80+ ಕೆ.ಜಿ. ಸ್ಪರ್ಧೆಯಲ್ಲಿ ಚಿನ್ನದ ಪದಕ ಗೆದ್ದು ಬೀಗಿದರು. ಫೈನಲ್ ಪಂದ್ಯದಲ್ಲಿ ಅವರು 4:1ರಿಂದ ಕಜಕಸ್ತಾನದ ಆ್ಯಸಲ್ ಟಾಕ್ಟಸಿನ್ ಅವರನ್ನು ಮಣಿಸಿದರು.
- ಇದಕ್ಕೂ ಮೊದಲು ನಡೆದ ಮಹಿಳೆಯರ 57 ಕೆ.ಜಿ. ವಿಭಾಗದ ಫೈನಲ್‌ನಲ್ಲಿ ಯಾತ್ರಿ ಪಟೇಲ್ ಅವರು ಉಜ್ಬೇಕಿಸ್ತಾನದ ಖುಮೊರಾಬೊನು ಮಮಜೋನಾವಾ ಎದುರು ಪರಾಭವಗೊಂಡರು. ಪ್ರಿಯಾ ಅವರು 60 ಕೆ.ಜಿ. ವಿಭಾಗದಲ್ಲಿ ಚೀನಾದ ಯು ಟಿಯಾನ್ ವಿರುದ್ಧ ಹೋರಾಡಿ ಸೋತು, ಬೆಳ್ಳಿ ಪದಕ ಪಡೆದರು.

## ❖ ಸೂರಜ್ ಸಾರಥ್ಯದ ಏಷ್ಯಾ ತಂಡಕ್ಕೆ ಶೇರ್ಗರ್ ಕಪ್

- ಭಾರತದ ಜಾಕಿ ಸೂರಜ್ ನರೇಡು ನಾಯಕತ್ವದ ಏಷ್ಯಾ ತಂಡವು ಬ್ರಿಟನ್‌ನ ಆಸ್ಕಾಟ್ ರೇಸ್ ಕೋರ್ಸ್‌ನಲ್ಲಿ ನಡೆದ 2025ರ 'ಶೇರ್ಗರ್ ಕಪ್' ಟ್ರೋಫಿಯನ್ನು ಗೆದ್ದುಕೊಂಡಿತು.
- 40 ವರ್ಷ ವಯಸ್ಸಿನ ಸೂರಜ್ ಅವರು ಜಪಾನ್‌ನ ಜಾಕಿಗಳಾದ ರ್ಯುಸೆ ಸಕೈ ಮತ್ತು ಮಿರೈ ಇವಾಟಾ ಅವರ ಜೊತೆಗೂಡಿ ಆರು ರೇಸ್‌ಗಳಲ್ಲಿ ಎರಡನ್ನು ಗೆದ್ದರು.
- ಒಟ್ಟು 68 ಅಂಕ ಗಳಿಸಿದ ಏಷ್ಯಾ ತಂಡವು ಅಗ್ರಸ್ಥಾನ ಪಡೆಯಿತು. ಯುರೋಪ್ ತಂಡ (67) ಎರಡನೇ ಸ್ಥಾನ ಪಡೆದರೆ, 62 ಅಂಕ ಪಡೆದ ಗ್ರೇಟ್ ಬ್ರಿಟನ್ ಮತ್ತು ಐರ್ಲೆಂಡ್ ತಂಡ ಮೂರನೇ ಸ್ಥಾನ ಗಳಿಸಿತು.

## ❖ ಲೋಕಸಭೆ: ಕ್ರೀಡಾ ಮಸೂದೆ ಅಂಗೀಕಾರ

- ಬಹುನಿರೀಕ್ಷಿತ ರಾಷ್ಟ್ರೀಯ ಕ್ರೀಡಾ ಆಡಳಿತ ಮಸೂದೆಯು ಲೋಕಸಭೆಯಲ್ಲಿ ಸೋಮವಾರ ಅಂಗೀಕಾರ ಪಡೆಯಿತು. ಸ್ವಾತಂತ್ರ್ಯಾನಂತರ ಭಾರತದ ಕ್ರೀಡಾಕ್ಷೇತ್ರದಲ್ಲಿ ಆದ ಅತಿದೊಡ್ಡ ಸುಧಾರಣೆ ಇದು.
- 'ಈ ಮಸೂದೆಯ ಉತ್ತರದಾಯಿತ್ವ, ನ್ಯಾಯದ ಖಾತರಿ, ಕ್ರೀಡಾ ಫೆಡರೇಷನ್‌ಗಳಲ್ಲಿ ಉತ್ತಮ ಆಡಳಿತವನ್ನು ಖಾತರಿಪಡಿಸಲಿದೆ.
- 2036ರ ಒಲಿಂಪಿಕ್ಸ್ ಆತಿಥ್ಯದ ಬಿಡ್‌ಗೆ ಭಾರತ ಯತ್ನಿಸುತ್ತಿದ್ದು, ಇಂಥ ಸಂದರ್ಭದಲ್ಲಿ ಪಾರದರ್ಶಕ, ಉತ್ತರದಾಯಿತ್ವ ಮತ್ತು ವಿಶ್ವ ದರ್ಜೆಯ ಕ್ರೀಡಾ ವ್ಯವಸ್ಥೆ ನಿರ್ಮಿಸುವ ಆಶಯಕ್ಕೆ ಅಗತ್ಯವಿರುವ ಸುಧಾರಣಾ ಕ್ರಮಗಳನ್ನು ಈ ಮಸೂದೆ ಹೊಂದಿದೆ ಎಂದು ಮಾಂಡವೀಯ ಹೇಳಿದರು.
- ರಾಷ್ಟ್ರೀಯ ಉದ್ದೀಪನ ಮದ್ದುಸೇವನೆ ತಡೆ (ತಿದ್ದುಪಡಿ) ಮಸೂದೆಯನ್ನೂ ಅಂಗೀಕರಿಸಲಾಯಿತು.
- ರಾಷ್ಟ್ರೀಯ ಉದ್ದೀಪನ ಮದ್ದುಸೇವನೆ ತಡೆ (ತಿದ್ದುಪಡಿ) ಮಸೂದೆಯು, ರಾಷ್ಟ್ರೀಯ ಉದ್ದೀಪನ ಮದ್ದುಸೇವನೆ ತಡೆ ಘಟಕದ (ನಾಡಾ) ಕಾರ್ಯನಿರ್ವಹಣೆಯಲ್ಲಿ ಸರ್ಕಾರದ ಹಸ್ತಕ್ಷೇಪಕ್ಕೆ ದಾರಿಯಾಗಲಿದೆ ಎಂದು ವಿಶ್ವ ಉದ್ದೀಪನ ಮದ್ದುಸೇವನೆ ತಡೆ ಘಟಕ (ವಾಡಾ) ಆಕ್ಷೇಪ ವ್ಯಕ್ತಪಡಿಸಿದ್ದರಿಂದ ಕೆಲವು ಬದಲಾವಣೆಗಳನ್ನು ಇದರಲ್ಲಿ ತರಲಾಗಿದೆ.
- 2022ರಲ್ಲಿ ಈ ಮಸೂದೆ ಸಿದ್ಧಗೊಂಡಿದ್ದರೂ, ವಾಡಾ ಆಕ್ಷೇಪದ ಕಾರಣ ತಡೆಹಿಡಿಯಲಾಗಿತ್ತು. ರಾಷ್ಟ್ರೀಯ ಉದ್ದೀಪನ ಮದ್ದು ಸೇವನೆ ತಡೆ ಮಂಡಳಿ ರಚಿಸುವ ಉದ್ದೇಶವನ್ನು ಮೂಲ ಮಸೂದೆ ಹೊಂದಿದ್ದು, ಇದನ್ನು ವಾಡಾ ವಿರೋಧಿಸಿತ್ತು. ಈಗಿನ ಮಸೂದೆಯಲ್ಲಿ ಮಂಡಳಿಯನ್ನು ಉಳಿಸಿಕೊಂಡಿದ್ದರೂ, ಅದು 'ನಾಡಾ' ಕಾರ್ಯನಿರ್ವಹಣೆಯ ಅಧಿಕಾರದಲ್ಲಿ ಅಡ್ಡಿಬರದು.

Dr. Rajkumar IAS/KAS Academy

## ❖ ಪೌರತ್ವ ದೃಢೀಕರಿಸಲು ಆಧಾರ್ ದಾಖಲೆ ಅಲ್ಲ: ಒಪ್ಪಿದ 'ಸುಪ್ರೀಂ'

- ಪೌರತ್ವವನ್ನು ದೃಢೀಕರಿಸಲು ಆಧಾರ್ ಕಾರ್ಡ್ ಅನ್ನು ನಿರ್ಣಾಯಕ ದಾಖಲೆಯಾಗಿ ಪರಿಗಣಿ ಸಲು ಸಾಧ್ಯವಿಲ್ಲ ಎಂಬ ಚುನಾವಣಾ ಆಯೋಗದ ನಿಲುವನ್ನು ಸುಪ್ರೀಂ ಕೋರ್ಟ್ ಒಪ್ಪಿಕೊಂಡಿದೆ.
- ಬಿಹಾರದಲ್ಲಿ ಚುನಾವಣಾ ಆಯೋಗ ಕೈಗೊಂಡಿರುವ ಮತದಾರರ ಪಟ್ಟಿ ವಿಶೇಷ ಪರಿಷ್ಕರಣೆ (ಎಸ್‌ಐಆರ್) ಪ್ರಕ್ರಿಯೆಯ ವಿರುದ್ಧ ಸಲ್ಲಿಕೆಯಾಗಿರುವ ಅರ್ಜಿಗಳ ವಿಚಾರಣೆ ವೇಳೆ ಸುಪ್ರೀಂ ಕೋರ್ಟ್ ಈ ಮಹತ್ವದ ನಿಲುವು ತೆಗೆದುಕೊಂಡಿದೆ.
- ಆಧಾರ್ ಕಾರ್ಡ್, ಮತದಾರರ ಗುರುತಿನ ಪತ್ರ (ಎಪಿಕ್) ಮತ್ತು ಪಡಿತರ ಚೀಟಿಗಳನ್ನು ಪೌರತ್ವ ದೃಢೀಕರಿಸಲು ನಿರ್ಣಾಯಕ ಪುರಾವೆಯಾಗಿ ಪರಿಗಣಿಸಲು ಸಾಧ್ಯವಿಲ್ಲ ಎಂದು ಚುನಾವಣಾ ಆಯೋಗವು ಈ ಹಿಂದೆ ಸುಪ್ರೀಂ ಕೋರ್ಟ್‌ಗೆ ತಿಳಿಸಿತ್ತು. ಇದನ್ನು ಒಪ್ಪಿಕೊಂಡ ಪೀಠ, 'ಈ ದಾಖಲೆಗಳಿಗೆ ಬೆಂಬಲವಾಗಿ ಇತರೆ ದಾಖಲೆಗಳನ್ನೂ ನೀಡಬೇಕು' ಎಂದು ಹೇಳಿತು.
- 'ಆಧಾರ್ ಅನ್ನು ಪೌರತ್ವದ ನಿರ್ಣಾಯಕ ಪುರಾವೆಯಾಗಿ ಸ್ವೀಕರಿಸಲು ಸಾಧ್ಯವಿಲ್ಲ ಎಂದು ಚುನಾವಣಾ ಆಯೋಗವು ಹೇಳುವುದು ಸರಿಯಾ ಗಿಯೇ ಇದೆ. ಆಧಾರ್ ಅನ್ನೂ ಪರಿಶೀಲನೆಗೆ ಒಳಪಡಿಸಬೇಕು. ಆಧಾರ್ ಕಾಯ್ದೆಯ ಸೆಕ್ಷನ್ 9 ನಿರ್ದಿಷ್ಟವಾಗಿ ಅದನ್ನೇ ಹೇಳುತ್ತದೆ' ಎಂದು ಪೀಠವು ಅರ್ಜಿದಾರರ ಪರ ಹಾಜರಿದ್ದ ಹಿರಿಯ ವಕೀಲ ಅಭಿಷೇಕ್ ಸಿಂಘ್ವಿ ಅವರಿಗೆ ತಿಳಿಸಿತು.

**ಪೀಠ ಹೇಳಿದ್ದು....**

- **। ಪೌರತ್ವವನ್ನು ನೀಡುವ ಅಥವಾ ಹಿಂತೆಗೆದುಕೊಳ್ಳುವ ಕಾನೂನನ್ನು ಸಂಸತ್ತು ಅಂಗೀಕರಿಸಬೇಕು. ಆದರೆ, ಪೌರತ್ವ ಹೊಂದಿರುವವರು ಮತ್ತು ಹೊಂದಿಲ್ಲದವರನ್ನು ಮತದಾರರ ಪಟ್ಟಿಗೆ ಸೇರಿಸುವ ಹಾಗೂ ಹೊರಗಿಡುವ ಅಧಿಕಾರ ಚುನಾವಣಾ ಆಯೋಗಕ್ಕೆ ಇದೆ.**
- । ಜೀವಂತ ವ್ಯಕ್ತಿಯನ್ನು 'ಸತ್ತಿದ್ದಾನೆ' ಎಂದು ಘೋಷಿಸಿರುವ ಅಥವಾ ಸತ್ತ ವ್ಯಕ್ತಿಯನ್ನು 'ಜೀವಂತವಾಗಿದ್ದಾನೆ' ಎಂದು ತೋರಿಸಿರುವ ಲೋಪಗಳನ್ನು ಸರಿಪಡಿಸಲು ಅವಕಾಶವಿದೆ
- । ಎಸ್‌ಐಆರ್‌ನಲ್ಲಿ ಅಕ್ರಮ ಕಂಡುಬಂದರೆ ಇಡೀ ಪ್ರಕ್ರಿಯೆಯನ್ನು ರದ್ದುಪಡಿಸಲಾಗುವುದು ಎಂದು ಈ ಹಿಂದೆ ಹೇಳಿದ್ದ ಸುಪ್ರೀಂ ಕೋರ್ಟ್, ಅದನ್ನು ಪುನರುಚ್ಚರಿಸಿದೆ

## ❖ ನ್ಯಾ. ವರ್ಮಾ ಪದಚ್ಯುತಿಗೆ ಪ್ರಕ್ರಿಯೆ ಶುರು

- ಅಲಹಾಬಾದ್ ಹೈಕೋರ್ಟ್ ನ್ಯಾಯಮೂರ್ತಿ ಯಶವಂತ್ ವರ್ಮಾ ವಿರುದ್ಧದ ನಗದು ಪತ್ತೆ ಆರೋಪಗಳ ತನಿಖೆ ಗಾಗಿ ಮೂವರು ಸದಸ್ಯರ ಸಮಿತಿಯನ್ನು ಲೋಕಸಭಾ ಅಧ್ಯಕ್ಷ ಓಂ ಬಿರ್ಲಾ ರಚಿಸಿದ್ದಾರೆ.
- ಸುಪ್ರೀಂ ಕೋರ್ಟ್ ನ್ಯಾ.ಅರವಿಂದ ಕುಮಾರ್, ಮದ್ರಾಸ್ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ ಮಣಿಂದರ್ ಮೋಹನ್ ಶ್ರೀವಾಸ್ತವ ಮತ್ತು ಕರ್ನಾಟಕ ಹೈಕೋರ್ಟ್‌ನ ಹಿರಿಯ ವಕೀಲ ಬಿ.ವಿ. ಆಚಾರ್ಯ ಅವರು ಸಮಿತಿಯ ಸದಸ್ಯರಾಗಿರುವರು.
- ನ್ಯಾಯಮೂರ್ತಿಗಳ ವಿಚಾರಣಾ ಕಾಯ್ದೆ ಸೆಕ್ಷನ್ 3ರ ಹಾಗೂ ಸಂವಿಧಾನದ 124, 217 ಮತ್ತು 218ನೇ ವಿಧಿಗಳ ಅಡಿಯಲ್ಲಿ ನ್ಯಾ. ವರ್ಮಾ ಅವರನ್ನು ಪದಚ್ಯುತಗೊಳಿಸುವಂತೆ ಆಗ್ರಹಿಸಿ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ, ಬಿಜೆಪಿ ಸಂಸದ ರವಿಶಂಕರ ಪ್ರಸಾದ್ ಸೇರಿದಂತೆ 146 ಸಂಸದರಿಂದ ಪದಚ್ಯುತಿಯ ಪ್ರಸ್ತಾವ ಜುಲೈ 21ರಂದು ಸಲ್ಲಿಕೆಯಾಗಿತ್ತು.
- 'ಪ್ರಸ್ತುತ ಪ್ರಕರಣದಲ್ಲಿರುವ ಸಂಗತಿಗಳು ಭ್ರಷ್ಟಾಚಾರದ ಕಡೆಗೆ ಬೆರಳು ತೋರಿಸುತ್ತವೆ ಮತ್ತು ಸಂವಿಧಾನದ 124, 217 ಮತ್ತು 218ನೇ ವಿಧಿಗಳ ಅಡಿಯಲ್ಲಿ ಕ್ರಮಕ್ಕೆ ಅರ್ಹವಾಗಿವೆ.
- ವರ್ಮಾ ಅವರ ನಿವಾಸದಲ್ಲಿ 2025ರ ಮಾರ್ಚ್ 14ರಂದು ರಾತ್ರಿ ಬೆಂಕಿ ಅವಘಡ ಸಂಭವಿಸಿತ್ತು. ಈ ವೇಳೆ ನಗದು ಪತ್ತೆಯಾದ ಆರೋಪಗಳು ಕೇಳಿಬಂದಿದ್ದು, ಈ ವಿಚಾರ ತೀವ್ರ ಚರ್ಚೆಗೆ ಗ್ರಾಸವಾಗಿತ್ತು. ಮಾ.22ರಂದು ಆಗಿನ ಸಿಜೆಐ ಸಂಜೀವ್ ಖನ್ನಾ ಅವರು ಪಂಜಾಬ್ ಮತ್ತು ಹರಿಯಾಣ ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಶೀಲ್ ನಾಗು ನೇತೃತ್ವದಲ್ಲಿ ತನಿಖಾ ಸಮಿತಿ ರಚಿಸಿದ್ದರು. ಸಮಿತಿಯು 55

ಸಾಕ್ಷಿಗಳನ್ನು ವಿಚಾರಣೆಗೆ ಒಳಪಡಿಸಿ, ಘಟನಾ ಸ್ಥಳಕ್ಕೆ ಭೇಟಿ ನೀಡಿ 64 ಪುಟಗಳ ವರದಿ ಸಲ್ಲಿಸಿತ್ತು. ವರ್ಮಾ ವಿರುದ್ಧದ ಆರೋಪಗಳು ಸಾಬೀತಾಗಿದ್ದು, ಅವರನ್ನು ಸೇವೆಯಿಂದ ತೆಗೆದುಹಾಕುವಂತೆ ಸಮಿತಿ ಶಿಫಾರಸು ಮಾಡಿತ್ತು. ವರ್ಮಾ ಅವರನ್ನು ಪದಚ್ಯುತ ಗೊಳಿಸುವ ಪ್ರಕ್ರಿಯೆ ಆರಂಭಿಸುವಂತೆ ಸಂಜೀವ್ ಖನ್ನಾ ಶಿಫಾರಸು ಮಾಡಿದ್ದರು.

## ❖ ಕೃತಕ ಬುದ್ಧಿಮತ್ತೆ: ಪ್ರಭಾವಿಗಳ ಪಟ್ಟಿಯಲ್ಲಿ ಸಚಿವ ಪ್ರಿಯಾಂಕ್

- ಅನಲಿಟಿಕ್ಸ್ ಇಂಡಿಯಾ ಮ್ಯಾಗಜಿನ್ ನಡೆಸಿದ ಆರ್ಟಿಫೀಶಿಯಲ್ ಇಂಟೆಲಿಜೆನ್ಸ್ (ಎಐ) ವಲಯದ ಭಾರತದ 100 ಪ್ರಭಾವಿ ವ್ಯಕ್ತಿಗಳ ಪಟ್ಟಿಯಲ್ಲಿ ಐಟಿ ಮತ್ತು ಬಿಟಿ ಸಚಿವ ಪ್ರಿಯಾಂಕ್ ಖರ್ಗೆ ಒಂಬತ್ತನೇ ಸ್ಥಾನ ಪಡೆದಿದ್ದಾರೆ.
- ಭಾರತದ ವಿಜ್ಞಾನಿಗಳು ಮತ್ತು ಸಂಶೋಧಕರು, ನವೋದ್ಯಮ ಸಂಸ್ಥಾಪಕರು, ತಂತ್ರಜ್ಞಾನ ಪರಿಣತರು, ನೀತಿ ನಿರೂಪಕರು, ಸಾರ್ವಜನಿಕ ವಲಯದ ನಾಯಕರು ಎಐ ಬಗ್ಗೆ ಹೇಗೆ ಕಾರ್ಯಪ್ರವೃತ್ತವಾಗಿದ್ದಾರೆ ಎನ್ನುವುದನ್ನು ಮಾನದಂಡವಾಗಿಟ್ಟುಕೊಂಡು ಈ ಆಯ್ಕೆ ಮಾಡಲಾಗಿದೆ.
- ಪ್ರಿಯಾಂಕ್ ಖರ್ಗೆ ಭಾರತದ ಎಐ ಪ್ರಭಾವಶಾಲಿ ನೀತಿ ನಿರೂಪಕರಲ್ಲಿ ಒಬ್ಬರು. ದೂರದೃಷ್ಟಿಯೊಂದಿಗೆ ಖರ್ಗೆ ಅವರು ಕರ್ನಾಟಕದ ಎಐ ನೀತಿ ರೂಪಿಸಿ ಕಾರ್ಯಗತಗೊಳಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದಾರೆ. ನಾವೀನ್ಯ ಮತ್ತು ತಂತ್ರಜ್ಞಾನದ ಬೆಳವಣಿಗೆಯನ್ನು ವಿಕೇಂದ್ರೀಕರಿಸುವ ಗುರಿಯೊಟ್ಟಿಗೆ ಬೆಂಗಳೂರು ನಗರದಾಚೆಗೂ ಇದನ್ನು ವಿಸ್ತರಿಸುವ ಪ್ರಯತ್ನ ಮಾಡಿದ್ದಾರೆ. ಅವರ ಆಡಳಿತವು ಯುವ-ಕೇಂದ್ರಿತ ಮತ್ತು ಎಲ್ಲರನ್ನೂ ಒಳಗೊಳ್ಳುವಂತಿದೆ ಎಂದು ತಿಳಿಸಲಾಗಿದೆ.
- ಡಿಜಿಟಲ್ ನಾವೀನ್ಯದಲ್ಲಿ ರಾಷ್ಟ್ರೀಯ ಮಟ್ಟದಲ್ಲಿ ಕರ್ನಾಟಕದ ಸ್ಥಾನವನ್ನು ಮತ್ತಷ್ಟು ಭದ್ರಪಡಿಸಿ ಎಐನ ಭಾರತದ ಮೊದಲ ಶ್ರೇಷ್ಠತೆಯ ಕೇಂದ್ರವನ್ನು ಪ್ರಾರಂಭಿಸುವಲ್ಲಿ ಪ್ರಿಯಾಂಕ್ ಅವರು ಉಸ್ತುವಾರಿ ವಹಿಸಿದ ಕಾರಣಕ್ಕೆ ಅವರನ್ನು ಆಯ್ಕೆಗೆ ಪರಿಗಣಿಸಲಾಗಿದೆ.
- ಕೇಂದ್ರ ಸಚಿವ ಪೀಯೂಷ್ ಗೋಯಲ್, ತೆಲಂಗಾಣ ಐಟಿ ಮತ್ತು ಬಿಟಿ ಸಚಿವ ಡಿ.ಶ್ರೀಧರ ಬಾಬು ಕೂಡ ಪ್ರಭಾವಿ ವ್ಯಕ್ತಿಗಳ ಪಟ್ಟಿಯಲ್ಲಿರುವ ಪ್ರಮುಖರು.

Dr. Rajkumar IAS/KAS Academy

## ❖ ಹಣದುಬ್ಬರ: 8 ವರ್ಷದ ಕನಿಷ್ಠ

- ಚಿಲ್ಲರೆ ಹಣದುಬ್ಬರ ಪ್ರಮಾಣವು ಜುಲೈನಲ್ಲಿ ಶೇಕಡ 1.55ಕ್ಕೆ ಇಳಿಕೆ ಕಂಡಿದೆ. ಇದು ಎಂಟು ವರ್ಷಗಳ ಕನಿಷ್ಠ ಮಟ್ಟ.
- ಅಷ್ಟೇ ಅಲ್ಲ, ಚಿಲ್ಲರೆ ಹಣದುಬ್ಬರ ದರವು ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ನಿಗದಿ ಮಾಡಿಕೊಂಡಿರುವ ಗುರಿಯಾದ ಶೇ 2–4ರ ಮಟ್ಟಕ್ಕಿಂತ ಕೆಳಕ್ಕೆ ಬಂದಿರುವುದು 2019ರ ಜನವರಿಯ ನಂತರದಲ್ಲಿ ಇದೇ ಮೊದಲು.
- ಆಹಾರ ವಸ್ತುಗಳ ಬೆಲೆಯು ಕಡಿಮೆ ಇದ್ದುದು ಚಿಲ್ಲರೆ ಹಣದುಬ್ಬರ ಪ್ರಮಾಣವು ಕಡಿಮೆ ಆಗಲು ಒಂದು ಮುಖ್ಯ ಕಾರಣ ಎಂದು ಕೇಂದ್ರ ಸರ್ಕಾರ ಮಂಗಳವಾರ ಬಿಡುಗಡೆ ಮಾಡಿರುವ ಅಂಕಿ-ಅಂಶಗಳು ಹೇಳಿವೆ.
- ಗ್ರಾಹಕ ಬೆಲೆ ಸೂಚ್ಯಂಕ (ಸಿಪಿಐ) ಆಧಾರಿತ ಚಿಲ್ಲರೆ ಹಣದುಬ್ಬರ ಪ್ರಮಾಣವು ಶೇ 4ರ ಹಂತದಲ್ಲಿ ಇರಬೇಕು, ಅದು ಶೇ 2ಕ್ಕಿಂತ ಕಡಿಮೆ ಆಗಬಾರದು, ಶೇ 6ಕ್ಕಿಂತ ಹೆಚ್ಚಾಗಬಾರದು ಎಂಬುದು ಆರ್‌ಬಿಐಗೆ ಕೇಂದ್ರ ಸರ್ಕಾರ ನಿಗದಿ ಮಾಡಿರುವ ಗುರಿ.
- ಚಿಲ್ಲರೆ ಹಣದುಬ್ಬರ ಪ್ರಮಾಣವು ಜೂನ್‌ನಲ್ಲಿ ಶೇ 2.1ರಷ್ಟು ದಾಖಲಾಗಿತ್ತು, ಹಿಂದಿನ ವರ್ಷದ ಜುಲೈನಲ್ಲಿ ಶೇ 3.6ರಷ್ಟು ಇತ್ತು. ಈ ವರ್ಷದ ಜುಲೈನಲ್ಲಿ ದಾಖಲಾಗಿರುವ ಹಣದುಬ್ಬರ ಪ್ರಮಾಣವು 2017ರ ಜೂನ್ ನಂತರದ ಅತ್ಯಂತ ಕನಿಷ್ಠ ಮಟ್ಟ. ಆ ತಿಂಗಳಲ್ಲಿ ಹಣದುಬ್ಬರ ಪ್ರಮಾಣವು ಶೇ 1.46ರಷ್ಟು ಇತ್ತು.
- ‘ದ್ವಿದಳ ಧಾನ್ಯಗಳು ಮತ್ತು ಅವುಗಳ ಉತ್ಪನ್ನಗಳು, ಸಾರಿಗೆ ಮತ್ತು ಸಂವಹನ, ತರಕಾರಿಗಳು, ಏಕದಳ ಧಾನ್ಯ ಗಳು ಮತ್ತು ಅವುಗಳ ಉತ್ಪನ್ನಗಳು, ಮೊಟ್ಟೆ ಮತ್ತು ಸಕ್ಕರೆ ಬೆಲೆ ಏರಿಕೆಯ ಪ್ರಮಾಣ ತಗ್ಗಿದೆ. ಇದು ಒಟ್ಟಾರೆ ಹಣದುಬ್ಬರದ ಪ್ರಮಾಣ ಹಾಗೂ ಆಹಾರ ವಸ್ತುಗಳ ಹಣದುಬ್ಬರದ ಪ್ರಮಾಣವು ಜುಲೈ ತಿಂಗಳಲ್ಲಿ ಗಮನಾರ್ಹವಾಗಿ ಇಳಿಕೆ ಆಗಿರುವುದಕ್ಕೆ ಪ್ರಮುಖ ಕಾರಣ’ ಎಂದು ರಾಷ್ಟ್ರೀಯ ಸಾಂಖ್ಯಿಕ ಕಚೇರಿ (ಎನ್‌ಎಸ್‌ಒ) ಹೇಳಿದೆ.
- ಎನ್‌ಎಸ್‌ಒ ಪ್ರಕಾರ ಜುಲೈನಲ್ಲಿ ಆಹಾರ ವಸ್ತುಗಳ ಹಣದುಬ್ಬರ ಪ್ರಮಾಣವು ಶೇ (–)1.76 ಆಗಿದೆ. ಗ್ರಾಮೀಣ ಪ್ರದೇಶಗಳಲ್ಲಿನ ಪ್ರಮಾಣವು ಶೇ 1.18ರಷ್ಟು ಹಾಗೂ ನಗರ ಪ್ರದೇಶಗಳಲ್ಲಿ ಶೇ 2.05ರಷ್ಟು ಇದೆ.
- ಚಿಲ್ಲರೆ ಹಣದುಬ್ಬರ ದರಕ್ಕೆ ಸಂಬಂಧಿಸಿದ ದತ್ತಾಂಶಗಳ ಬಗ್ಗೆ ಪ್ರತಿಕ್ರಿಯೆ ನೀಡಿರುವ ಐಸಿಆರ್‌ಎ ಸಂಸ್ಥೆಯ ಮುಖ್ಯ ಅರ್ಥಶಾಸ್ತ್ರಜ್ಞೆ ಅದಿತಿ ನಾಯರ್ ಅವರು, ‘ಪ್ರಸಕ್ತ ಹಣಕಾಸು ವರ್ಷದ ನಾಲ್ಕನೆಯ ತ್ರೈಮಾಸಿಕದಲ್ಲಿ ಹಾಗೂ ಮುಂದಿನ ಆರ್ಥಿಕ ವರ್ಷದ ಮೊದಲ ತ್ರೈಮಾಸಿಕದಲ್ಲಿ ಹಣದುಬ್ಬರ ಪ್ರಮಾಣವು ಶೇ 4ಕ್ಕಿಂತ ಹೆಚ್ಚಿರಲಿದೆ ಎಂಬ ನಿರೀಕ್ಷೆಯು, ಆರ್‌ಬಿಐನ ಮುಂಬರುವ ಸಭೆಗಳಲ್ಲಿ ರೆಪೊ ದರ ಇಳಿಸುವ ಸಾಧ್ಯತೆಯನ್ನು ಕಡಿಮೆ ಮಾಡಿದೆ’ ಎಂದು ಹೇಳಿದ್ದಾರೆ.
- ‘ಈಗಿನ ಪ್ರಮಾಣದ ಹಣದುಬ್ಬರವು ಅರ್ಥ ವ್ಯವಸ್ಥೆಯಲ್ಲಿ ಬೇಡಿಕೆಯ ಕುರಿತಾಗಿ ಕಳವಳದ ಗಂಟೆಯನ್ನು ಸಹಜವಾಗಿಯೇ ಬಾರಿಸುತ್ತಿತ್ತು. ಆದರೆ ಆಹಾರ ಮತ್ತು ಇಂಧನದಂತಹ ಉತ್ಪನ್ನಗಳನ್ನು ಹೊರತುಪಡಿಸಿ ಇತರ ವರ್ಗಗಳಲ್ಲಿನ ಹಣದುಬ್ಬರ ಪ್ರಮಾಣವು ಜುಲೈನಲ್ಲಿ ಶೇ 4.1ರಷ್ಟು ಇದೆ. ಅಂದರೆ ಅರ್ಥವ್ಯವಸ್ಥೆಯಲ್ಲಿ ಬೇಡಿಕೆಯು ಸ್ಥಿರವಾಗಿ ಇದೆ ಎಂದು ಅರ್ಥ’ ಎಂದು ಇಂಡಿಯಾ ರೇಟಿಂಗ್ಸ್ ಆ್ಯಂಡ್ ರಿಸರ್ಚ್ ಸಂಸ್ಥೆಯ ಸಹನಿರ್ದೇಶಕ ಪಾರಸ್ ಜಸರಾಯ್ ಹೇಳಿದ್ದಾರೆ.

Dr. Rajkumar IAS/KAS Academy

## ❖ ನವಜಾತ ಶಿಶು ತಪಾಸಣೆ ಯೋಜನೆಗೆ ಅಸ್ತು

- ಸಾರ್ವಜನಿಕ ಆಸ್ಪತ್ರೆ ಗಳಲ್ಲಿ ಹೆರಿಗೆಯಾದ ಶಿಶುಗಳ ಜನ್ಮಜಾತ ಸಮಸ್ಯೆಗಳ ಪತ್ತೆಗೆ ಸಂಬಂಧಿಸಿದಂತೆ 'ಸಾರ್ವತ್ರಿಕ ನವಜಾತ ಶಿಶು ತಪಾಸಣೆ ಯೋಜನೆ' ಅನುಷ್ಠಾನಕ್ಕೆ ಆರೋಗ್ಯ ಇಲಾಖೆ ಅನುಮೋದನೆ ನೀಡಿದೆ.
- ಈ ಬಗ್ಗೆ ಇಲಾಖೆ ಆದೇಶ ಹೊರಡಿಸಿದ್ದು, ಪ್ರಾಯೋಗಿಕವಾಗಿ ಬೆಂಗಳೂರು ನಗರ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ತಪಾಸಣೆ ಆರಂಭಿಸಲು ಸೂಚಿಸಲಾಗಿದೆ.
- ಸಾರ್ವಜನಿಕ ಆರೋಗ್ಯ ಸೌಲಭ್ಯಗಳಲ್ಲಿ ಹೆರಿಗೆಯಾಗುವ ನವಜಾತ ಶಿಶುಗಳ ಜನ್ಮಜಾತ 'ಹೈಪೋಥೈರಾಯ್ಡಿಸಮ್' , 'ಅಡ್ರಿನಲ್ ಹೈಪರ್ಪ್ಲಾಸಿಯಾ' (ಸಿಎಎಚ್), 'ಗ್ಯಾಲಕ್ಟೋಸೆಮಿಯಾ' , 'ಫಿನೈಲ್ಕೆಟೋನೂರಿಯಾ' , 'ಗ್ಲೂಕೋಸ್-6 ಫಾಸ್ಫೇಟ್ ಡಿಹೈಡ್ರೋಜಿನೇಸ್' (ಜಿ6ಪಿಡಿ) ಕೊರತೆ, ಚಯಾಪಚಯ ಅಸ್ವಸ್ಥತೆಗಳ ಸಾರ್ವತ್ರಿಕ ತಪಾಸಣೆಗೆ ಈ ಯೋಜನೆ ಅನುಷ್ಠಾನ ಮಾಡಲಾಗುತ್ತಿದೆ ಎಂದು ಆದೇಶದಲ್ಲಿ ತಿಳಿಸಲಾಗಿದೆ.
- ಪ್ರಾಯೋಗಿಕವಾಗಿ ಬೆಂಗಳೂರು ನಗರ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಗಳಲ್ಲಿ, 57,350 ನವಜಾತ ಶಿಶುಗಳ ತಪಾಸಣೆಗೆ ₹ 2.58 ಕೋಟಿಯನ್ನು **ರಾಷ್ಟ್ರೀಯ ಆರೋಗ್ಯ ಅಭಿಯಾನ**ದಡಿ ಬಿಡುಗಡೆ ಮಾಡಲು ಸೂಚಿಸಲಾಗಿದೆ.
- ಕರ್ನಾಟಕ ಗಣಿ ಪರಿಸರ ಪುನಶ್ಚೇತನ ನಿಗಮ (ಕೆಎಂಇಆರ್‌ಸಿ) ವ್ಯಾಪ್ತಿಗೆ ಒಳಪಡುವ ತುಮಕೂರು, ಬಳ್ಳಾರಿ, ಚಿತ್ರದುರ್ಗ, ವಿಜಯಪುರ ಜಿಲ್ಲೆಗಳ ತಾಲ್ಲೂಕುಗಳಲ್ಲಿ ತಪಾಸಣೆಗೆ ಸಂಬಂಧಿಸಿದಂತೆ, ಕೆಎಂಇಆರ್‌ಸಿ ಅಡಿ ₹2.79 ಕೋಟಿ ಒದಗಿಸುವಂತೆ ತಿಳಿಸಲಾಗಿದೆ.
- ನವಜಾತ ಶಿಶುಗಳ ತಪಾಸಣೆಯ ಅನುಷ್ಠಾನ, ಮೇಲ್ವಿಚಾರಣೆ, ಗುಣಮಟ್ಟ ಕ್ಕಾಗಿ ಪರಿಣಾಮಕಾರಿ ಕಾರ್ಯವಿಧಾನ ಅನುಸರಿಸಲು, ರಾಷ್ಟ್ರೀಯ ಆರೋಗ್ಯ ಅಭಿಯಾನದ ವ್ಯವಸ್ಥಾಪಕ ನಿರ್ದೇಶಕರ ಕಚೇರಿಯಲ್ಲಿ ರಾಜ್ಯ ನವಜಾತ ಶಿಶು ಪರೀಕ್ಷಾ ಕೇಂದ್ರ (ಎಸ್‌ಎನ್‌ಎಸ್‌ಸಿ) ಸ್ಥಾಪಿಸಲು ನಿರ್ದೇಶನ ನೀಡಲಾಗಿದೆ.




## ❖ ಹಾರುವ ಕಾರುಗಳು ಬರುತಿವೆ, ಜಾಗ ಕೊಡಿ

- ಜಗತ್ತಿನ ಯಾವುದೇ ಪ್ರಮುಖ ನಗರವನ್ನು ತೆಗೆದುಕೊಳ್ಳಿ, ಟ್ರಾಫಿಕ್ ಜಾಮ್ ಅಲ್ಲಿಯ ಅತ್ಯಂತ ಪ್ರಮುಖ ಸಮಸ್ಯೆಗಳಲ್ಲೊಂದು. 'ಟೋಮ್ ಟೋಮ್ ಟ್ರಾಫಿಕ್ ಇಂಡೆಕ್ಸ್' ಪ್ರಕಾರ ಶೇ 76ರಷ್ಟು ನಗರಗಳಲ್ಲಿ ವರ್ಷದಿಂದ ವರ್ಷಕ್ಕೆ ಸಂಚಾರದ ವೇಗ ಕಡಿಮೆಯಾಗುತ್ತಿದೆ.
- ವಿಶ್ವದ ಅತಿ ಹೆಚ್ಚು ಟ್ರಾಫಿಕ್ ದಟ್ಟಣೆಯುಳ್ಳ ನಗರಗಳಲ್ಲಿ ಬೆಂಗಳೂರಿಗೆ ಮೇಲಿನ ಸ್ಥಾನವು ಪ್ರತಿಬಾರಿಯೂ ಸಿಗುತ್ತದೆ!
- ಹಾರುವ ಕಾರುಗಳು ನರಸಿಂಹ ಅವತಾರದ ಹಾಗೆ; ಆ ಕಡೆ ಕಾರೂ ಅಲ್ಲ, ಹೆಲಿಕಾಪ್ಟರ್ ಕೂಡ ಅಲ್ಲ. ರಸ್ತೆಯ ಮೇಲೂ ಚಲಿಸಬಲ್ಲದು, ಹೆಲಿಕಾಪ್ಟರ್ ತರಹವೇ ಹಾರುವ ಸಾಮರ್ಥ್ಯವನ್ನೂ ಹೊಂದಿದೆ. ಎಲೆಕ್ಟ್ರಿಕ್ ಬ್ಯಾಟರಿಯ ಮೇಲೆಯೂ ಓಡಿಸಬಹುದು; ಕೆಲವೊಂದು ಫ್ಲೈಯಿಂಗ್ ಕಾರುಗಳಲ್ಲಿ ಪಾರಂಪರಿಕವಾದ ಎಂಜಿನನ್ನು ಅಳವಡಿಸಲಾಗಿರುತ್ತದೆ. ನಿಲುಗಡೆಗೆ ಕಾರುಗಳಷ್ಟು ಸಣ್ಣ ಜಾಗ ಸಾಕಾಗದು; ಹೆಲಿಕಾಪ್ಟರ್‌ನಷ್ಟು ವಿಶಾಲವಾದ ಬಯಲೂ ಬೇಡ. ಕಾರಿಗಿಂತ ದುಬಾರಿ, ಹೆಲಿಕಾಪ್ಟರ್ ಗಿಂತ ಬಹಳ ಸೋವಿ. ಹಾರುವ ಕಾರುಗಳಲ್ಲಿ ಮುಖ್ಯವಾಗಿ ಮೂರು ಬಗೆಗಳಿವೆ.
  - ✓ VTOL: 'VTOL' ಎಂದರೆ 'ವರ್ಟಿಕಲ್ ಟೇಕ್ ಆಫ್ ಆ್ಯಂಡ್ ಲ್ಯಾಂಡಿಂಗ್' . ಇದಕ್ಕೆ ರನ್‌ವೇ ಬೇಡ; ಹೆಲಿಕಾಪ್ಟರ್ ತರಹವೇ ನಿಂತಲ್ಲಿಂದಲ್ಲೇ ಹಾರಬಲ್ಲದು. ಜೊಬಿ ಏವಿಯೇಷನ್ ಕಂಪನಿಯ ಎಸ್-4 ಮಾದರಿಯು ಎಲೆಕ್ಟ್ರಿಕ್ ವಾಹನಗಳ ತಂತ್ರಜ್ಞಾನವನ್ನು ಒಳಗೊಂಡಿದ್ದು ಒಂದೇ ಒಂದು ಚಾರ್ಜ್‌ನಲ್ಲಿ ಸುಮಾರು 240 ಕಿ.ಮೀ. ಕ್ರಮಿಸಬಲ್ಲದು. ಸದ್ದಿಲ್ಲದ, ವಿಷಪೂರಿತ ಅನಿಲಗಳ ಸೂಸುವಿಕೆಯಿಲ್ಲದ
  - ✓ ಈ ಹಾರುವ ಕಾರಿಗೆ ಈಗಾಗಲೇ ದುಬೈ ನಗರವು ಲೀಲಾಜಾಲವಾಗಿ ಹಾರಾಡಲು ಒಪ್ಪಿಗೆ ನೀಡಿದೆ.
  - ✓ ಲಿಲಿಯಮ್ ಜೆಟ್ ಎನ್ನುವುದು ಇನ್ನೊಂದು ಉದಾಹರಣೆ. ಈ ಹಾರುವ ಕಾರನ್ನು ಕೇವಲ 45 ನಿಮಿಷಗಳಲ್ಲಿ ಚಾರ್ಜ್ ಮಾಡಬಹುದು.
  - ✓ STOL: 'STOL' ಎಂದರೆ ಶಾರ್ಟ್ ಟೇಕ್ ಆಫ್ ಲ್ಯಾಂಡಿಂಗ್ ವಾಹನ. ಇದನ್ನು 'ಆಕಾಶದ ಬಸ್ಸು' ಅಥವಾ 'ಸ್ಕೈ ಬಸ್' ಎಂದೂ ಕರೆಯಲಾಗುತ್ತದೆ. 'LAT ' ಎನ್ನುವುದು ಭಾರತದ ಸ್ಟಾರ್ಟ್ ಅಪ್. ನಮ್ಮ ಬೆಂಗಳೂರಿನಲ್ಲಿಯೇ ಇದೆ. ಸಾಮಾನ್ಯ ವಾಹನವೊಂದರ ನಿಲುಗಡೆಗೆ ಬೇಕಾಗುವ ಜಾಗಕ್ಕಿಂತಲೂ ತುಸು ದೊಡ್ಡ ಜಾಗವಿದ್ದರೆ ಇದನ್ನು ಇಳಿಸಿ, ಮತ್ತೆ ಹಾರಿಸಬಹುದು. ದೂರ ದೂರದ ನಗರಕ್ಕೆ ಹೋಗಲು ವಿಮಾನವಾದರೆ, ಹತ್ತಿರವೇ ಇರುವ ಪಟ್ಟಣಗಳಿಗೆ ಈ STOL ಮೂಲಕ ಪ್ರಯಾಣ ಮಾಡಬಹುದು.
  - ✓ ಫಿಕ್ಸಡ್ ವಿಂಗ್ ಏರ್‌ಕ್ರಾಫ್ಟ್ ವಿದ್ ರೋಡ್ ಕ್ಯಾಪಾಬಿಲಿಟಿ: ಈ ಬಗೆಯಲ್ಲಿ ಹಾರುವ ಕಾರಿಗೆ ನಿರ್ದಿಷ್ಟವಾದ ಅಳತೆಯ ಪಂಕವಿದ್ದು, ಇದು ರಸ್ತೆಯ ಮೇಲೂ ಚಲಿಸಬಲ್ಲದು. ರಸ್ತೆಯ ಮೇಲೆ ಓಡುವಾಗ ಇದರ ರೆಕ್ಕೆಗಳು ಒಳಗೆ ಸೇರಿಕೊಳ್ಳುತ್ತವೆ. ಎಮ್‌ಐಟಿಯು ವಿನ್ಯಾಸಗೊಳಿಸಿರುವ 'ಟೆರ್ರಾಫೆಂಗಿಯಾ ಟ್ರಾನ್ಸಿಷನ್' ಎನ್ನುವ ವಾಹನದಲ್ಲಿನ ರೆಕ್ಕೆಗಳು ಕೇವಲ ಮೂವತ್ತು ಸೆಕೆಂಡ್ ಗಳಲ್ಲಿ ಮುಚ್ಚಿಕೊಳ್ಳಬಹುದು, ಇಲ್ಲವೇ ತೆರೆದುಕೊಳ್ಳಬಹುದು. ಈ ಬಗೆಯ ಹಾರುವ ಕಾರುಗಳಲ್ಲಿ ಪಾರಂಪರಿಕವಾದ ಎಂಜಿನ್ ಅಳವಡಿಸಲಾಗಿರುತ್ತದೆ. ಉದಾಹರಣೆಗೆ, ಕ್ಲೇನ್ ವಿಷನ್ ಏರ್‌ಕಾರ್. ಇದರಲ್ಲಿ ಬಿಎಮ್‌ಡಬ್ಲ್ಯುವಿನ ಪೆಟ್ರೋಲ್ ಎಂಜಿನ್ ಇದೆ; ಇದು ಪ್ರತಿ ಗಂಟೆಗೆ 250 ಕಿ.ಮೀ. ವೇಗದಲ್ಲಿ ಸುಮಾರು ಒಂದು ಸಾವಿರ ಕಿ.ಮೀ. ದೂರವನ್ನು ಕ್ರಮಿಸಬಲ್ಲದು. ಬಹುಶಃ 2026ರಲ್ಲಿ ಇದು ಮಾರುಕಟ್ಟೆಗೆ ಬರಲಿದೆ. ಇದರ ಬೆಲೆ ಏನಿಲ್ಲವೆಂದರೂ ಹತ್ತು ಕೋಟಿಗಿಂತ ಕಡಿಮೆ ಇರಲಾರದು!

Dr. Rajkumar IAS/KAS Academy

**ಹಾರುವ ಕಾರುಗಳಿಂದ ಲಾಭಗಳು**

- ಹಾರುವ ಕಾರುಗಳು ಕೈಗೆಟುಕುವ ದರದಲ್ಲಿ ಸಿಕ್ಕರೆ, ಹೆಚ್ಚು ಜನರು ಕೊಳ್ಳುವಂತಾದರೆ ಆಗ ನಗರಗಳಲ್ಲಿ ಟ್ರಾಫಿಕ್ ಜಾಮ್ ಕಡಿಮೆಯಾಗುವುದು. ಅಂದಾಜಿನ ಪ್ರಕಾರ ಶೇ 50-80ರಷ್ಟು ಸಮಯವನ್ನೂ ಉಳಿಸಬಹುದು.
- ಈ ತಂತ್ರಜ್ಞಾನ ಹೊಸ ಆರ್ಥಿಕತೆಗೆ ಅವಕಾಶವನ್ನು ಕಲ್ಪಿಸಿಕೊಡಲಿದೆ.
- ಎಲ್ಲದಕ್ಕೂ ಮಿಗಿಲಾಗಿ ಕಾರ್ಬನ್ ಡೈ-ಆಕ್ಸೈಡ್ ಹಾಗೂ ಇನ್ನಿತರ ವಿಷಪೂರಿತ ಅನಿಲಗಳ ಹೊರಸೂಸುವಿಕೆಯು ಶೇ 35-50ರಷ್ಟು ಕಡಿಮೆಯಾಗಲಿದೆ.
- ಹಾರುವ ಕಾರುಗಳು ನಮ್ಮ ಮನುಕುಲಕ್ಕೆ ಹೊಸ ಬಗೆಯ ಜೀವನಶೈಲಿಯನ್ನು ಕಲಿಸಿಕೊಡಲಿದೆ.

ಆದರೆ ಹಾರುವ ಕಾರು ನಾವು ಅಂದುಕೊಂಡಷ್ಟು ಸುಲಭವಾಗಿ ಸಿಗಬಲ್ಲ ವರವಲ್ಲ. ಅದನ್ನು ತಂತ್ರಜ್ಞಾನದ ಸಂಕೀರ್ಣತೆಯ ಆಗಸದಿಂದ ಸುಲಭವಾದ ಬಳಕೆಯ ಧರೆಗೆ ತರಲು ಹಲವಾರು ಅಡತಡೆಗಳು ಎದುರಾಗಲಿವೆ:

- l ಇದು ದುಬಾರಿ ಉತ್ಪನ್ನ. ಅತಿ ಶ್ರೀಮಂತರೇ ಇದರ ಮೊದಲ ಬಳಕೆದಾರರಾಗಬಲ್ಲರು. ನಿರ್ವಹಣೆಯ ವೆಚ್ಚ ಸ್ವಯಂಚಾಲಿತ ಟ್ಯಾಕ್ಸಿ, ಹೆಲಿಕಾಪ್ಟರ್‌ಗಳಿಗಿಂತಲೂ ಕಡಿಮೆಯಾದರೂ, ಆರಂಭಿಕ ವೆಚ್ಚವು ಅಧಿಕವಾಗಿರುತ್ತದೆ.
- l ಕಾನೂನು, ನಿಯಂತ್ರಕ ಮಂಡಳಿಗಳ ಒಪ್ಪಿಗೆ, ಸರ್ಕಾರದ ಪರವಾನಿಗೆ ಇವೆಲ್ಲವೂ ಸಿಗಲು ಕೆಲವು ಕಾಲವೇ ಬೇಕಾದೀತು.
- l ನಮ್ಮಲ್ಲಿಯ ಅರ್ಧದಷ್ಟು ಜನರಿಗೆ ಈ ತಂತ್ರಜ್ಞಾನವು ಕಾರ್ಯರೂಪದಲ್ಲಿ ಯಶಸ್ವಿಯಾಗಬಲ್ಲದು ಎಂಬ ನಂಬಿಕೆಯೇ ಇಲ್ಲ.

ಜನರು ಸಂಶಯಾಸ್ಪದವಾಗಿ ನೋಡಿದಾಗಲೇ ತಂತ್ರಜ್ಞಾನವನ್ನು ಇನ್ನಷ್ಟು ಪ್ರಬುದ್ಧಗೊಳಿಸಲು ಸಾಧ್ಯ. **ಒಂದು ವರದಿಯ ಪ್ರಕಾರ 2035ರೊಳಗೆ ಜಗತ್ತಿನಲ್ಲಿ ಐದು ಲಕ್ಷ ಹಾರುವ ಕಾರುಗಳು ನಮ್ಮ ಸೂರಿನ ಮೇಲೆ ಹಾರಾಡುವ ಸಾಧ್ಯತೆಗಳಿವೆ.**

## ❖ 'ಧಾರವಾಡಿ ಎಮ್ಮೆ' ತಳಿ ಸಂವರ್ಧನೆಗಿಲ್ಲ ಕ್ರಮ

- ಧಾರವಾಡಿ ತಳಿ ಸಂವರ್ಧನೆ ಪಶು ಇಲಾಖೆ ವ್ಯಾಪ್ತಿಗೆ ಬರಲ್ಲ. ಹೀಗಾಗಿ ಪ್ರಸ್ತಾವ ಸಲ್ಲಿಸಲು ಆಗದು. ಅದಕ್ಕೆ ಪ್ರತ್ಯೇಕ ವಿಭಾಗವಿದೆ ಉಪನಿರ್ದೇಶಕ, ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ
- ವಿಶೇಷ ತಳಿಯಾದ 'ಧಾರವಾಡಿ ಎಮ್ಮೆ' ಗೆ 2021ರಲ್ಲೇ ರಾಷ್ಟ್ರೀಯ ಮಾನ್ಯತೆ ಸಿಕ್ಕಿದೆ.
- **ನವದೆಹಲಿಯ ಭಾರತೀಯ ಕೃಷಿ ಅನುಸಂಧಾನ ಪರಿಷತ್ತಿನ ಪಶು ಸಂಗೋಪನೆ ವಿಭಾಗವು 2021ರಲ್ಲಿ ನಡೆಸಿದ್ದ ಸಭೆಯಲ್ಲಿ 'ಧಾರವಾಡಿ ತಳಿ' ಎಮ್ಮೆಗೆ 'ಇಂಡಿಯಾ ಬಫೆಲೊ_0800_ಧಾರವಾಡಿ_01018' ಎಂದು ತಳಿ ಪ್ರವೇಶ ಸಂಖ್ಯೆ ನೀಡಿತು. ಎಮ್ಮೆಗಳಲ್ಲೇ ರಾಷ್ಟ್ರೀಯ ಮಾನ್ಯತೆ ಪಡೆದ ರಾಜ್ಯದ ಮೊದಲ ತಳಿ ಎಂಬ ಹಿರಿಮೆಯೊಂದಿಗೆ, ಜಾಗತಿಕ ಮನ್ನಣೆ ದೊರೆತ ದೇಶದ 18 ಎಮ್ಮೆ ತಳಿಗಳ ಸಾಲಿಗೆ ಇದು ಸೇರ್ಪಡೆಯಾಯಿತು.**
- ವಿವಿಧ ತಳಿಯ ಜಾನುವಾರುಗಳ ರಕ್ಷಣೆ ಹಾಗೂ ಅಭಿವೃದ್ಧಿಗೆ ದೇಶದ ಹಲವೆಡೆ ಸಂವರ್ಧನಾ ಕೇಂದ್ರಗಳಿವೆ.
  - ✓ **ಧಾರವಾಡ ಸಮೀಪದ ತೇಗೂರಿನಲ್ಲಿ ಮುರ್‍ರಾ ಹಾಗೂ ಸುರ್ತಿ ತಳಿ ಎಮ್ಮೆಗಳ ಸಂವರ್ಧನಾ ಪ್ರಕ್ರಿಯೆ ನಡೆಯುತ್ತಿದೆ.**
  - ✓ **ಅಳಿವಿನಂಚಿನ ಕೃಷ್ಣಾ ವ್ಯಾಲಿ ಆಕಳುಗಳನ್ನೂ ಸಂರಕ್ಷಿಸಲಾಗಿದೆ.**
- 'ಕೃಷಿ ವಿ.ವಿ ಪ್ರಾಣಿ ವಿಜ್ಞಾನ ವಿಭಾಗದ ಪ್ರಯತ್ನದ ಫಲವಾಗಿ ಶುದ್ಧ ತಳಿಯ ಧಾರವಾಡಿ ಎಮ್ಮೆಗೆ ರಾಷ್ಟ್ರೀಯ ಮಾನ್ಯತೆ ಸಿಕ್ಕಿತು. ತಳಿ ಸಂವರ್ಧನೆಗೆ ಪೂರಕ ಬೆಳವಣಿಗೆಗಳು ಆಗಲಿಲ್ಲ.

Dr. Rajkumar IAS/KAS Academy

- ‘ಈ ತಳಿಯ ಉತ್ಕೃಷ್ಟವಾದ 200 ಎಮ್ಮೆಗಳನ್ನು ಸಾಕಣೆದಾರರಿಂದ ಖರೀದಿಸಿ, ಫಾರಂನಲ್ಲಿ ಸಂರಕ್ಷಿಸಬೇಕು. ಹಾಲಿನ ಸಾಮರ್ಥ್ಯ ಸೇರಿ ವಿವಿಧ ವಿಷಯಗಳ ಕುರಿತು ಎರಡು ವರ್ಷ ಸಂಶೋಧನೆ ಮಾಡಬೇಕು. ಈ ತಳಿಯ ಎಮ್ಮೆಗೆ ಜನಿಸಿದ ಕೋಣಗಳಿಂದ ವೀರ್ಯ ಪಡೆದು, ಕೃತಕ ಗರ್ಭಧಾರಣೆಯಿಂದ ಅವುಗಳ ತಳಿ ಅಭಿವೃದ್ಧಿಪಡಿಸಬೇಕು’ ಎಂದರು.

**‘ಪೇಢೆ, ಕುಂದಾ, ಕರದಂಟಿಗೆ ಬಳಕೆ’**

- 2021ರ ಅಂಕಿ ಅಂಶ ಪ್ರಕಾರ, ಉತ್ತರ ಕರ್ನಾಟಕದ 14 ಜಿಲ್ಲೆಗಳಲ್ಲಿ ಕಾಣಸಿಗುವ ‘ಧಾರವಾಡಿ ತಳಿ’ ಯ ಎಮ್ಮೆಗಳ ಸಂಖ್ಯೆ 12.05 ಲಕ್ಷ ಇದೆ.
- ಈ ತಳಿ ಎಮ್ಮೆ ಜೀವಿತಾವಧಿಯಲ್ಲಿ ಐದಕ್ಕೂ ಹೆಚ್ಚು ಬಾರಿ ಕರು ಹಾಕುತ್ತದೆ. 10 ತಿಂಗಳವರೆಗೆ 970 ಲೀಟರ್ ಹಾಲುನೀಡಲಿದೆ. ಕೊಟ್ಟಿಗೆಯಲ್ಲೇ ಸಾಕಿದಾಗ ‘ಸುರ್ತಿ’ ತಳಿಯ ಎಮ್ಮೆಯಷ್ಟೇ (1,200 ಲೀಟರ್) ಹಾಲು ಕೊಟ್ಟಿತ್ತು.
- ‘ಈ ತಳಿ ಎಮ್ಮೆಗಳ ಹಾಲಿನಲ್ಲಿ ಶೇ 7ರಷ್ಟು ಕೊಬ್ಬಿನ ಅಂಶ ಇದೆ. **ಧಾರವಾಡ ಪೇಢೆ, ಬೆಳಗಾವಿ ಕುಂದಾ, ಜಮಖಂಡಿ ಕಲ್ಲಿ ಪೇಢೆ, ಗೋಕಾಕ ಮತ್ತು ಅಮೀನಗಡ ಕರದಂಟು ತಿನಿಸುಗಳಿಗೆ ಬಳಕೆಯಾಗುತ್ತದೆ**.

## ❖ ನಗೋಯಾ: ಆರ್ಥಿಕ ವಿನಿಮಯ


- ಆರ್ಥಿಕ ವಿನಿಮಯ ಉತ್ತೇಜನದ ಜೊತೆಗೆ ಕೈಗಾರಿಕೆ ಪ್ರವೃತ್ತಿಗಳನ್ನು ಪರಸ್ಪರ ಹಂಚಿಕೊಳ್ಳಲು ಜಪಾನ್‌ನ ನಗೋಯಾ ನಗರ ಹಾಗೂ ಬೆಂಗಳೂರು ಮುಂದಾಗಿವೆ.
- ನಗೋಯಾದ ಮೇಯರ್ ಇಚಿರೋ ಹಿರೊಸಾವಾ ಮತ್ತು ಬಿಬಿಎಂಪಿಯ ಆಡಳಿತಾಧಿಕಾರಿ ತುಷಾರ್ ಗಿರಿನಾಥ್ ಅವರು ಸೋದರಿ ನಗರಗಳ ಉತ್ತೇಜನಕ್ಕಾಗಿ ಒಪ್ಪಂದದ ಜಂಟಿ ಘೋಷಣೆಗೆ (ಜೆಡಿಐ) ಸಹಿ ಹಾಕಿದರು.
- ‘ನಗೋಯಾ ನಗರವು ಸುಂದರವಾದ ಸ್ಥಳವಾಗಿದ್ದು, ಅಲ್ಲಿನ ಸಂಸ್ಥೆಗಳು ಹೆಚ್ಚಾಗಿ ಬೆಂಗಳೂರು ನಗರಕ್ಕೆ ಬರಬೇಕೆಂದು ಇಚ್ಛಿಸುತ್ತೇನೆ’ ಎಂದು ತುಷಾರ್ ಗಿರಿನಾಥ್ ಹೇಳಿದರು.
- ‘ಬಿಬಿಎಂಪಿ ಜೊತೆ ನಗೋಯಾದ ಒಪ್ಪಂದದಿಂದ ವ್ಯಾಪಾರ ಬೆಳವಣಿಗೆಗೆ ಭಾರಿ ಉತ್ತೇಜನ ಸಿಗಲಿದೆ. ಇದರಿಂದ ಜಪಾನ್‌ನ ಸಾಕಷ್ಟು ಸಂಸ್ಥೆಗಳು ಬೆಂಗಳೂರು ನಗರಕ್ಕೆ ಬರಲು ಸಹಕಾರಿ’ ಎಂದು ಬಿಬಿಎಂಪಿ ಮುಖ್ಯ ಆಯುಕ್ತ ಮಹೇಶ್ವರ್ ರಾವ್ ತಿಳಿಸಿದರು.

Dr. Rajkumar IAS/KAS Academy

# ಭಾರತದ ಪೌರತ್ವ ಕಾಯ್ದೆ ಹೇಳುವುದೇನು?

**ಆಧಾರ್, ಪಾನ್ ಅಥವಾ ಮತದಾರರ ಗುರುತಿನ ಚೀಟಿಗಳನ್ನು ಹೊಂದಿದ್ದರೆ ದೇಶದ ಪೌರತ್ವ ಪಡೆದಂತೆ ಅಲ್ಲ ಎಂದು ಬಾಂಬೆ ಹೈಕೋರ್ಟ್ ಹೇಳಿದೆ. ಇದು ದೇಶದ ಪೌರತ್ವವನ್ನು ನಿರೂಪಿಸುವ ವಿಧಾನ ಮತ್ತು ದಾಖಲೆಗಳ ಬಗ್ಗೆ ನ್ಯಾಯಾಲಯದ ಮಹತ್ವದ ಹೇಳಿಕೆಯಾಗಿದೆ. ಭಾರತದ ಪೌರರು ಅನ್ನಿಸಿಕೊಳ್ಳಲು ಯಾವ ಅರ್ಹತೆ ಹೊಂದಿರಬೇಕು ಮತ್ತು ಯಾವ ಮಾನದಂಡಗಳನ್ನು ಪೂರೈಸಬೇಕು ಎನ್ನುವುದನ್ನು ಪೌರತ್ವ ಕಾಯ್ದೆ–1955ರಲ್ಲಿ ಸ್ಪಷ್ಟವಾಗಿ ಉಲ್ಲೇಖಿಸಲಾಗಿದೆ. ಕಾಲದಿಂದ ಕಾಲಕ್ಕೆ ಅದಕ್ಕೆ ಹಲವು ತಿದ್ದುಪಡಿಗಳನ್ನು ತರಲಾಗಿದ್ದು, ಕೆಲವು ತಿದ್ದುಪಡಿಗಳು ಕೋರ್ಟ್ ಮೆಟ್ಟಿಲನ್ನೂ ಏರಿವೆ. ಕೆಲವು ತಿದ್ದುಪಡಿಗಳಿಗೆ ವಿರೋಧವೂ ವ್ಯಕ್ತವಾಗಿದೆ. ಆದರೆ, ಪೌರತ್ವ ಕಾಯ್ದೆ–1955ರ ಮೂಲ ಅಂಶಗಳು ಹಾಗೆಯೇ ಉಳಿದಿವೆ**

ಪ್ರಜಾವಾಣಿ ವಾರ್ತೆ



ಭಾರತದ ಪೌರತ್ವಕ್ಕೆ ಯಾರು ಅರ್ಹರು ಎನ್ನುವುದನ್ನು 'ಪೌರತ್ವ ಕಾಯ್ದೆ- 1955' ವಿವರಿಸುತ್ತದೆ. ಕಾಯ್ದೆಯ 3, 4, 5, 6 ಮತ್ತು 7ನೇ ಸೆಕ್ಷನ್‌ಗಳು ಪೌರತ್ವ ಪ್ರಾಪ್ತವಾಗುವ ಬಗೆಯನ್ನು ಒಳಗೊಂಡಿವೆ.

**ಸೆಕ್ಷನ್ 3- ಜನನದ ಆಧಾರದಲ್ಲಿ ಪೌರತ್ವ:** ಕಾಯ್ದೆಯ ಸೆಕ್ಷನ್ 3ರಲ್ಲಿ ಹುಟ್ಟಿನ ಆಧಾರದಲ್ಲಿ ಪೌರತ್ವ ನೀಡುವ ಬಗ್ಗೆ ಉಲ್ಲೇಖಿಸಲಾಗಿದೆ. ಎ) ವ್ಯಕ್ತಿಯು 1950ರ ಜ. 26 ಅಥವಾ 1987ರ ಜುಲೈ 1ಕ್ಕೂ ಮೊದಲು ಜನಿಸಿರಬೇಕು. ಬಿ) 1987ರ ಜುಲೈ 1ರಂದು ಅಥವಾ ನಂತರ, ಅಂದರೆ 2003ರ ಪೌರತ್ವ (ತಿದ್ದುಪಡಿ) ಕಾಯ್ದೆ ಜಾರಿಗೂ ಮುನ್ನ ಜನಿಸಿರಬೇಕು. ಮತ್ತು ಅವರು ಹುಟ್ಟಿದಾಗ ಅವರ ತಂದೆ–ತಾಯಿ ಪೈಕಿ ಯಾರಾದರೂ ಭಾರತದ ಪೌರರಾಗಿರಬೇಕು. ಸಿ) 2003ರ ಪೌರತ್ವ (ತಿದ್ದುಪಡಿ) ಕಾಯ್ದೆ ಜಾರಿಯಾದ ನಂತರ ಜನಿಸಿದವರಾಗಿದ್ದು, ಅವರ ತಂದೆ–ತಾಯಿ ಇಬ್ಬರೂ ಭಾರತದ ಪೌರರಾಗಿರಬೇಕು; ಇಲ್ಲವೇ ಇಬ್ಬರ ಪೈಕಿ ಒಬ್ಬರು ಪೌರರಾಗಿದ್ದು, ಇನ್ನೊಬ್ಬರು ಅಕ್ರಮ ವಲಸಿಗರಾಗಿಲ್ಲದಿದ್ದರೆ, ಆ ವ್ಯಕ್ತಿಗೆ ಹುಟ್ಟಿನ ಮೂಲಕ ಪೌರತ್ವ ಸಿಗುತ್ತದೆ.

**ಸೆಕ್ಷನ್ 4- ವಂಶಪಾರಂಪರ್ಯದ ಆಧಾರದಲ್ಲಿ ಪೌರತ್ವ:** ಇದರಲ್ಲಿ ವಂಶಪಾರಂಪರ್ಯವಾಗಿ ಹೇಗೆ ಪೌರತ್ವ ದಕ್ಕುತ್ತದೆ ಎನ್ನುವುದನ್ನು ವಿವರಿಸಲಾಗಿದೆ. 4(ಎ) ಪ್ರಕಾರ, 1950ರ ಜನವರಿ 26ರಂದು ಅಥವಾ ನಂತರದಲ್ಲಿ (1992ರ ಡಿ.10ಕ್ಕೂ ಮುಂಚೆ) ಜನಿಸಿರಬೇಕು. ವ್ಯಕ್ತಿಯು ಜನಿಸಿದಾಗ ಅವರ ತಂದೆಯು ಭಾರತದ ಪೌರರಾಗಿರಬೇಕು. 4(ಬಿ) ಪ್ರಕಾರ, 1992ರ ಡಿ.10ರ ನಂತರ ಜನಿಸಿದವರಾಗಿದ್ದು, ಆ ಸಂದರ್ಭದಲ್ಲಿ ಅವರ ತಂದೆ–ತಾಯಿ ಯಾರಾದರೂ ಭಾರತದ ಪೌರರಾಗಿದ್ದರೆ, ಅವರಿಗೆ ವಂಶಪಾರಂಪರ್ಯವಾಗಿ ಭಾರತದ ಪೌರತ್ವ ಸಿಗುತ್ತದೆ.

**ಸೆಕ್ಷನ್ 5–ನೋಂದಣಿ ಮೂಲಕ ಪೌರತ್ವ:** ಈ ಸೆಕ್ಷನ್‌ನಲ್ಲಿ ನೋಂದಣಿ ಮೂಲಕ ಪೌರತ್ವ ಪಡೆಯುವ ಬಗೆಗಳನ್ನು ವಿವರಿಸಲಾಗಿದೆ. ಹುಟ್ಟಿನ ಮೂಲದಿಂದ ಆಗಲಿ ಅಥವಾ ವಂಶಪಾರಂಪರ್ಯವಾಗಿ ಆಗಲಿ ವ್ಯಕ್ತಿಗೆ ಪೌರತ್ವ ಸಿಗದೇ ಇದ್ದರೆ, ಅವರು ಅಕ್ರಮ ವಲಸಿಗರಲ್ಲದಿದ್ದರೆ, ನೋಂದಣಿಯ ಮೂಲಕ ಭಾರತದ ಪೌರರಾಗಲು ಸಾಧ್ಯವಿದೆ. ಅದಕ್ಕೆ ಹಲವು ನಿಯಮ ನಿಬಂಧನೆಗಳಿದ್ದು, ಅವುಗಳನ್ನು ಈ ಸೆಕ್ಷನ್‌ನ ವಿವಿಧ ಉಪಸೆಕ್ಷನ್‌ಗಳಲ್ಲಿ ವಿವರಿಸಲಾಗಿದೆ

**ಸೆಕ್ಷನ್ 6- ದೇಶೀಕರಣದ ಮೂಲಕ ಪೌರತ್ವ :** ದೇಶೀಕರಣದ (ನ್ಯಾಚುರಲೈಸೇಷನ್) ಮೂಲಕ ಭಾರತದ ಪೌರರಾಗಲು ಈ ಸೆಕ್ಷನ್ ಅವಕಾಶ ನೀಡುತ್ತದೆ. ಸೆಕ್ಷನ್ 6ರ ಉಪಸೆಕ್ಷನ್ 1ರ ಪ್ರಕಾರ, ಯಾವುದೇ ವಯಸ್ಕ ವ್ಯಕ್ತಿ ಅಕ್ರಮ ವಲಸಿಗನಲ್ಲದಿದ್ದರೆ ನಿಗದಿತ ರೀತಿಯಲ್ಲಿ ಪೌರತ್ವಕ್ಕಾಗಿ ಅರ್ಜಿ ಸಲ್ಲಿಸಬಹುದು. ನಿಯಮಗಳ ಅನುಸಾರ ಅರ್ಜಿದಾರನು ದೇಶೀಕರಣಕ್ಕೆ ಅರ್ಹ ಎಂದು ಕೇಂದ್ರ ಸರ್ಕಾರಕ್ಕೆ ಮನದಟ್ಟಾದರೆ, ಅವರಿಗೆ ಪೌರತ್ವ (ದೇಶೀಕರಣ ಪ್ರಮಾಣಪತ್ರ) ನೀಡಲಾಗುತ್ತದೆ. ಅರ್ಜಿದಾರನು ತತ್ವಶಾಸ್ತ್ರ, ಕಲೆ, ವಿಜ್ಞಾನ, ವಿಶ್ವಶಾಂತಿ ಮುಂತಾದ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ್ದರೆ, ಅವರಿಗೆ ಕೇಂದ್ರ ಸರ್ಕಾರವು ನಿಯಮಗಳಲ್ಲಿ ವಿನಾಯಿತಿಯನ್ನೂ ನೀಡಬಹುದು.

**ಸೆಕ್ಷನ್ 7- ದೇಶದ ವ್ಯಾಪ್ತಿಗೆ ಒಳಪಟ್ಟ ಪ್ರದೇಶದವರಿಗೆ ಪೌರತ್ವ:** ಒಂದು ಪ್ರದೇಶವನ್ನು ದೇಶದ ಭಾಗವನ್ನಾಗಿಸಿಕೊಳ್ಳುವ ಮೂಲಕ, ಆ ಪ್ರದೇಶದಲ್ಲಿರುವವರಿಗೆ ಪೌರತ್ವ ನೀಡುವುದನ್ನು ಈ ಸೆಕ್ಷನ್‌ನಲ್ಲಿ ವಿವರಿಸಲಾಗಿದೆ. ಯಾವುದೇ ಒಂದು ಪ್ರದೇಶವು ದೇಶದ ವ್ಯಾಪ್ತಿಗೆ ಒಳಪಡುತ್ತದೆ ಎಂದು ಕೇಂದ್ರ ಸರ್ಕಾರವು ಗೆಜೆಟ್ ಅಧಿಸೂಚನೆ ಹೊರಡಿಸಿದರೆ, ಆ ಪ್ರದೇಶಕ್ಕೆ ಸಂಬಂಧಿಸಿದ ವ್ಯಕ್ತಿಗಳು ಆದೇಶವು ಜಾರಿಯಾದ ದಿನದಿಂದ ಭಾರತದ ಪೌರರಾಗುತ್ತಾರೆ.

## ಕಾಯ್ದೆಯ ಸೆಕ್ಷನ್ 5ರ ಅಡಿಯಲ್ಲಿ ಯಾರೆಲ್ಲ ಅರ್ಜಿ ಸಲ್ಲಿಸಬಹುದು?

| | ಪೌರತ್ವಕ್ಕಾಗಿ ಯಾರು ಅರ್ಜಿ ಸಲ್ಲಿಸಬಹುದು? | ಬೇಕಾಗುವ ದಾಖಲೆಗಳು |
|---|---|---|
| ಸೆಕ್ಷನ್ 5 (1)(ಎ) | ಹೊರದೇಶಗಳ ಪ್ರಜೆಗಳು ಅಥವಾ ಅವರ ಪೋಷಕರಲ್ಲಿ ಒಬ್ಬರು ಅವಿಭಜಿತ ಭಾರತದಲ್ಲಿ ಜನಿಸಿದ್ದರೆ ಮತ್ತು ಕನಿಷ್ಠ ಏಳು ವರ್ಷಗಳಿಂದ ಭಾರತದ ನಿವಾಸಿಯಾಗಿದ್ದವರು ಅರ್ಜಿ ಹಾಕಬಹುದು | ಅಧಿಕೃತ ವಿದೇಶಿ ಪಾಸ್‌ಪೋರ್ಟ್ ಪ್ರತಿ, ವಾಸಕ್ಕಾಗಿ ನೀಡಿರುವ ಪರವಾನಗಿ ಪತ್ರದ ಪ್ರತಿ, ಅರ್ಜಿದಾರರ ಜನನ ದಾಖಲೆಗಳು ಅಥವಾ ಅವರ ಪೋಷಕರಲ್ಲಿ ಒಬ್ಬರು ಅವಿಭಜಿತ ಭಾರತದವರು ಎಂಬುದಕ್ಕೆ ಪಾಸ್‌ಪೋರ್ಟ್‌ನ ಪ್ರತಿ ಅಥವಾ ಜನನ ಪ್ರಮಾಣಪತ್ರ |
| ಸೆಕ್ಷನ್5 (1)(ಸಿ) | ಭಾರತದ ಪ್ರಜೆಯನ್ನು ಮದುವೆಯಾಗಿರುವ ಮತ್ತು ಏಳು ವರ್ಷಗಳಿಂದ ಭಾರತದಲ್ಲಿ ನೆಲಸಿರುವ ವಿದೇಶಿ ವಯಸ್ಕ ಪ್ರಜೆ ಪೌರತ್ವಕ್ಕಾಗಿ ಅರ್ಜಿ ಸಲ್ಲಿಸಬಹುದು | ಅಧಿಕೃತ ವಿದೇಶಿ ಪಾಸ್‌ಪೋರ್ಟ್, ವಾಸದ ಉದ್ದೇಶಕ್ಕಾಗಿ ಹೊಂದಿರುವ ಪರವಾನಗಿ ಪತ್ರದ ಪ್ರತಿ, ಅರ್ಜಿದಾರರ ಪತಿ ಅಥವಾ ಪತ್ನಿ ಭಾರತದ ಪ್ರಜೆ ಎಂದು ದೃಢೀಕರಿಸುವ ದಾಖಲೆ- ಭಾರತದ ಪಾಸ್‌ಪೋರ್ಟ್ ಅಥವಾ ಜನನ ಪ್ರಮಾಣಪತ್ರ, ಭಾರತದಲ್ಲಿ ಮದುವೆಗೆ ಸಂಬಂಧಿಸಿದ ನೋಂದಣಾಧಿಕಾರಿ ನೀಡಿರುವ ವಿವಾಹ ನೋಂದಣಿ ಪ್ರಮಾಣಪತ್ರ ಪ್ರತಿ |
| ಸೆಕ್ಷನ್ 5(1)(ಡಿ) | ಭಾರತದ ಪ್ರಜೆಗಳಾಗಿರುವ ಪೋಷಕರ 18 ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳು ಅರ್ಜಿ ಸಲ್ಲಿಸಬಹುದು | ಅಧಿಕೃತ ವಿದೇಶಿ ಪಾಸ್‌ಪೋರ್ಟ್‌ನ ಪ್ರತಿ, ವಾಸ ಪರವಾನಗಿ ಪತ್ರದ ಪ್ರತಿ, ಇಬ್ಬರೂ ಪೋಷಕರು ಭಾರತದ ಪ್ರಜೆಗಳು ಎಂಬುದರ ದಾಖಲೆ- ಭಾರತದ ಪಾಸ್‌ಪೋರ್ಟ್ ಅಥವಾ ಜನನ ಪ್ರಮಾಣಪತ್ರ |
| ಸೆಕ್ಷನ್ 5(1)(ಇ | ಸೆಕ್ಷನ್ 5ರ ಉಪ ಸೆಕ್ಷನ್ 1ರ (ಎ) ಕಲಂ ಅಥವಾ ಸೆಕ್ಷನ್ 6ರ ಉಪಸೆಕ್ಷನ್ (1)ರ ಅಡಿಯಲ್ಲಿ ಭಾರತದ ಪ್ರಜೆಗಳು ಎಂದು ನೋಂದಣಿ ಮಾಡಿಸಿಕೊಂಡಿರುವ ಪೋಷಕರ ಮಗ/ ಮಗಳಾಗಿರುವ ವಿದೇಶಿ ವಯಸ್ಕ ಪ್ರಜೆ ಅರ್ಜಿ ಹಾಕಬಹುದು | ವಿದೇಶದ ಅಧಿಕೃತ ಪಾಸ್‌ಪೋರ್ಟ್ ಪ್ರತಿ, ವಾಸ ಪರವಾನಗಿ ಪತ್ರದ ಪ್ರತಿ, 1955ರ ಪೌರತ್ವ ಕಾಯ್ದೆಯ ಸರಕ್ಷನ್ 5ರ ಉಪಸೆಕ್ಷನ್ (1)ರ (ಎ) ಕಲಂ ಅಥವಾ ಸೆಕ್ಷನ್ 6ರ ಉಪಸೆಕ್ಷನ್ 1ರ ಅಡಿಯಲ್ಲಿ ಪೋಷಕರಿಗೆ ಪೌರತ್ವ ನೀಡಿರುವ ಪ್ರಮಾಣಪತ್ರದ ಪ್ರತಿ |
| ಸೆಕ್ಷನ್ 5 (1) (ಎಫ್ | ಯಾವುದೇ ವಿದೇಶಿ ವಯಸ್ಕ ಪ್ರಜೆ ಅಥವಾ ಅವರ ಪೋಷಕರಲ್ಲಿ ಯಾರೇ ಒಬ್ಬರು ಸ್ವತಂತ್ರ ಭಾರತದ ಪ್ರಜೆಯಾಗಿದ್ದರೆ ಮತ್ತು ಅವರು 12 ತಿಂಗಳು/ಒಂದು ವರ್ಷ ಭಾರತದಲ್ಲಿ ವಾಸಿಸಿದ್ದರೆ ಪೌರತ್ವಕ್ಕಾಗಿ ಅರ್ಜಿ ಸಲ್ಲಿಸಬಹುದು | ಅಧಿಕೃತ ವಿದೇಶಿ ಪಾಸ್‌ಪೋರ್ಟ್‌ನ ಪ್ರತಿ, ಅಧಿಕೃತ ವಾಸದ ಪರವಾನಗಿ ಪತ್ರ, ಅರ್ಜಿದಾರ ಅಥವಾ ಅವರ ಪೋಷಕರಲ್ಲಿ ಇಬ್ಬರು ಸ್ವತಂತ್ರ ಭಾರತದ ಪ್ರಜೆ ಎಂಬುದಕ್ಕೆ ಅಗತ್ಯವಿರುವ ದಾಖಲೆ–ಪಾಸ್‌ಪೋರ್ಟ್ ಅಥವಾ ಜನನ ಪ್ರಮಾಣಪತ್ರ |
| 5(1)(ಜಿ) | ಕನಿಷ್ಠ ಐದು ವರ್ಷ ಅಥವಾ ಅದಕ್ಕಿಂತ ಹೆಚ್ಚು ಸಮಯದಿಂದ ಸಾಗರೋತ್ತರ ಭಾರತೀಯ ಪೌರ ಎಂಬ ಕಾರ್ಡ್ ಹೊಂದಿರುವ ವಿದೇಶಿ ವಯಸ್ಕ ಪ್ರಜೆ ಭಾರತದ ಪೌರತ್ವಕ್ಕೆ ಮನವಿ ಮಾಡಬಹುದು | ಅಧಿಕೃತ ವಿದೇಶಿ ಪಾಸ್‌ಪೋರ್ಟ್ ಪ್ರತಿ, 1955ರ ಪೌರತ್ವ ಕಾಯ್ದೆಯ ಸೆಕ್ಷನ್ 7ಎ ಅಡಿಯಲ್ಲಿ ಸಾಗರೋತ್ತರ ಭಾರತೀಯ ಪ್ರಜೆ ಎಂದು ನೋಂದಣಿ ಮಾಡಿಸಿಕೊಂಡಿರುವ ದಾಖಲೆಯ ಪ್ರತಿ |

## ಸಂವಿಧಾನದಲ್ಲಿ...

ಭಾರತದ ಸಂವಿಧಾನದ ಎರಡನೇ ಭಾಗವು ಪೌರತ್ವದ ಕುರಿತಾಗಿದ್ದು, 5ರಿಂದ 11ರವರೆಗಿನ ವಿಧಿಗಳು ಈ ಬಗ್ಗೆ ವಿವರಿಸುತ್ತವೆ. ದೇಶದ ಸಂವಿಧಾನವು ಒಂದೇ ಪೌರತ್ವವನ್ನು ಪ್ರತಿಪಾದಿಸುತ್ತದೆ.

ಅದರ ಪ್ರಕಾರ, ಯಾವುದೇ ವ್ಯಕ್ತಿ ಸಂವಿಧಾನ ಜಾರಿಯಾದ (1950ರ ಜನವರಿ 26) ಸಂದರ್ಭದಲ್ಲಿ ಮತ್ತು ನಂತರದಲ್ಲಿ ಭಾರತದಲ್ಲಿ ಜನಿಸಿರಬೇಕು. ಇಲ್ಲವೇ ಅವರ ತಂದೆ ತಾಯಿಯಲ್ಲಿ ಒಬ್ಬರು ಭಾರತದಲ್ಲಿ ಜನಿಸಿರಬೇಕು ಅಥವಾ ಕನಿಷ್ಠ ಐದು ವರ್ಷ ಮತ್ತು ಅದಕ್ಕಿಂತ ಹೆಚ್ಚಿನ ಸಮಯದಿಂದ ಭಾರತದ ನಿವಾಸಿಯಾಗಿದ್ದರೆ, ಅಂಥವರು ದೇಶದ ಪೌರರಾಗುತ್ತಾರೆ.


## ಆರು ಬಾರಿ ತಿದ್ದುಪಡಿ

ಪೌರತ್ವ ಕಾಯ್ದೆ–1955ಕ್ಕೆ ಈವರೆಗೆ ಆರು ಬಾರಿ ತಿದ್ದುಪಡಿ ಮಾಡಲಾಗಿದೆ. 1986, 1992, 2003, 2005, 2015, ಮತ್ತು 2019ರಲ್ಲಿ ಕಾಯ್ದೆಯಲ್ಲಿನ ಕೆಲವು ಸೆಕ್ಷನ್, ಉಪಸೆಕ್ಷನ್‌ಗಳಿಗೆ ತಿದ್ದುಪಡಿ ತರಲಾಗಿದೆ.

2019ರಲ್ಲಿ ಮಾಡಲಾದ ತಿದ್ದುಪಡಿ ಪ್ರಮುಖವಾದುದು. ಈ ತಿದ್ದುಪಡಿಗೆ ವಿರೋಧ ಪಕ್ಷಗಳು ಹಾಗೂ ವಿವಿಧ ವಲಯಗಳಿಂದ ತೀವ್ರ ವಿರೋಧ ವ್ಯಕ್ತವಾಗಿತ್ತು. ಪಾಕಿಸ್ತಾನ, ಬಾಂಗ್ಲಾದೇಶ ಮತ್ತು ಅಫ್ಗಾನಿಸ್ತಾನಗಳಿಂದ 2014ರ ಡಿಸೆಂಬರ್ 31ರ ಮೊದಲು ಭಾರತಕ್ಕೆ ವಲಸೆ ಬಂದ ಹಿಂದೂ, ಸಿಖ್, ಬೌದ್ಧ, ಜೈನ, ಪಾರ್ಸಿ ಮತ್ತು ಕ್ರೈಸ್ತ ಸಮುದಾಯದವರಿಗೆ ಇಲ್ಲಿನ ಪೌರತ್ವ ಹೊಂದಲು ಈ ತಿದ್ದುಪಡಿ ಅನುಕೂಲ ಕಲ್ಪಿಸಿತ್ತು. ಈ ಮೂರು ದೇಶಗಳ ಆರು ಧರ್ಮಗಳಿಗೆ ಸೇರಿದ ಜನರು ಪೌರತ್ವಕ್ಕಾಗಿ ಅರ್ಜಿ ಸಲ್ಲಿಸಲು ಭಾರತದಲ್ಲಿ ನೆಲಸಿರುವ ಅವಧಿಯ ಮಿತಿಯನ್ನು ಈ ತಿದ್ದುಪಡಿಯಲ್ಲಿ 11 ವರ್ಷಗಳಿಂದ ಐದು ವರ್ಷಗಳಿಗೆ ಇಳಿಸಲಾಗಿತ್ತು.

## ಪಾಸ್‌ಪೋರ್ಟ್, ಜನನ ಪ್ರಮಾಣಪತ್ರ ದಾಖಲೆ

ಬಾಂಬೆ ಹೈಕೋರ್ಟ್ ತನ್ನ ಆದೇಶದಲ್ಲಿ ಪಾನ್ ಕಾರ್ಡ್ ಅಥವಾ ಆಧಾರ್ ಕಾರ್ಡ್ ಅಥವಾ ಮತದಾರರ ಗುರುತಿನ ಚೀಟಿಯು ಸರ್ಕಾರದ ಸೌಲಭ್ಯಗಳನ್ನು ಪಡೆಯಲು ಬೇಕಾದ ದಾಖಲೆಗಳಷ್ಟೆ ಎಂದು ಹೇಳಿದೆ. ಇದಕ್ಕೆ ಪೂರಕವೆಂಬಂತೆ, 1955ರ ಪೌರತ್ವ ಕಾಯ್ದೆ, 2009ರಲ್ಲಿ ಸರ್ಕಾರ ರೂಪಿಸಿರುವ ಪೌರತ್ವದ ನಿಯಮಾವಳಿಗಳಲ್ಲಿ ಎಲ್ಲೂ ಈ ದಾಖಲೆಗಳ ಪ್ರಸ್ತಾಪ ಬರುವುದಿಲ್ಲ. ಭಾರತದ ಪಾಸ್‌ಪೋರ್ಟ್ ಅಥವಾ ಜನನ ಪ್ರಮಾಣಪತ್ರಗಳನ್ನಷ್ಟೇ ದಾಖಲೆಗಳನ್ನಾಗಿ ಪರಿಗಣಿಸಲಾಗಿದೆ.




## ಸೆಕ್ಷನ್ 6ಎ, 6(1) ಏನು ಹೇಳುತ್ತವೆ?

ಕೇಂದ್ರ ಸರ್ಕಾರ ಮತ್ತು ಅಸ್ಸಾಂ ವಿದ್ಯಾರ್ಥಿ ಒಕ್ಕೂಟದ ನಡುವಿನ 'ಅಸ್ಸಾಂ ಒಪ್ಪಂದ'ದಂತೆ 1985ರಲ್ಲಿ ಪೌರತ್ವ ಕಾಯ್ದೆಗೆ ತಿದ್ದುಪಡಿ ತಂದು, ಕಾಯ್ದೆಯ ಸೆಕ್ಷನ್ 6ಕ್ಕೆ ಉಪ ಸೆಕ್ಷನ್ 'ಎ' ಅನ್ನು ಸೇರಿಸಲಾಯಿತು. 1966ರ ಜ.1ರಿಂದ 1971ರ ಮಾರ್ಚ್ 25ರ ನಡುವೆ ಅಸ್ಸಾಂಗೆ ವಲಸೆ ಬಂದವರಿಗೆ ಭಾರತದ ಪೌರತ್ವ ನೀಡಲು ಈ ಸಬ್‌ಸೆಕ್ಷನ್ ಅವಕಾಶ ಕಲ್ಪಿಸುತ್ತದೆ. 2024ರಲ್ಲಿ ಸುಪ್ರೀಂ ಕೋರ್ಟ್ ಸೆಕ್ಷನ್ '6ಎ'ನ ಸಾಂವಿಧಾನಿಕ ಸಿಂಧುತ್ವವನ್ನು ಎತ್ತಿಹಿಡಿದಿತ್ತು.

ದೇಶೀಕರಣ ಮೂಲಕ ಪೌರತ್ವ ನೀಡುವ ಕಾಯ್ದೆಯ ಸೆಕ್ಷನ್ 6ರ ಉಪ ಸೆಕ್ಷನ್ 1ರ ಪ್ರಕಾರ, ದೇಶದಲ್ಲಿ ಕನಿಷ್ಠ 12 ವರ್ಷಗಳಿಂದ ನೆಲಸಿರುವ ವಯಸ್ಕ ವಿದೇಶಿ ಪ್ರಜೆ ಪೌರತ್ವಕ್ಕಾಗಿ ಅರ್ಜಿ ಸಲ್ಲಿಸಬಹುದು. ಇದಕ್ಕಾಗಿ ಅವರು ಅಧಿಕೃತ ವಿದೇಶಿ ಪಾಸ್‌ಪೋರ್ಟ್ ಪ್ರತಿ, ವಾಸಕ್ಕಾಗಿ ನೀಡಲಾದ ಪರವಾನಗಿ ಪತ್ರದ ಪ್ರತಿ, ಪೌರತ್ವ ಕಾಯ್ದೆಯ ಅಡಿಯಲ್ಲಿ ಭಾರತೀಯ ಸ್ಟೇಟ್ ಬ್ಯಾಂಕ್‌ನಲ್ಲಿ ₹1,500 ಠೇವಣಿ ಇಟ್ಟಿರುವ ಬ್ಯಾಂಕ್ ಚಲನ್ ಪ್ರತಿ, ಅರ್ಜಿದಾರರ ಸ್ವಯಂ ದೃಢೀಕರಣ ಪ್ರಮಾಣಪತ್ರ ಮತ್ತು ಅರ್ಜಿದಾರರ ಉತ್ತಮ ನಡವಳಿಕೆಗೆ ಸಂಬಂಧಿಸಿದಂತೆ ಇಬ್ಬರು ಭಾರತೀಯರು ನೀಡಿರುವ ದೃಢೀಕರಣಗಳು, ಭಾರತದಲ್ಲಿ ಚಾಲ್ತಿಯಲ್ಲಿರುವ ಯಾವುದೇ ಭಾಷೆಯ ಬಗ್ಗೆ ಅರ್ಜಿದಾರರಿಗೆ ತಿಳಿವಳಿಕೆ ಇದೆ ಎಂದು ದೃಢೀಕರಿಸಿರುವ ಎರಡು ಭಾಷಾ ಪ್ರಮಾಣಪತ್ರಗಳು, ಪೌರತ್ವಕ್ಕಾಗಿ ಮನವಿ ಮಾಡುವ ಕುರಿತು ಅರ್ಜಿದಾರರ ಉದ್ದೇಶಕ್ಕೆ ಸಂಬಂಧಿಸಿದಂತೆ ಎರಡು ದಿನಪತ್ರಿಕೆಗಳಲ್ಲಿ ಭಿನ್ನ ದಿನಾಂಕಗಳಲ್ಲಿ ಪ್ರಕಟವಾಗಿರುವ ಪ್ರಕಟಣೆಗಳನ್ನು ದಾಖಲೆಯಾಗಿ ಸಲ್ಲಿಸಬೇಕಾಗುತ್ತದೆ.

## ಪದಬಂ

**ಎಡದಿಂದ ಬಲಕ್ಕೆ**

2.ಲೋಹಾಂಶವುಳ್ಳ ಖನಿಜದ್ರವ್ಯ (3)
4.ಯುನಾನಿ ವೈದ್ಯನಿವನು (3)
5.ಜೊತೆಯಲ್ಲಿ ಪಾಠ ಕಲಿಯುತ್ತಿರುವವನು (4)
6.ರಾಯರು ನಡೆಸಿರುವ ಸಂಧಾನ (4)
8.ತಿಲಕದ ಬಳಿಯಿರುವ ಎಳ್ಳು (2)
10.ನೇಸರನ ಇನ್ನೊಂದು ಹೆಸರು (2)
13.ದಪ್ಪ ನೂಲಿನ ಹಾಸು (4)
14.ನಿಜವಾಗಿಯೂ ಈಕೆ ಶ್ರೀಕೃಷ್ಣನ ಪತ್ನಿ! (4)
15.ಬೇಡುವವ ಇಲ್ಲಿದ್ದಾನೆ (3)
16.ತುಂಬ ಹದಗೆಟ್ಟ ಸ್ಥಿತಿ (3)

**ಮೇಲಿಂದ ಕೆಳಕ್ಕೆ**

1.ನಾ ಮುಂದು ತಾ ಮುಂದು ಎಂದು ನುಗ್ಗುವುದು (6)
2.ಪುರಾಣ ಪ್ರಕಾರ ಸ್ವರ್ಗವಿರುವ ನಗರ (5)
3.ಪಾಯ ತೋಡುತ್ತಲೇ ಹೂಡಿರುವ ಯುಕ್ತಿ (3)
5.ಸೈನ್ಯದ ಮುಖ್ಯಾಧಿಕಾರಿ (4)
7.ಇದು ಚರಿತ್ರೆಗೆ ಸಂಬಂಧಿಸಿದುದು (6)
9.ಭೋಜನ ಸಮಾರಂಭಕ್ಕೆ ಬೇಕಾದ ಸಾಧನ ಸಾಮಗ್ರಿ (4)
11.ಲೋಹದ ಹಕ್ಕಿಯಲ್ಲಿನ ಪಯಣ (5)
12.ವ್ಯಾಕರಣ ಪ್ರಕ್ರಿಯೆಗೆ ಸಹಾಯಕವಾಗುವ ಅಕ್ಷರ (3)

**6132ನೇ ಪದಬಂಧದ ಉತ್ತರ**

ಎಡದಿಂದ ಬಲಕ್ಕೆ:
1.ಖಜುತೆ 3.ಉಗುರು
5.ಗಡಿಯಾರ 7.ವಿನಿಮಯ

## ಸುಡೊಕು 6

**ಆಡುವುದು ಹೀಗೆ:** ಮನೆಗಳನ್ನು 1ರಿಂದ 9ರ
ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮ
ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾ

## ❖ ವಿದೇಶಿ ಹೂಡಿಕೆ: ನಿಯಮ ಸರಳ

- ಭಾರತೀಯ ಷೇರುಪೇಟೆ ನಿಯಂತ್ರಣ ಮಂಡಳಿಯು (ಸೆಬಿ) ವಿದೇಶಿ ಹೂಡಿಕೆದಾರರಿಗೆ ಸಂಬಂಧಿಸಿದ ನಿಯಮಗಳನ್ನು ಇನ್ನಷ್ಟು ಸರಳಗೊಳಿಸಲು ಮುಂದಾಗಿದೆ. ದೇಶದ ಬಂಡವಾಳ ಮಾರುಕಟ್ಟೆಗಳಿಗೆ ದೀರ್ಘಾವಧಿಯ ವಿದೇಶಿ ಬಂಡವಾಳದ ಹರಿವು ಇನ್ನಷ್ಟು ಹೆಚ್ಚಬೇಕು ಎಂಬ ಉದ್ದೇಶವನ್ನು ಸೆಬಿ ಹೊಂದಿದೆ.
- ಸೆಬಿಯ ವಾರ್ಷಿಕ ವರದಿಯಲ್ಲಿ ಈ ವಿವರಗಳು ಇವೆ. ಸರ್ಕಾರಿ ಸ್ವಾಮ್ಯದ ವಿದೇಶಿ ಹೂಡಿಕೆ ಸಂಸ್ಥೆಗಳು, ವಿದೇಶಿ ಸರ್ಕಾರಿ ನಿಧಿಗಳು, ಸಣ್ಣ ಹೂಡಿಕೆದಾರರಿಂದ ಹಣ ಸಂಗ್ರಹಿಸಿ ಅದನ್ನು ಬಂಡವಾಳ ಮಾರುಕಟ್ಟೆಯಲ್ಲಿ ತೊಡಗಿಸುವ ವಿದೇಶಿ ಸಂಸ್ಥೆಗಳಿಗೆ ಏಕಗವಾಕ್ಷಿ ವ್ಯವಸ್ಥೆಯನ್ನು ರೂಪಿಸುವ ಪ್ರಸ್ತಾವವನ್ನು ಸೆಬಿ ಕಳೆದ ವಾರ ಸಿದ್ಧಪಡಿಸಿದೆ.
- ಇದು ವಿದೇಶಿ ಹೂಡಿಕೆದಾರರು ಹೆಚ್ಚಿನ ಪ್ರಮಾಣದಲ್ಲಿ ಭಾರತದ ಮಾರುಕಟ್ಟೆಯಲ್ಲಿ ಹಣ ತೊಡಗಿಸುವುದಕ್ಕೆ ಉತ್ತೇಜನ ನೀಡಬಹುದು ಎಂದು ಸೆಬಿ ನಿರೀಕ್ಷಿಸಿದೆ. ಚಾಲ್ತಿಯಲ್ಲಿ ಇರುವ ನಿಯಮಗಳನ್ನು ಸರಳಗೊಳಿಸಲು ಕೂಡ ಈ ವರ್ಷದಲ್ಲಿ ಕ್ರಮಗಳನ್ನು ಕೈಗೊಳ್ಳಲಾಗುತ್ತದೆ ಎಂದು ಸೆಬಿ ವರದಿಯು ಹೇಳಿದೆ.
- ನಿಯಮಗಳ ಪಾಲನೆಯ ಹೊರೆಯನ್ನು ಕಡಿಮೆ ಮಾಡಲು, ಅನಗತ್ಯ ನಿಯಮಗಳನ್ನು ಗುರುತಿಸುವ ಕೆಲಸಕ್ಕೆ ಗಮನ ನೀಡಲಾಗುತ್ತದೆ ಎಂದು ಸೆಬಿ ಹೇಳಿದೆ.
- ಸೈಬರ್ ಭದ್ರತಾ ಮೂಲಸೌಕರ್ಯವನ್ನು ಮೇಲ್ದರ್ಜೆಗೆ ಏರಿಸಿ, ವಹಿವಾಟು ಗಳಲ್ಲಿ ಯಾವುದೇ ಅಪಾಯಗಳು ಎದುರಾಗುವುದನ್ನು ನಿವಾರಿಸುವ ಕೆಲಸ ಮಾಡಲಾಗುತ್ತದೆ ಎಂದು ಕೂಡ ಸೆಬಿ ತನ್ನ ವರದಿಯಲ್ಲಿ ಹೇಳಿದೆ. ನಿರ್ದಿಷ್ಟ ಬಗೆಯ ವಹಿವಾಟುಗಳಲ್ಲಿ ಅಕ್ರಮಗಳನ್ನು ತಡೆಯಲು ಸೆಬಿ ತನ್ನ ವಿಚಕ್ಷಣಾ ವ್ಯವಸ್ಥೆ ಯನ್ನು ಉತ್ತಮಪಡಿಸುತ್ತಿದೆ ಎಂದು ಅದರ ಅಧ್ಯಕ್ಷ ತುಹಿನ್ ಕಾಂತ ಪಾಂಡೆ ಅವರು ಕಳೆದ ತಿಂಗಳು ಹೇಳಿದ್ದಾರೆ.
- ಅಕ್ರಮ ಎಸಗಿದ ಆರೋಪದ ಅಡಿಯಲ್ಲಿ ಅಮೆರಿಕದ ಜೇನ್ ಸ್ಟ್ರೀಟ್ ಸಂಸ್ಥೆಗೆ ನಿರ್ಬಂಧ ಹೇರಿದ ನಂತರದಲ್ಲಿ ಅವರು ಈ ಮಾತು ಹೇಳಿದ್ದರು.

## ❖ ಆದಾಯ ತೆರಿಗೆ ಮಸೂದೆ ಅಂಗೀಕಾರ

- ಹೊಸ ಆದಾಯ ತೆರಿಗೆ ಮಸೂದೆಗೆ ರಾಜ್ಯಸಭೆಯು ಮಂಗಳವಾರ ಅಂಗೀಕಾರ ನೀಡುವುದರೊಂದಿಗೆ ಈ ಮಸೂದೆಗೆ ಸಂಸತ್ತಿನ ಅಂಗೀಕಾರ ದೊರೆತಂತೆ ಆಗಿದೆ.
- ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಆದಾಯ ತೆರಿಗೆ ಮಸೂದೆ ಮತ್ತು ತೆರಿಗೆ ಕಾನೂನು (ತಿದ್ದುಪಡಿ) ಮಸೂದೆಯನ್ನು ರಾಜ್ಯಸಭೆಯಲ್ಲಿ ಮಂಡಿಸಿದರು. ಮಸೂದೆಗಳಿಗೆ ರಾಜ್ಯಸಭೆಯ ಧ್ವನಿಮತದ ಮೂಲಕ ಒಪ್ಪಿಗೆ ನೀಡಿತು.
- 1961ರ ಆದಾಯ ತೆರಿಗೆ ಕಾಯ್ದೆಯ ಕೆಲವು ಅಂಶಗಳು ಹಳತಾಗಿದ್ದ ಕಾರಣಕ್ಕೆ ಹೊಸ ಮಸೂದೆಯನ್ನು ಸಿದ್ಧಪಡಿಸಬೇಕಾಯಿತು ಎಂದು ನಿರ್ಮಲಾ ಅವರು ಸದನಕ್ಕೆ ತಿಳಿಸಿದರು.
- ಇಂತಹ ಮಹತ್ವದ ಮಸೂದೆಗಳ ಬಗ್ಗೆ ಚರ್ಚಿಸಲು ವಿರೋಧ ಪಕ್ಷಗಳು ಬಯಸುತ್ತಿಲ್ಲ ಎಂದು ನಿರ್ಮಲಾ ಆಕ್ರೋಶ ವ್ಯಕ್ತಪಡಿಸಿದರು.

Dr Rajkumar IAS/KAS Academy

## ❖ 'ಅಂಬಾನಿ ಕುಟುಂಬದ ಆಸ್ತಿ ಮೌಲ್ಯ ₹28 ಲಕ್ಷ ಕೋಟಿ

- ಉದ್ಯಮಿ ಮುಕೇಶ್ ಅಂಬಾನಿ ಕುಟುಂಬದ ಒಡೆತನದಲ್ಲಿ ಇರುವ ಸಂಪತ್ತಿನ ಮೌಲ್ಯವು ₹28 ಲಕ್ಷ ಕೋಟಿಯಷ್ಟಿದೆ ಎಂದು ಹುರೂನ್ ಸಂಸ್ಥೆಯು ಬಾರ್ಕ್ಲೇಸ್ ಜೊತೆಗೂಡಿ ಸಿದ್ಧಪಡಿಸಿದ ವರದಿಯೊಂದು ಹೇಳಿದೆ.
- ಅಂಬಾನಿ ಕುಟುಂಬದ ಸಂಪತ್ತಿನ ಮೌಲ್ಯವು ಗೌತಮ್ ಅದಾನಿ ಕುಟುಂಬದ ಆಸ್ತಿಯ ಮೌಲ್ಯಕ್ಕೆ (₹14.01 ಲಕ್ಷ ಕೋಟಿ) ಹೋಲಿಸಿದರೆ ಎರಡು ಪಟ್ಟು ಹೆಚ್ಚು.
- ಭಾರತದ 300 ಅತ್ಯಂತ ಶ್ರೀಮಂತ ಕುಟುಂಬಗಳ ಸಂಪತ್ತಿನ ಮೌಲ್ಯವು ₹140 ಲಕ್ಷ ಕೋಟಿಗಿಂತ ಹೆಚ್ಚು ಎಂದು ವರದಿಯು ಹೇಳಿದೆ. ಇದು ದೇಶದ ಒಟ್ಟು ಆಂತರಿಕ ಉತ್ಪಾದನೆಯ (ಜಿಡಿಪಿ) ಶೇ 40ರಷ್ಟು. ಅಂಬಾನಿ ಕುಟುಂಬದ ಸಂಪತ್ತಿನ ಮೌಲ್ಯವೇ ದೇಶದ ಜಿಡಿಪಿಯ ಶೇ 12ರಷ್ಟು ಆಗುತ್ತದೆ.
- ದೇಶದ 300 ಅತ್ಯಂತ ಶ್ರೀಮಂತ ಕುಟುಂಬಗಳು ಕಳೆದ ವರ್ಷದಲ್ಲಿ ಪ್ರತಿದಿನ ₹7,100 ಕೋಟಿಯಷ್ಟು ಸಂಪತ್ತು ಸೃಷ್ಟಿಸಿವೆ.

## ❖ 15ರಂದು ಟ್ರಂಪ್-ಪುಟಿನ್ ಮಾತುಕತೆ: ಜಾಗತಿಕ ಮಹತ್ವ

- ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಮತ್ತು ರಷ್ಯಾ ಅಧ್ಯಕ್ಷ ವ್ಲಾದಿಮಿರ್ ಪುಟಿನ್ ಅವರ ನಡುವೆ ಇದೇ 15ರಂದು ನಡೆಯಲಿರುವ ಮಾತುಕತೆಯು ಜಾಗತಿಕ ಮಹತ್ವ ಪಡೆದುಕೊಂಡಿದೆ. ಈ ಬೆಳವಣಿಗೆಯನ್ನು ಕಚ್ಚಾತೈಲ ಬೆಲೆ, ಹೆಚ್ಚುವರಿ ಸುಂಕ, ಮಾರುಕಟ್ಟೆಯ ಸೂಚ್ಯಂಕಗಳ ಏರಿಳಿತ ಸೇರಿದಂತೆ ನಾನಾ ಆಯಾಮಗಳಿಂದ ವಿಶ್ಲೇಷಿಸಲಾಗುತ್ತಿದೆ.
- ರಷ್ಯಾ ಮತ್ತು ಅಮೆರಿಕ ಅಧ್ಯಕ್ಷರ ಬಹುನಿರೀಕ್ಷಿತ ಸಭೆ ಇದೇ 15ರಂದು (ಶುಕ್ರವಾರ) ಅಮೆರಿಕದ ಅಲಾಸ್ಕಾದಲ್ಲಿ ನಿಗದಿಯಾಗಿದ್ದು, ಉಕ್ರೇನ್, ಚೀನಾ, ಭಾರತ ಸೇರಿದಂತೆ ವಿವಿಧ ದೇಶಗಳು ಈ ಬೆಳವಣಿಗೆಯನ್ನು ಸೂಕ್ಷ್ಮವಾಗಿ ಗಮನಿಸುತ್ತಿವೆ.
- ರಷ್ಯಾ- ಉಕ್ರೇನ್ ಕದನವನ್ನು ಕೊನೆಗಾಣಿಸುವ ಅಥವಾ ಕದನ ವಿರಾಮ ಘೋಷಿಸುವ ನಿಟ್ಟಿನಲ್ಲಿ ಮಾತುಕತೆ ನಡೆಯಲಿದೆ ಎಂದು ಮೂಲಗಳು ತಿಳಿಸಿವೆ. ಇದರ ಬೆನ್ನಲ್ಲೇ ಕಚ್ಚಾ ತೈಲ ಬೆಲೆ ಬ್ಯಾರೆಲ್‌ಗೆ ಎರಡು ಸೆಂಟ್‌ಗಳಷ್ಟು ಇಳಿಕೆ ಕಂಡಿದೆ ಎನ್ನಲಾಗುತ್ತಿದೆ.
- ರಷ್ಯಾದಿಂದ ತೈಲ ಖರೀದಿಸುತ್ತಿರುವ ಭಾರತದ ಮೇಲೆ ಹೆಚ್ಚುವರಿಯಾಗಿ ಶೇ 25ರಷ್ಟು ಸುಂಕವನ್ನು ಈಗಾಗಲೇ ಅಮೆರಿಕ ವಿಧಿಸಿದೆ. ಈ ಮೂಲಕ ಅದು ರಷ್ಯಾದ ಮೇಲೂ ಒತ್ತಡ ಹೇರುತ್ತಿದೆ. ಜತೆಗೆ ಚೀನಾ ಮೇಲೂ ಹೆಚ್ಚುವರಿ ಸುಂಕ ವಿಧಿಸುವ ಕುರಿತು ಚರ್ಚೆ ನಡೆಸುತ್ತಿದೆ.
- ಟ್ರಂಪ್- ಪುಟಿನ್ ಮಾತುಕತೆ ವೇಳೆ ರಷ್ಯಾ- ಉಕ್ರೇನ್ ನಡುವೆ ಕದನ ವಿರಾಮಕ್ಕೆ ಸಂಬಂಧಿಸಿದಂತೆ ಯಾವುದೇ ಒಪ್ಪಂದ ಏರ್ಪಟ್ಟರೂ, ಭಾರತ ಮತ್ತು ಚೀನಾ ನಿರಾಳವಾಗಲಿವೆ ಎಂದು ವಿಶ್ಲೇಷಿಸಲಾಗುತ್ತಿದೆ.
- ಕದನ ವಿರಾಮ ಅಥವಾ ಶಾಂತಿ ಒಪ್ಪಂದ ಏರ್ಪಟ್ಟರೆ, ಹೆಚ್ಚುವರಿ ಸುಂಕದಿಂದ ಭಾರತಕ್ಕೆ ವಿನಾಯಿತಿ ದೊರೆಯಬಹುದು ಎಂದು 'ಕಾಮರ್ಸ್‌ಬ್ಯಾಂಕ್' ವಿಶ್ಲೇಷಿಸಿದೆ.

Dr. Rajkumar IAS/KAS Academy

- ‘ಮಾತುಕತೆ ಫಲಪ್ರದ ಆಗದಿದ್ದರೆ, ರಷ್ಯಾದಿಂದ ತೈಲ ಖರೀದಿಸುತ್ತಿರುವ ಚೀನಾ ಸೇರಿದಂತೆ ಇತರ ದೇಶಗಳ ಮೇಲೆ ಹೆಚ್ಚುವರಿ ನಿರ್ಬಂಧಗಳನ್ನು ಅಮೆರಿಕ ಹೇರಬಹುದು’ ಎಂದೂ ಅದು ವಿವರಿಸಿದೆ.
- ಚೀನಾಕ್ಕೆ ನ.10ರವರೆಗೆ ವಿನಾಯಿತಿ: ರಷ್ಯಾದಿಂದ ತೈಲ ಖರೀದಿಸುತ್ತಿರುವ ಚೀನಾದ ವಿರುದ್ಧ ಅಧಿಕ ಸುಂಕ ವಿಧಿಸುವ ಕ್ರಮವನ್ನು ತಡೆಹಿಡಿದಿರುವ ಅಮೆರಿಕ, ನವೆಂಬರ್ 10ರವರೆಗೆ ವಿರಾಮ ನೀಡಿದೆ.

## ❖ ದೇಶದ ಕ್ರೀಡಾಕ್ಷೇತ್ರದಲ್ಲಿ ಹೊಸ ಭರವಸೆ

- ರಾಷ್ಟ್ರೀಯ ಕ್ರೀಡಾ ಆಡಳಿತ ಮಸೂದೆಯು ಸಂಸತ್‌ನಲ್ಲಿ ಅಂಗೀಕಾರಗೊಂಡಿತು.
- ಲೋಕಸಭೆಯಲ್ಲಿ ಈ ಮಸೂದೆಯನ್ನು ಅಂಗೀಕರಿಸಿ 24 ಗಂಟೆ ಕಳೆಯುವಷ್ಟರಲ್ಲಿಯೇ ರಾಜ್ಯಸಭೆಯಲ್ಲಿ ಬಹಳಷ್ಟು ಚರ್ಚೆಯ ನಂತರ ಅಂಗೀಕೃತಗೊಂಡಿತು.
- ಇದೇ ಸಂದರ್ಭದಲ್ಲಿ ರಾಷ್ಟ್ರೀಯ ಉದ್ದೀಪನ ಮದ್ದು ಸೇವನೆ ತಡೆ (ತಿದ್ದುಪಡಿ) ಮಸೂದೆಯೂ ಸಂಸತ್ ನಲ್ಲಿ ಅಂಗೀಕಾರಗೊಂಡಿತು. ಇದೀಗ ಈ ಎರಡೂ ಮಸೂದೆಗಳಿಗೂ ರಾಷ್ಟ್ರಪತಿಗಳ ಅಂಕಿತ ಬೀಳಬೇಕಿದೆ. ಅದರ ನಂತರ ಈ ಮಸೂದೆಗಳು ಕಾನೂನು ರೂಪ ಪಡೆಯಲಿವೆ.
- ಸಚಿವ ಮಾಂಡವೀಯ, ‘20 ದೇಶಗಳಲ್ಲಿ ಕ್ರೀಡಾ ಕಾನೂನು ಜಾರಿಯಲ್ಲಿದೆ. ನಾವು ಈ ಕಾನೂನು ಜಾರಿಗೆ ತಂದ 21ನೇ ದೇಶವಾಗುವಂತೆ ಮಾಡುವ ಅವಕಾಶ ರಾಜ್ಯಸಭೆಯ ಕೈಯಲ್ಲಿದೆ’ ಎಂದು ಹೇಳಿದರು.
- ಬಿಜೆಡಿ ಸಂಸದ ಶುಭಾಶಿಶ್ ಖುಂತಿಯ, ‘ಕ್ರೀಡಾ ಆಡಳಿತವನ್ನು ಕೇಂದ್ರಿಕೃತಗೊಳಿಸುವುದು ಅಪಾಯಕಾರಿ. ಈ ಮಸೂದೆಯಲ್ಲಿ ಜಿಲ್ಲೆ ಮತ್ತು ಬ್ಲಾಕ್ ಮಟ್ಟದ ಅಥ್ಲೀಟ್‌ಗಳ ಅಭಿವೃದ್ಧಿಯ ಕುರಿತು ಯಾವುದೇ ಸ್ಪಷ್ಟತೆ ಇಲ್ಲ’ ಎಂದರು.
- ಇದಕ್ಕೆ ಪ್ರತಿಕ್ರಿಯಿಸಿದ ಸಚಿವ ಮಾಂಡವೀಯ, ‘ಕ್ರೀಡಾ ಆಡಳಿತದಲ್ಲಿ ಪಾರದರ್ಶಕತೆ ತರಲು ಈ ಮಸೂದೆಯಿಂದ ಸಾಧ್ಯವಾಗಲಿದೆ. ಸರ್ಕಾರವು ಯಾವುದೇ ನಿಯಂತ್ರಣ ಅಥವಾ ಹಸ್ತಕ್ಷೇಪ ಮಾಡುತ್ತಿಲ್ಲ. ಸರ್ಕಾರವು ಬೆಂಬಲ ನೀಡುವ ಕೆಲಸ ಮಾಡಲಿದೆ ಮತ್ತು ಸೌಲಭ್ಯಗಳನ್ನೂ ನೀಡಲಿದ್ದೇವೆ’ ಎಂದು ಭರವಸೆ ನೀಡಿದರು.
- ಎನ್‌ಸಿಪಿ ನಾಯಕ ಹಾಗೂ ಅಖಿಲ ಭಾರತ ಫುಟ್‌ಬಾಲ್ ಫೆಡರೇಷನ್‌ನ ಮಾಜಿ ಅಧ್ಯಕ್ಷ ಪ್ರಫುಲ್ ಪಟೇಲ್ ಮತ್ತು ಭಾರತ ಒಲಿಂಪಿಕ್ ಸಂಸ್ಥೆ (ಐಒಎ) ಅಧ್ಯಕ್ಷ ಪಿ.ಟಿ. ಉಷಾ ಅವರು ಮಸೂದೆಯ ಬಗ್ಗೆ ಮೆಚ್ಚುಗೆಯ ಮಾತನಾಡಿದ್ದಾರೆ.
- ‘ದೀರ್ಘ ಕಾಲದಿಂದ ಕಾದಿದ್ದ ಮಸೂದೆ ಇದಾಗಿತ್ತು. ಇದು ಈಗಿನ ಅಗತ್ಯವೂ ಆಗಿತ್ತು. ನಮ್ಮಲ್ಲಿ ಈಗಾಗಲೇ ಇದ್ದ ಕ್ರೀಡಾ ನೀತಿಯು ಜಾಳಾಗಿತ್ತು. ಕಾನೂನು ಚೌಕಟ್ಟು ಬಿಗಿಯಾಗಿರಲಿಲ್ಲ. ಆದ್ದರಿಂದ ಈಗ ಅಂಗೀಕಾರವಾಗಿರುವ ಮಸೂದೆ ಮಹತ್ವದ್ದಾಗಿದೆ. 2036ರ ಒಲಿಂಪಿಕ್ ಕೂಟದ ಆತಿಥ್ಯಕ್ಕಾಗಿ ಬಿಡ್ ಸಲ್ಲಿಸಿದ್ದೇವೆ. ನಮಗೆ ಲಭಿಸುವ ಆಶಾಭಾವನೆಯೂ ಇದೆ. ಈ ಸಂದರ್ಭದಲ್ಲಿ ಮಸೂದೆ ಅಂಗೀಕಾರವಾಗಿರುವುದು ಪೂರಕ ವಾಗಿದೆ’ ಎಂದು ಪಟೇಲ್ ಹೇಳಿದರು.
- ‘ಪಾರದರ್ಶಕತೆ, ಉತ್ತರದಾಯಿತ್ವ ಮತ್ತು ಲಿಂಗ ಸಮಾನತೆ ತರಲು ಈ ಮಸೂದೆ ಸಹಕಾರಿಯಾಗಿದೆ. ಅಥ್ಲೀಟ್‌ಗಳನ್ನು ಸಬಲಗೊಳಿಸಿ, ಅವರಲ್ಲಿ ಆತ್ಮವಿಶ್ವಾಸ ಹೆಚ್ಚಿಸಲು ಕೂಡ ನೆರವಾಗಲಿದೆ. ಇದು ನ್ಯಾಯೋಚಿತ ನಡೆಯಾಗಿದೆ’ ಎಂದು ಪಿ.ಟಿ. ಉಷಾ ಹೇಳಿದ್ದಾರೆ.
- ಈ ಸಂದರ್ಭದಲ್ಲಿ ಮಾತನಾಡಿದ ಮಾಂಡವೀಯ, ‘ಸ್ವಾತಂತ್ರ್ಯ ನಂತರ ದೇಶದ ಕ್ರೀಡಾಕ್ಷೇತ್ರದಲ್ಲಿ ಆದ ಏಕೈಕ ಅತಿದೊಡ್ಡ ಸುಧಾರಣೆ ಹೆಜ್ಜೆ ಇದಾಗಿದೆ’ ಎಂದು ಬಣ್ಣಿಸಿದರು.


Dr. Rajkumar IAS/KAS Academy

**ಮಸೂದೆಗೆ ಕ್ರೀಡಾ ಫೆಡರೇಷನ್‌ಗಳಿಂದ ಸ್ವಾಗತ**

- ಕ್ರೀಡಾ ಆಡಳಿತ ಮಸೂದೆಯು ಸಂಸತ್‌ನಲ್ಲಿ ಅಂಗೀಕಾರಗೊಳ್ಳುವ ಮೂಲಕ ಅಮೆರಿಕ, ಇಂಗ್ಲೆಂಡ್, ಚೀನಾ ಮತ್ತು ಜಪಾನ್ ದೇಶಗಳ ಸಾಲಿಗೆ ಭಾರತವೂ ಸೇರಿದೆ. ಇದನ್ನು ದೇಶದ ಹಲವು ಕ್ರೀಡಾ ಫೆಡರೇಷನ್‌ಗಳು (ಎನ್‌ಎಸ್‌ಎಫ್)ಸ್ವಾಗತಿಸಿವೆ.

## ❖ ಗಿಲ್‌ಗೆ ಐಸಿಸಿ ತಿಂಗಳ ಆಟಗಾರ ಪ್ರಶಸ್ತಿ

- ಇಂಗ್ಲೆಂಡ್ ವಿರುದ್ಧ ಇತ್ತೀಚಿನ ಟೆಸ್ಟ್ ಕ್ರಿಕೆಟ್ ಸರಣಿಯಲ್ಲಿ 754 ರನ್ ಕಲೆಹಾಕಿದ ಭಾರತ ತಂಡದ ನಾಯಕ ಶುಭಮನ್ ಗಿಲ್ ಅವರು ಮಂಗಳವಾರ ಐಸಿಸಿಯ 'ತಿಂಗಳ ಆಟಗಾರ' ಪ್ರಶಸ್ತಿಗೆ ಭಾಜನರಾದರು.
- ವಿರಾಟ್ ಕೊಹ್ಲಿ, ರೋಹಿತ್ ಶರ್ಮಾ ಅವರಂಥ ಘಟಾನುಘಟಿ ಆಟಗಾರರಿಲ್ಲದ ಯುವ ತಂಡವನ್ನು ಮೊದಲ ಬಾರಿಗೆ ಮುನ್ನಡೆಸಿದ್ದ ಗಿಲ್ ನಾಯಕನಾಗಿಯೂ, ಆಟಗಾರನಾಗಿಯೂ ಯಶಸ್ಸು ಗಳಿಸಿದ್ದರು. ನಾಲ್ಕು ಶತಕಗಳನ್ನು ಬಾರಿಸಿದ್ದರು. ಅಂತಿಮ ಟೆಸ್ಟ್‌ನಲ್ಲಿ ಸೋಲಿನಿಂದ ಪಾರಾದ ಭಾರತ ಐದು ಪಂದ್ಯಗಳ ಸರಣಿಯನ್ನು 2–2ರಲ್ಲಿ ಸಮಮಾಡಿಕೊಂಡಿತ್ತು.

## ❖ ಕಂದಾಯ ದಾಖಲೆ ದಾರಿ ಸಲೀಸು



### ಕೃಷಿ ಜಮೀನು ಖರೀದಿ: ಅನುಮತಿ ಅಧಿಕಾರ ಜಿಲ್ಲಾಧಿಕಾರಿಗೆ

ಶಿಕ್ಷಣ ಸಂಸ್ಥೆಗಳು, ಸಣ್ಣಸಂಸ್ಥೆಗಳು ಹಾಗೂ ಸಣ್ಣಕೈಗಾರಿಕೆಗಳ ಸ್ಥಾಪನೆಗೆ ಸೆಕ್ಷನ್ 109ರ ಅಡಿ ಕೃಷಿ ಜಮೀನು ಖರೀದಿಸಲು ಅನುಮತಿ ನೀಡುವ ಅಧಿಕಾರವನ್ನು ಜಿಲ್ಲಾಧಿಕಾರಿಗಳಿಗೆ ನೀಡಲಾಗಿದೆ.

ಇನ್ನು ಮುಂದೆ ಜಿಲ್ಲಾಧಿಕಾರಿಗಳೇ 4 ಹೆಕ್ಟೇರ್‌ವರೆಗಿನ ಜಮೀನು ಖರೀದಿಗೆ ಅನುಮತಿ ನೀಡಬಹುದು. ಪ್ರಸ್ತಾವವನ್ನು ಮುಖ್ಯ ಕಾರ್ಯದರ್ಶಿವರೆಗೆ ತರುವ ಅಗತ್ಯವಿಲ್ಲ. ಈ ರೀತಿ ನೀಡುವ ಅನುಮತಿ ಸ್ವಯಂಚಾಲಿತವಾಗಿ ಭೂ–ಪರಿವರ್ತನೆಯಾಗಿರುತ್ತದೆ ಎಂದು ಕಂದಾಯ ಸಚಿವ ಕೃಷ್ಣಬೈರೇಗೌಡ ವಿವರಣೆ ನೀಡಿದರು.

ಇದಕ್ಕಾಗಿ ತರಲಾದ 'ಕರ್ನಾಟಕ ಭೂಸುಧಾರಣೆಗಳು ಮತ್ತು ಕೆಲವು ಇತರ ಕಾನೂನು (ತಿದ್ದುಪಡಿ) ಮಸೂದೆ' ಮಂಡಿಸಿದ ಸಚಿವರು, ಈ ಕುರಿತು ವಿವರ ನೀಡಿದರು.

- ಈ ಹಿಂದೆ ಸಣ್ಣ ಉದ್ದಿಮೆದಾರರು ಅಥವಾ ಶಿಕ್ಷಣ ಸಂಸ್ಥೆಗಳು ಜಮೀನನ್ನು ಯಾವುದೋ ಉದ್ದೇಶಕ್ಕೆ ಪಡೆದು ಬೇರೆ ಯಾವುದೋ ಉದ್ದೇಶಕ್ಕೆ ಬಳಸಿಕೊಳ್ಳಲು ಅನುಮತಿ ಕೇಳುತ್ತಿದ್ದರು. ಅದಕ್ಕೆ ಅವಕಾಶವಿರಲಿಲ್ಲ. ಈಗ ಅದಕ್ಕೆ ಅವಕಾಶ ನೀಡಲಾಗಿದೆ.
- ರಾಜ್ಯ ಯಾವುದೇ ಭಾಗದಲ್ಲಿ 2 ಎಕರೆಯವರೆಗಿನ ಕೃಷಿ ಜಮೀನನ್ನು ಕೈಗಾರಿಕೆ ಉದ್ದೇಶಕ್ಕೆ ಪರಿವರ್ತನೆ ಮಾಡುವುದಕ್ಕೆ ವಿನಾಯಿತಿ ನೀಡಲಾಗುವುದು.
- ಸೌರ ಶಕ್ತಿ, ಪವನ ವಿದ್ಯುತ್ ಘಟಕಗಳನ್ನು ಸ್ಥಾಪಿಸಲು ಕೃಷಿ ಜಮೀನಿನ ಸ್ವಯಂಚಾಲಿತ ಪರಿವರ್ತನೆಗೆ ಅವಕಾಶ ನೀಡಲಾಗಿದೆ. ಈ ಬಗ್ಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಒತ್ತಾಯವೂ ಇತ್ತು. ಬಹಳ ದಿನಗಳ ಚರ್ಚೆಯ ಬಳಿಕ ಕಾನೂನಿನಲ್ಲಿ ಅವಕಾಶ ಮಾಡಿಕೊಡಲಾಗಿದೆ.

- ನೋಂದಣಿ, ಮನೆಗಳ ಅಕ್ರಮ-ಸಕ್ರಮ, ಕೃಷಿ ಸಾಲದ ಋಣಮುಕ್ತ ಪ್ರಮಾಣಪತ್ರ ಸೇರಿದಂತೆ ಕಂದಾಯ ದಾಖಲೆಗಳಿಗಾಗಿ ಸರ್ಕಾರಿ ಕಚೇರಿಗಳ ಬಾಗಿಲಿಂದ ಬಾಗಿಲಿಗೆ ನಾಗರಿಕರು ಅಲೆದಾಡುವುದನ್ನು ತಪ್ಪಿಸುವತ್ತ ಸರ್ಕಾರ ಹೆಜ್ಜೆ ಇಟ್ಟಿದೆ.
- ಸ್ವತ್ತುಗಳ ನೋಂದಣಿ ಪ್ರಕ್ರಿಯೆಯನ್ನು ಸರಳ ಮತ್ತು ಸುಲಲಿತಗೊಳಿಸುವ ಉದ್ದೇಶದಿಂದ 'ಕಂಪ್ಯೂಟರ್ ಡಿಜಿಟಲ್ ಸಹಿ ಕಡ್ಡಾಯ ವ್ಯವಸ್ಥೆ' ರಾಜ್ಯದಲ್ಲಿ ಜಾರಿಗೆ ಬರಲಿದೆ. ಇದರಿಂದ ಮಧ್ಯವರ್ತಿಗಳ ಹಾವಳಿಗೂ ಕಡಿವಾಣ ಬೀಳಲಿದೆ ಎಂದು ಸರ್ಕಾರ ಹೇಳಿದೆ.
- ಈ ಉದ್ದೇಶದಿಂದ ಕಂದಾಯ ಸಚಿವ ಕೃಷ್ಣ ಬೈರೇಗೌಡ ಮಂಡಿಸಿದ **'ನೋಂದಣಿ (ಕರ್ನಾಟಕ ತಿದ್ದುಪಡಿ) ಮಸೂದೆ 2025'ಕ್ಕೆ ವಿಧಾನಸಭೆ ಅನುಮೋದನೆ ನೀಡಿದೆ.**
- 'ಈ ತಿದ್ದುಪಡಿಯ ಮೂಲಕ ಸೆಕ್ಷನ್ 9(ಎ) ಅಡಿ ಕಂಪ್ಯೂಟರ್ ಡಿಜಿಟಲ್ ಸಹಿ ವ್ಯವಸ್ಥೆ ಕಡ್ಡಾಯಗೊಳಿಸಲಾಗಿದೆ. ಅಧಿಕಾರಿಗಳ ಮಧ್ಯಪ್ರವೇಶ ಕಡಿಮೆಗೊಳಿಸಿ, ಸ್ವಯಂಚಾಲಿತವಾಗಿ (ಆಟೋಮ್ಯಾಟಿಕ್) ನೋಂದಣಿ ಪ್ರಕ್ರಿಯೆ ಪೂರ್ಣಗೊಳಿಸುವ ವ್ಯವಸ್ಥೆ ಇದಾಗಿದೆ. ಇನ್ನು ಮುಂದೆ ನೋಂದಣಿ ಪತ್ರಕ್ಕೆ ಉಪನೋಂದಣಾಧಿ ಕಾರಿ ಕೈಬರಹದ ಸಹಿ ಇರುವುದಿಲ್ಲ' ಎಂದು ಮಸೂದೆಯ ಕುರಿತು ವಿವರ ನೀಡಿದ ಕೃಷ್ಣ ಬೈರೇಗೌಡ ಹೇಳಿದರು.

### ಸುಗಮ ಕೆಲಸಕ್ಕೆ ಮಸೂದೆ ದಾರಿ:

- Iಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ), ಕರ್ನಾಟಕ ಗೃಹ ನಿರ್ಮಾಣ ಮಂಡಳಿ (ಕೆಎಚ್‌ಬಿ), ಕರ್ನಾಟಕ ಕೈಗಾರಿಕಾ ಪ್ರದೇಶಾ ಭಿವೃದ್ಧಿ ಮಂಡಳಿ (ಕೆಐಎಡಿಬಿ) ಅಥವಾ ಯಾವುದೇ ಪ್ರಾಧಿಕಾರ ಒಬ್ಬರಿಗೆ ನಿವೇಶನ ಮಂಜೂರು ಮಾಡಿದರೆ ಉಪನೋಂದಣಾ ಧಿಕಾರಿ ಕಚೇರಿಗೆ ಹೋಗುವ ಅಗತ್ಯವಿಲ್ಲ. ಹಂಚಿಕೆದಾರನಿಗೆ ಸ್ವಯಂ ಚಾಲಿತವಾಗಿ ನಿವೇಶನದ ನೋಂದಣಿ ಮಾಡಿಕೊಡಲಾಗುತ್ತದೆ. ಇದು ಡಿಜಿಟಲ್ ಸಹಿ ಹೊಂದಿರುತ್ತದೆ.
- Iಗ್ರಾಮೀಣ ಮತ್ತು ನಗರ ಪ್ರದೇಶದ ಸರ್ಕಾರಿ ಜಾಗದಲ್ಲಿ ಕಟ್ಟಿಕೊಂಡ ಅಕ್ರಮ ಮನೆಗಳನ್ನು ಸಕ್ರಮಗೊಳಿಸುವ 94 ಸಿ, 94 ಸಿ.ಸಿ ಅಡಿ ನೀಡಲಾಗುವ ಹಕ್ಕುಪತ್ರಗಳನ್ನು ನೋಂದಣಿ ಮಾಡಿಕೊಡುವ ಅಧಿಕಾರ ತಹಶೀಲ್ದಾರ್ ಅವರಿಗೆ ನೀಡಲಾಗಿದೆ.
- I ನಮೂನೆ 53 ಹಾಗೂ 57ರ ಅಡಿ ಸಾಗುವಳಿ ಹಕ್ಕು ಪಡೆದ ಮಂಜೂರುದಾರ ಬಗರ್‌ಹುಕುಂ ರೈತರಿಗೆ, ಭೂಮಿ ನೋಂದಣಿ ಮಾಡಿಕೊಡಲು ಇನ್ನು ಮುಂದೆ ಉಪನೋಂದಣಾಧಿಕಾರಿಯ ಅಗತ್ಯವಿಲ್ಲ. ಮಂಜೂರಾತಿಗೆ ಸಂಬಂಧಿಸಿದ ಸೂಕ್ತ ದಾಖಲೆಗಳನ್ನು ತಹಶೀಲ್ದಾರ್ ಅವರು ಡಿಜಿಟಲ್ ಆಗಿ ಅಪ್ ಲೋಡ್ ಮಾಡಿದರೆ ಸ್ವಯಂಚಾಲಿತವಾಗಿ ನೋಂದಣಿ ಆಗುತ್ತದೆ
- I ರೈತರು ತಾವು ಪಡೆದ ಸಾಲ ತೀರಿಸಿದ್ದನ್ನು ಪಹಣಿ ಕಾಲಂನಿಂದ ತೆಗೆಸಲು ಕಚೇರಿಗೆ ಅಲೆಯುವುದು ತಪ್ಪಲಿದ್ದು, ಸ್ವಯಂ ಚಾಲಿತವಾಗಿ ಋಣಮುಕ್ತ ಪ್ರಮಾಣಪತ್ರ ನೀಡಲಾತ್ತದೆ. ಮಧ್ಯವರ್ತಿ ಹಾವಳಿ ತಪ್ಪುತ್ತದೆ
- I ಖಾತೆಯನ್ನು ಕಾಗದದ ಮೂಲಕ ತಂದು ಕೊಟ್ಟರೆ ಅದೂ ನಕಲಿ ಆಗಿರುವ ಸಾಧ್ಯತೆ ಇದೆ. ಈ ಎಲ್ಲ ದಾಖಲೆಗಳೂ ಡಿಜಿಟಲ್ ಆಗಿಯೇ ಬರಬೇಕು. ಸೆಕ್ಷನ್ 32ಕ್ಕೆ ಈ ತಿದ್ದುಪಡಿ ಮಾಡಲಾಗಿದೆ. ದಾಖಲೆಗಳ ಡಿಜಿಟಲ್ ಪರಿಶೀಲನೆ ವೇಳೆ ರೈತರು ಸರ್ಕಾರಿ ಕಚೇರಿಗಳಿಗೆ ಬರುವ ಅಗತ್ಯವಿಲ್ಲ

Dr. Rajkumar IAS/KAS Academy

- l ಇಬ್ಬರು ವ್ಯಕ್ತಿಗಳ ನಡುವಿನ ವೈಯಕ್ತಿಕ ಜಿಪಿಎ (ಜನರಲ್ ಪವರ್ ಆಫ್ ಅಟಾರ್ನಿ) ಆಧಾರದಲ್ಲಿ ನಡೆಯುವ ವ್ಯವಹಾರಗಳಿಗೆ ಮಾತ್ರ ಇಬ್ಬರೂ ಹಾಜರಿರಬೇಕು ಮತ್ತು ಜಿಪಿಎ ಕಡ್ಡಾಯವಾಗಿ ನೋಂದಣಿ ಆಗಬೇಕು
- l 11 ಇ ಸ್ಕೆಚ್ ಅನ್ನು (ಆಸ್ತಿಯ ಗಡಿಗಳು ಮತ್ತು ಇತರ ವಿವರಗಳನ್ನು ಒಳಗೊಂಡಿರುವ ನಕ್ಷೆ) 2011ರಲ್ಲೇ ಕಡ್ಡಾಯ ಮಾಡಿ ಕಾನೂನು ಪರಿಧಿಯೊಳಗೆ ತರಲಾಗಿದೆ

## ❖ ಚೆಕ್ ಸಲ್ಲಿಸಿದ ಗಂಟೆಗಳಲ್ಲಿ ಹಣ ವರ್ಗಾವಣೆ: ಆರ್‌ಬಿಐ

- ಚೆಕ್‌ಗಳನ್ನು ಬ್ಯಾಂಕ್‌ಗೆ ಸಲ್ಲಿಸಿದ ಕೆಲವೇ ತಾಸುಗಳಲ್ಲಿ ಹಣದ ವರ್ಗಾವಣೆ ಆಗುವ ಸೌಲಭ್ಯವನ್ನು ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಅಕ್ಟೋಬರ್ 4ರಿಂದ ಜಾರಿಗೆ ತರಲಿದೆ.
- ಈಗಿರುವ ವ್ಯವಸ್ಥೆಯಲ್ಲಿ ಚೆಕ್ ಸಲ್ಲಿಸಿದ ನಂತರ, ಹಣದ ವರ್ಗಾವಣೆ ಪೂರ್ಣಗೊಳ್ಳಲು ಗರಿಷ್ಠ ಎರಡು ಕೆಲಸದ ದಿನಗಳು ಬೇಕಾಗುತ್ತವೆ.
- ಹೊಸ ವ್ಯವಸ್ಥೆಯು ಜಾರಿಗೆ ಬಂದ ನಂತರದಲ್ಲಿ ಚೆಕ್‌ಗಳನ್ನು ಸ್ಕ್ಯಾನ್ ಮಾಡಿ, ಸಂಬಂಧಪಟ್ಟ ವಿಭಾಗಕ್ಕೆ/ಏಜೆನ್ಸಿಗೆ ಅದನ್ನು ಸಲ್ಲಿಸಿ, ಕೆಲವೇ ಗಂಟೆಗಳಲ್ಲಿ ಹಣದ ವರ್ಗಾವಣೆಗೆ ಅನುಮೋದನೆ ಸಿಗಲಿದೆ.
- ಚೆಕ್ ಸಲ್ಲಿಕೆಯಾದ ನಂತರ ಹಣದ ವರ್ಗಾವಣೆಯನ್ನು ಪೂರ್ಣಗೊಳಿಸುವ ವ್ಯವಸ್ಥೆಯಲ್ಲಿನ ದಕ್ಷತೆಯನ್ನು ಹೆಚ್ಚು ಮಾಡುವ ಉದ್ದೇಶದಿಂದ ಹಾಗೂ ಹಣದ ವರ್ಗಾವಣೆಯಲ್ಲಿನ ಅಪಾಯಗಳನ್ನು ತಗ್ಗಿಸಲು ಆರ್‌ಬಿಐ ಈಗಿನ ಪ್ರಕ್ರಿಯೆಗಳಲ್ಲಿ ಬದಲಾವಣೆ ತರಲಿದೆ. ಚೆಕ್‌ಗಳನ್ನು ಒಂದೊಂದು ಬ್ಯಾಚ್ ನಲ್ಲಿ ಪರಿಶೀಲಿಸುವ ಬದಲು, ಅವುಗಳನ್ನು ನಿರಂತರವಾಗಿ ಪರಿಶೀಲಿಸಿ, ಹಣದ ವರ್ಗಾವಣೆ ಪೂರ್ಣಗೊಳಿಸುವ ವ್ಯವಸ್ಥೆ ಬರಲಿದೆ.
- ಚೆಕ್ ಸ್ವೀಕರಿಸುವ ಬ್ಯಾಂಕ್‌ಗಳು ಅವುಗಳನ್ನು ಸ್ಕ್ಯಾನ್ ಮಾಡಿ ಸಂಬಂಧಪಟ್ಟ ಏಜೆನ್ಸಿಗೆ ತಕ್ಷಣವೇ, ನಿರಂತರವಾಗಿ ರವಾನಿಸುತ್ತವೆ ಎಂದು ಆರ್‌ಬಿಐ ಹೇಳಿದೆ. ವ್ಯವಸ್ಥೆಯಲ್ಲಿ ತರಲಿರುವ ಬದಲಾವಣೆ ಯನ್ನು ಬ್ಯಾಂಕ್‌ಗಳು ತಮ್ಮ ಗ್ರಾಹಕರಿಗೆ ಸಮರ್ಪಕ ವಾಗಿ ತಿಳಿಸಬೇಕು ಎಂದು ಆರ್‌ಬಿಐ ಹೇಳಿದೆ.

## ❖ ಎಸ್‌ಐಆರ್ 'ಮತದಾರ ಸ್ನೇಹಿ' : ಸುಪ್ರೀಂ ಕೋರ್ಟ್

- 'ಬಿಹಾರದಲ್ಲಿ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆಗೆ (ಎಸ್‌ಐಆರ್) ಮತದಾರರು 11 ದಾಖಲೆಗಳ ಪೈಕಿ ಒಂದನ್ನು ಸಲ್ಲಿಸಬೇಕಿದೆ. ಹಿಂದಿನ ಪರಿಷ್ಕರಣೆ ವೇಳೆ ಅದು ಏಳು ದಾಖಲೆಗಳಿಗೆ ಸೀಮಿತವಾಗಿತ್ತು. ಹೀಗಾಗಿ ಎಸ್‌ಐಆರ್ ಪ್ರಕ್ರಿಯೆಯು ಮತದಾರರ ಸ್ನೇಹಿ ಯಂತೆ ಕಾಣುತ್ತಿದೆ' ಎಂದು ಸುಪ್ರೀಂ ಕೋರ್ಟ್ ಅಭಿಪ್ರಾಯಪಟ್ಟಿದೆ.
- ಚುನಾವಣಾ ಆಯೋಗ ಬಿಹಾರದಲ್ಲಿ ನಡೆಸುತ್ತಿರುವ ಎಸ್‌ಐಆರ್ ಪ್ರಕ್ರಿಯೆಯ ವಿರುದ್ಧ ಸಲ್ಲಿಕೆ ಆಗಿರುವ ಅರ್ಜಿಗಳ ವಿಚಾರಣೆಯನ್ನು ನ್ಯಾಯಮೂರ್ತಿಗಳಾದ ಸೂರ್ಯ ಕಾಂತ್ ಮತ್ತು ಜಾಯ್‌ಮಾಲ್ಯ ಬಾಗ್ಚಿ ನಡೆಸಿದರು.
- 'ಈ ಪ್ರಕ್ರಿಯೆಯಿಂದ ಆಧಾರ್ ಅನ್ನು ಹೊರಗಿಟ್ಟಿರುವುದು ಸರಿಯಲ್ಲ' ಎಂದು ಅರ್ಜಿದಾರರು ವಾದಿಸಿದರು. 'ಅದರ ಹೊರತಾಗಿಯೂ ಹೆಚ್ಚಿನ ಸಂಖ್ಯೆಯ ದಾಖಲೆಗಳನ್ನು ಸಲ್ಲಿಸಲು ವಾಸ್ತವವಾಗಿ ಅವಕಾಶಗಳಿವೆಯಲ್ಲ' ಎಂದು ಪೀಠ ಪ್ರಶ್ನಿಸಿತು.
- 'ನಿಮ್ಮ ವಾದ ನಮಗೆ ಅರ್ಥ ಆಗುತ್ತದೆ. ಆದರೆ, ಹಿಂದಿನ ಪರಿಷ್ಕರಣೆ ವೇಳೆ ಕೇವಲ ಏಳು ದಾಖಲೆಗಳನ್ನು ಕೇಳಲಾಗುತ್ತಿತ್ತು. ಈ ಬಾರಿಯ ಎಸ್‌ಐಆರ್‌ನಲ್ಲಿ 11 ದಾಖಲೆಗಳ ಪಟ್ಟಿಯಿದೆ. ಅವುಗಳಲ್ಲಿ ಒಂದನ್ನಷ್ಟೇ ಸಲ್ಲಿಸಬೇಕಾಗಿದೆ.ಹೀಗಾಗಿ ಈ ಪ್ರಕ್ರಿಯೆ ಮತದಾರ ಸ್ನೇಹಿಯಾಗಿ ತೋರುತ್ತಿದೆ' ಎಂದು ಪೀಠ ಹೇಳಿತು.
- ಅರ್ಜಿದಾರರ ಪರ ಹಾಜರದ ಹಿರಿಯ ವಕೀಲ ಅಭಿಷೇಕ್ ಸಿಂಘ್ವಿ, 'ದಾಖಲೆಗಳ ಸಂಖ್ಯೆ ಹೆಚ್ಚಿರಬಹುದು. ಆದರೆ ಅವುಗಳನ್ನು ಹೊಂದಿರುವವರ ಸಂಖ್ಯೆ ಕಡಿಮೆಯಿದೆ' ಎಂದು ವಾದಿಸಿದರು.

Dr Rajkumar IAS/KAS Academy

- ‘ಪಾಸ್‌ಪೋರ್ಟ್ ದಾಖಲೆ ಕುರಿತು ವಿವರಿಸುವುದಾದರೆ, ಬಿಹಾರದಲ್ಲಿ ಕೇವಲ ಶೇಕಡ 1ರಿಂದ ಶೇ 2ರಷ್ಟು ಜನರ ಬಳಿ ಪಾಸ್‌ಪೋರ್ಟ್ ಇದೆ ಮತ್ತು ಅವರಿಗೆ ರಾಜ್ಯದಲ್ಲಿ ಶಾಶ್ವತ ನಿವಾಸಿ ಪ್ರಮಾಣಪತ್ರ ನೀಡಲು ಅವಕಾಶವಿಲ್ಲ’ ಎಂದು ಹೇಳಿದರು. ಆಗ ಪೀಠವು, ‘ಬಿಹಾರದಲ್ಲಿ 36 ಲಕ್ಷ ಪಾಸ್‌ಪೋರ್ಟ್ ಹೊಂದಿರುವವರು ಇದ್ದಾರೆ ಎಂಬುದು ಉತ್ತಮವೇ ಅಲ್ಲವೇ’ ಎಂದಿತು.
- ‘ಹೆಚ್ಚಿನ ಜನರ ಬಳಿ ಲಭ್ಯ ಇರುವ ದಾಖಲೆಗಳನ್ನು ಖಚಿತಪಡಿಸುವ ಕುರಿತು ವಿವಿಧ ಇಲಾಖೆಗಳಿಂದ ಪ್ರತಿಕ್ರಿಯೆಗಳನ್ನು ಪಡೆದ ಬಳಿಕವೇ ಅಲ್ಲವೇ ಸಾಮಾನ್ಯವಾಗಿ ದಾಖಲೆಗಳ ಪಟ್ಟಿಯನ್ನು ಸಿದ್ಧಪಡಿಸುವುದು’ ಎಂದು ನ್ಯಾಯಮೂರ್ತಿ ಬಾಗ್ಚಿ ಗಮನ ಸೆಳೆದರು.
- **ಮತದಾರರ ಪಟ್ಟಿಗೆ ಜನರನ್ನು ಸೇರಿಸುವುದು ಮತ್ತು ಹೊರಗಿಡುವುದು ಚುನಾವಣಾ ಆಯೋಗದ ವ್ಯಾಪ್ತಿಗೆ ಬರುತ್ತದೆ ಎಂದು ಪೀಠ ಮಂಗಳವಾರ ತಿಳಿಸಿತ್ತು**. ಬಿಹಾರದ ಎಸ್‌ಐಆರ್ ನಲ್ಲಿ ಪೌರತ್ವವನ್ನು ದೃಢೀಕರಿಸಲು ಆಧಾರ್ ಕಾರ್ಡ್ ಅನ್ನು ನಿರ್ಣಾಯಕ ದಾಖಲೆಯಾಗಿ ಪರಿಗಣಿಸಲು ಸಾಧ್ಯವಿಲ್ಲ ಎಂಬ ಆಯೋಗದ ನಿಲುವನ್ನೂ ಸುಪ್ರೀಂ ಕೋರ್ಟ್ ಬೆಂಬಲಿಸಿತ್ತು.

## ❖ ಧಾರವಾಡದಲ್ಲಿ ಎಸ್‌ಇಜೆಡ್

- ಧಾರವಾಡದ ಇಟ್ಟಿಗಟ್ಟಿಯಲ್ಲಿ ಎಲೆಕ್ಟ್ರಾನಿಕ್ ಘಟಕಗಳಿಗಾಗಿ ವಿಶೇಷ ಆರ್ಥಿಕ ವಲಯ (ಎಸ್‌ಇಜೆಡ್) ಸ್ಥಾಪನೆಗೆ ಕೇಂದ್ರ ಸರ್ಕಾರ ಗೆಜೆಟ್ ಅಧಿಸೂಚನೆ ಹೊರಡಿಸಿದೆ.
- ಉತ್ತರ ಕರ್ನಾಟಕ ಭಾಗದಲ್ಲಿ ಎಸ್‌ಇಜೆಡ್ ಸ್ಥಾಪಿಸಬೇಕು ಎಂದು ಒತ್ತಾಯಿಸಿ ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಅವರು ಪ್ರಧಾನಿ ನರೇಂದ್ರ ಮೋದಿ ಹಾಗೂ ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವ ಪೀಯೂಷ್ ಗೋಯಲ್ ಅವರಿಗೆ ಮನವಿ ಸಲ್ಲಿಸಿದ್ದರು.

## ❖ ‘ಪಂಪ್ಡ್ ಸ್ಟೋರೇಜ್’ ಗೆ ಆಕ್ಷೇಪ

- ಶರಾವತಿ ಪಂಪ್ಡ್ ಸ್ಟೋರೇಜ್ ಯೋಜನೆಗೆ ಆಕ್ಷೇಪ ವ್ಯಕ್ತಪಡಿಸಿರುವ ಕೇಂದ್ರ ಅರಣ್ಯ ಸಚಿವಾಲಯದ ಅಧೀನದ ಅರಣ್ಯ ಸಲಹಾ ಸಮಿತಿಯು, ಯೋಜನೆಯ ಸಾಧಕ ಬಾಧಕಗಳ ಬಗ್ಗೆ ರಾಜ್ಯ ಸರ್ಕಾರದಿಂದ ವಿವರಣೆ ಕೇಳಿದೆ.
- ಶರಾವತಿ ಅಭಯಾರಣ್ಯದಲ್ಲಿ 2000 ಮೆಗಾವಾಟ್ ವಿದ್ಯುತ್ ಉತ್ಪಾದಿಸುವ ಯೋಜನೆಗೆ ಷರತ್ತುಬದ್ಧ ಅನುಮತಿ ಕೊಟ್ಟಿದ್ದ ರಾಷ್ಟ್ರೀಯ ವನ್ಯಜೀವಿ ಮಂಡಳಿಯ ಸ್ಥಾಯಿ ಸಮಿತಿಯು, ಅರಣ್ಯ ಸಲಹಾ ಸಮಿತಿಯಿಂದಲೂ ಒಪ್ಪಿಗೆ ಪಡೆಯುವಂತೆ ನಿರ್ದೇಶನ ನೀಡಿತ್ತು.
- ಪಂಪ್ಡ್ ಸ್ಟೋರೇಜ್ ಘಟಕ ನಿರ್ಮಾಣಕ್ಕೆ 133.81 ಎಕರೆ ಅರಣ್ಯ ಬಳಕೆ ಮಾಡಲಾಗುತ್ತದೆ ಹಾಗೂ 16,041 ಮರಗಳನ್ನು ಹನನ ಮಾಡಲಾಗುತ್ತದೆ.
- ಯೋಜನೆಯ ಪ್ರಸ್ತಾವದಲ್ಲಿ ಪ್ರಮುಖ ಹಾಗೂ ನಿರ್ಣಾಯಕ ವಿವರಗಳೇ ಇಲ್ಲ ಎಂದು ಅಭಿಪ್ರಾಯಪಟ್ಟಿರುವ ಸಮಿತಿ, ‘ಯೋಜನೆಯ ಒಟ್ಟು ಪರಿಣಾಮ, ಜಲಾನಯನ ಪ್ರದೇಶದಲ್ಲಿ ಅಸ್ತಿತ್ವದಲ್ಲಿರುವ ಮತ್ತು ಮುಂಬರುವ ಜಲವಿದ್ಯುತ್ ಯೋಜನೆಗಳು, ಜಲಾನಯನ ಪ್ರದೇಶದ ಧಾರಣಾ ಶಕ್ತಿ ಸಾಮರ್ಥ್ಯದ ಬಗ್ಗೆ ಪ್ರಸ್ತಾವದಲ್ಲಿ ಬೆಳಕು ಚೆಲ್ಲಿಲ್ಲ. ಹೀಗಾಗಿ, ಕರ್ನಾಟಕ ವಿದ್ಯುತ್ ನಿಗಮವು ಪರಿಸರ ಪರಿಣಾಮ ಮೌಲ್ಯಮಾಪನದ ಭಾಗವಾಗಿ ಈ ಎರಡೂ ಅಧ್ಯಯನಗಳನ್ನು ಕೈಗೆತ್ತಿಕೊಳ್ಳುವುದು ಸೂಕ್ತ’ ಎಂದು ಹೇಳಿದೆ.
- ‘ಕೇಂದ್ರ ಜಲಶಕ್ತಿ ಸಚಿವಾಲಯದ ಅಧೀನದ ನೀರು ಹಾಗೂ ಇಂಧನ ಸಲಹಾ ಸಂಸ್ಥೆಯು ಈ ಹಿಂದೆ ನಡೆಸಿದ ಪರಿಸರ ಪರಿಣಾಮಗಳ ಮೌಲ್ಯಮಾಪನ ವರದಿಯು ಸಮಗ್ರವಾಗಿಲ್ಲ. ಯೋಜನೆಯಿಂದ ಸಸ್ಯ ಸಂಪತ್ತು ಹಾಗೂ ಕಾಡುಪ್ರಾಣಿಗಳ ಮೇಲಾಗುವ ಪರಿಣಾಮದ ಬಗ್ಗೆ ಪ್ರಸ್ತಾಪಿಸಿಲ್ಲ’ ಎಂದು ಸಮಿತಿ ತಿಳಿಸಿದೆ.
- ಇದಲ್ಲದೆ, 12.3 ಕಿ.ಮೀ ಭೂಗತ ರಸ್ತೆ ನಿರ್ಮಿಸುವ ಮೂಲಕ 12,000 ಮರಗಳನ್ನು ಕಡಿಯುವುದನ್ನು ತಪ್ಪಿಸಲು ಪರ್ಯಾಯ ಮಾರ್ಗಗಳನ್ನು ಅನ್ವೇಷಿಸುವಂತೆ ರಾಷ್ಟ್ರೀಯ ವನ್ಯಜೀವಿ ಮಂಡಳಿ ನೀಡಿರುವ ಸೂಚನೆಯನ್ನು ಪಾಲಿಸುವಂತೆ ರಾಜ್ಯ ಸರ್ಕಾರಕ್ಕೆ ಸಮಿತಿ ಸೂಚಿಸಿದೆ.

Dr. Rajkumar IAS/KAS Academy

‘ಅರಣ್ಯ ಕಾಯ್ದೆಯ ಉಲ್ಲಂಘನೆ’

- ಅರಣ್ಯ ನಾಶಕ್ಕೆ ಕಾರಣವಾಗುವ ಈ ಯೋಜನೆಗೆ ಒಪ್ಪಿಗೆ ಕೊಡಬಾರದು ಎಂದು ಅರಣ್ಯ ಸಚಿವಾಲಯದ ಪ್ರಾದೇಶಿಕ ಕಚೇರಿಯ ಉಪ ಅರಣ್ಯ ಮಹಾನಿರ್ದೇಶಕರ (ಡಿಐಜಿಎಫ್) ಸ್ಥಳ ಪರಿಶೀಲನಾ ವರದಿಯಲ್ಲಿ ಶಿಫಾರಸು ಮಾಡಲಾಗಿತ್ತು. ಈ ವರದಿಯಲ್ಲಿನ ಅಂಶಗಳನ್ನು ಉಲ್ಲೇಖಿಸಿರುವ ಸಮಿತಿಯು, ಗೇರುಸೊಪ್ಪದಿಂದ ತಳಕೊಪ್ಪಕ್ಕೆ ನಿರ್ಮಿಸಲಾಗಿರುವ ವಿದ್ಯುತ್ ಪ್ರಸರಣಾ ಮಾರ್ಗವು 1980ರ ಅರಣ್ಯ ಕಾಯ್ದೆಯ ಉಲ್ಲಂಘನೆ ಎಂದು ಬೊಟ್ಟು ಮಾಡಿದೆ.

## ❖ ಚಂದ್ರನಲ್ಲಿ ಪರಮಾಣು ಪೈಪೋಟಿ

- ದಿಲ್ಲಿಯಲ್ಲಿ ಎಂಜಿನಿಯರಿಂಗ್ ಪದವಿ ಪಡೆದು ಹೆಚ್ಚಿನ ಓದಿಗೆಂದು ಅಮೆರಿಕಕ್ಕೆ ಹೋದ ಯುವತಿ **ಭವ್ಯಾ ಲಾಲ್ ಅಮೆರಿಕದ ‘ನಾಸಾ’ ಬಾಹ್ಯಾಕಾಶ ಸಂಸ್ಥೆ**ಯಲ್ಲಿ ತುಂಬ ಎತ್ತರದ ಹುದ್ದೆಗೆ ಏರಿದವರು. ಹಿಂದಿನ ಅಧ್ಯಕ್ಷ ಜೋ ಬೈಡನ್ ಅವರಿಗೆ ಬಾಹ್ಯಾಕಾಶ ವಿಷಯದಲ್ಲಿ ಸರ್ವೋನ್ನತ ಸಲಹೆಗಾರ್ತಿ, ಅಂದರೆ ‘ಚೀಫ್ ಆಫ್ ಸ್ಟಾಫ್’ ಆಗಿದ್ದರು.
- ಚಂದ್ರನ ನೆಲದ ಮೇಲೆ ನಾವೇನು ಮಹತ್ವದ್ದನ್ನು ಸಾಧಿಸಬಹುದು ಎಂಬ ಬಗ್ಗೆ ಈಕೆ ಸಲ್ಲಿಸಿದ ವರದಿಗೆ ಕಳೆದ ವರ್ಷ ಭಾರೀ ಮಹತ್ವ ಬಂತು. ಆ ವರದಿಯಲ್ಲಿ ಅವರು **‘ಗೋ ಬಿಗ್ ಆರ್ ಗೋ ಹೋಮ್’ (ಭಾರೀ ಗುರಿ ಹೂಡಿ, ಇಲ್ಲವೇ ಮನೆಯಲ್ಲೇ ಮುದುಡಿ ಕೂತಿರಿ)** ಎಂಬ ವಾಕ್ಯವನ್ನೂ ಸೇರಿಸಿದ್ದರು. ಅದು ಚಕಮಕಿಯಂತೆ ಕೆಲಸ ಮಾಡಿದ್ದರಿಂದಲೇ ಅಮೆರಿಕ ಮೈಕೊಡವಿ ಎದ್ದಿದೆ. **ಚಂದ್ರನ ನೆಲದಲ್ಲಿ 2030ರ ಹೊತ್ತಿಗೆ ಪರಮಾಣು ಸ್ಥಾವರ ಹೂಡುವುದಾಗಿ ಇದೀಗ ಘೋಷಿಸಿದೆ.**
- ಮನುಷ್ಯ ಜೀವಿ ಈ ಹಿಂದೆ ಚಂದ್ರನ ಮೇಲೆ ಇಳಿದು ಮೂರು ದಿನದ ವಾಸ್ತವ್ಯ ಹೂಡಿ ಮರಳಿ ಬಂದಿದ್ದು 53 ವರ್ಷಗಳ ಹಿಂದೆ. **ಅಮೆರಿಕದ 12 ಗಗನಯಾತ್ರಿಗಳು 1969ರಿಂದ 72ರವರೆಗೆ** ಅಲ್ಲಿಗೆ ಹೋಗಿ ಬಂದಿದ್ದು ಬಿಟ್ಟರೆ ನಂತರ ಯಾರೂ ಹೋಗಿಲ್ಲ.
- ಈಗ **ಚೀನಾ, ರಷ್ಯಾ, ಜಪಾನ್ ಅಷ್ಟೇಕೆ, ಭಾರತ** ಕೂಡ ಅಲ್ಲಿ ತಂತಮ್ಮ ಪ್ರಜೆಗಳನ್ನು ಇಳಿಸಲು ಯೋಜನೆ ಹಾಕಿಕೊಂಡಿದ್ದರಿಂದ ಅಮೆರಿಕಕ್ಕೆ ತಾನು ಹಿಂದೆ ಬಿದ್ದೇನೆಂಬ ಭಾವನೆ ಬಂದಿದೆ.
- ಈ ಮೊದಲು ಸೋವಿಯತ್ ರಷ್ಯಾಕ್ಕೆ ಪೈಪೋಟಿ ಕೊಡಲೆಂದು ಅದು **‘ಅಪೊಲೊ ಮಿಷನ್’** ಹೂಡಿದ ಹಾಗೆ ಈಗ ಹೊಸದಾಗಿ **‘ಆರ್ಟೆಮಿಸ್ ಮಿಷನ್’** ಹೆಸರಿನಲ್ಲಿ ಮತ್ತೆ ಚಂದ್ರನತ್ತ ಹೊರಡಲು ತೋಳೇರಿಸಿದೆ. (ಆರ್ಟೆಮಿಸ್ ಎಂಬುದು ಗ್ರೀಕ್ ಪುರಾಣದಲ್ಲಿ ಬರುವ ಚಂದ್ರದೇವಿಯ ಹೆಸರು). **ಈ ಯೋಜನೆಯ ಪ್ರಕಾರ ಚಂದ್ರನ ಮೇಲೆ ಒಬ್ಬ ಮಹಿಳೆಯನ್ನೂ ಮತ್ತೊಬ್ಬ ಶ್ವೇತೇತರ ವ್ಯಕ್ತಿಯನ್ನೂ ಇಳಿಸಬೇಕು; ಅಲ್ಲೊಂದು ನೆಲೆಯನ್ನು ಸ್ಥಾಪಿಸಿ, ಅಲ್ಲಿಂದ ಮಂಗಳ ಮತ್ತು ಅದರಾಚಿನ ಲೋಕಕ್ಕೆ ಮಾನವರನ್ನು ಕಳಿಸುವ ಸಿದ್ಧತೆ ನಡೆಸಬೇಕು ಎಂಬೆಲ್ಲ ದೂರಗಾಮೀ ನೀಲನಕ್ಷೆಗಳನ್ನು ರೂಪಿಸಲಾಗಿದೆ.**
- ಚಂದ್ರನ ಮೇಲೆ ನೆಲೆಯೂರುವುದು ಇಡೀ ಮಾನವ ಸಂಕುಲದ ಯೋಜನೆ ಆಗಬೇಕಿತ್ತು. ಆದರೆ, ಹಿಂದೆ ಅಂಟಾರ್ಕ್ಟಿಕಾ ಖಂಡವನ್ನು ಆಕ್ರಮಿಸಿಕೊಳ್ಳಲೆಂದು ನಾನಾ ದೇಶಗಳು ಪೈಪೋಟಿ ನಡೆಸಿದ ಹಾಗೆ ಈಗ ಚಂದ್ರನ ನೆಲವೂ ಪ್ರತಿಷ್ಠೆಯ ಕಣವಾಗುತ್ತಿದೆ. ಆಗಲೇ ಚೀನಾ ಮತ್ತು ರಷ್ಯಾ ದೇಶಗಳು ಅಲ್ಲಿ ಮನೆ ಕಟ್ಟುವ ಸಿದ್ಧತೆ ಮಾಡಿಕೊಳ್ಳುತ್ತಿವೆ.
- ತಿಂಗಳುಗಟ್ಟಲೆ ವಾಸ್ತವ್ಯ ಹೂಡಬೇಕೆಂದರೆ ಅಲ್ಲಿ ಮೊದಲು ಶಕ್ತಿ ಸ್ಥಾವರವೊಂದನ್ನು ಹೂಡಲೇಬೇಕು. ಶಕ್ತಿ ಇದ್ದರೆ ತಾನೆ ಗಾಳಿ, ನೀರು, ಇಟ್ಟಿಗೆ, ಪೆಟ್ಟಿಗೆಗಳನ್ನು ಉತ್ಪಾದಿಸಲು ಸಾಧ್ಯ? ಅಲ್ಲಿ ಕಲ್ಲಿದ್ದಲು ಇಲ್ಲ, ಪೆಟ್ರೋಲು ಇಲ್ಲ, ನೈಸರ್ಗಿಕ ಅನಿಲವಿಲ್ಲ; ನದಿ-ಕೆರೆಗಳಿಲ್ಲ, ಗಾಳಿ ಇಲ್ಲ. ಚಂದ್ರಗರ್ಭದಲ್ಲಿ ಶಾಖವಿಲ್ಲ, ಸೂರ್ಯನ ಬೆಳಕೂ ಸಾಕಷ್ಟಿಲ್ಲ. ಹಾಗಾಗಿ, ವಿದ್ಯುತ್ ಶಕ್ತಿಯ ಉತ್ಪಾದನೆಗೆ ಪರಮಾಣು ಸ್ಥಾವರವೇ ಆಗಬೇಕು. ಅದರಲ್ಲಿ ಒಂದೆರಡು ಕಿಲೊ ಯುರೇನಿಯಂ ಇಂಧನವನ್ನು ತುಂಬಿಟ್ಟರೆ ಅದು ತನ್ನಷ್ಟಕ್ಕೆ ದಶಕಗಳ ಕಾಲ ಉರಿಯುತ್ತಿರುತ್ತದೆ. ಅದಕ್ಕೇ ರಷ್ಯಾ ಮತ್ತು ಚೀನಾ 2035ರ ವೇಳೆಗೆ ತಾವು ಜಂಟಿಯಾಗಿ ಅಲ್ಲೊಂದು ಪರಮಾಣು ಸ್ಥಾವರವನ್ನು ಕಟ್ಟಿ ನಿಲ್ಲಿಸುತ್ತೇವೆಂದು ಘೋಷಣೆ ಮಾಡಿವೆ. ಆ ಸಾಧನೆಯನ್ನು

Dr Rajkumar IAS/KAS Academy

ಹಿಮ್ಮೆಟ್ಟಿಸಬೇಕೆಂದೇ ಅಮೆರಿಕ ತಾನು 2030ರೊಳಗೇ ಅಂಥ ಶಕ್ತಿ ಸ್ಥಾವರವನ್ನು ಹೂಡುವುದಾಗಿ ಘೋಷಿಸಿದೆ.

- ಅಮೆರಿಕ ಟೊಂಕ ಕಟ್ಟಿತೆಂದರೆ ಅದು ಇಡೀ ಮನುಕುಲಕ್ಕೆ ಕಟ್ಟೆಚ್ಚರದ ವಿದ್ಯಮಾನವೂ ಆದೀತು; ದಿಟ್ಟಹೆಜ್ಜೆಯೂ ಆದೀತು. ಎರಡನೆಯ ಮಹಾಯುದ್ಧದ ಕಾಲದಲ್ಲಿ ಜರ್ಮನಿ ಪರಮಾಣು ಬಾಂಬ್ ತಯಾರಿಸಲು ಹೊರಟಿದೆ ಎಂಬುದು ಗೊತ್ತಾದಾಗ ಅಮೆರಿಕ 'ಮ್ಯಾನಹಟ್ಟನ್ ಯೋಜನೆ' ಯ ಹೆಸರಿನಲ್ಲಿ ತನ್ನ ವ್ಯಾಪ್ತಿಯಲ್ಲಿರುವ ಎಲ್ಲ ಪ್ರತಿಭಾವಂತ ವಿಜ್ಞಾನಿಗಳನ್ನೂ ಮಿಲಿಟರಿ ತಜ್ಞರನ್ನೂ ಒಂದೆಡೆ ಸೇರಿಸಿ ಮೂರೇ ವರ್ಷಗಳಲ್ಲಿ ಅಸಾಧ್ಯವನ್ನೂ ಸಾಧಿಸಿತು. ಹಿರೊಶಿಮಾ, ನಾಗಾಸಾಕಿ ನಗರಗಳ ಮುಗ್ಧರ ಮೇಲೆ ಬಾಂಬ್ ಹಾಕಿ ಜಪಾನ್, ಜರ್ಮನಿ ದೇಶಗಳನ್ನು ಶಾಶ್ವತವಾಗಿ ಹಿಮ್ಮೆಟ್ಟಿಸಿತು. ಅದೇ ನೆಪದಲ್ಲಿ ನಂತರ ಹತ್ತಾರು ದೇಶಗಳು ತಮ್ಮ ಉಡಿಯಲ್ಲಿ ಈ ಪ್ರಳಯಾಂತಕ ಅಸ್ತ್ರವನ್ನು ಇಟ್ಟುಕೊಳ್ಳುವಂತಾಯಿತು.
- **1957ರಲ್ಲಿ ರಷ್ಯನ್ನರು ಭೂಮಿಯ ಸುತ್ತ ಪ್ರದಕ್ಷಿಣೆ ಹಾಕುವಂತೆ 'ಸ್ಪುತ್ನಿಕ್' ಹೆಸರಿನ ಬಾಹ್ಯಾಕಾಶ ಡಬ್ಬಿಯನ್ನು ಉಡಾಯಿಸಿದಾಗ ಅಮೆರಿಕ ಮತ್ತೆ ಧಿಗ್ಗನೆದ್ದು ಬಾಹ್ಯಾಕಾಶ ಸಂಚಾರಕ್ಕೆಂದೇ 'ನಾಸಾ' ಸಂಸ್ಥೆಯನ್ನು ಆರಂಭಿಸಿ ಚಂದ್ರನ ಮೇಲೂ ಕಾಲೂರಿತು**. ಸೋವಿಯೆತ್ ರಷ್ಯಾವನ್ನು ಹಿಂದಿಕ್ಕಿ ಮುನ್ನುಗ್ಗಿತು. ಅಮೆರಿಕ ಆಗಿಟ್ಟ ಆ ದಿಟ್ಟ ಹೆಜ್ಜೆಯಲ್ಲಿ ಆರೇಳು ದೇಶಗಳು ಸಾಗುವಂತಾಯಿತು.

ಈಗಿನ ಈ ಚಂದ್ರನ ಮೇಲಿನ ಪರಮಾಣು ಸ್ಥಾವರ ಪೈಪೋಟಿ ದಿಟ್ಟವೊ ದುಷ್ಟವೊ? ಉತ್ತರ ಹುಡುಕಲು ಹೊರಟರೆ ಅನೇಕ ಸ್ವಾರಸ್ಯಗಳು ಹೊರಬರುತ್ತವೆ.

- ಇದುವರೆಗೆ ಪರಮಾಣು ವಿದ್ಯುತ್ ಕ್ಷೇತ್ರದಲ್ಲಿ ದೊಡ್ಡ, ಇನ್ನೂ ದೊಡ್ಡ ಸ್ಥಾವರಗಳನ್ನು ನಿರ್ಮಿಸುವ ಪೈಪೋಟಿ ಇತ್ತು. ಈಗ ಅದಕ್ಕೆ ವಿರುದ್ಧವಾಗಿ, ಚಿಕ್ಕ, ಇನ್ನೂ ಚಿಕ್ಕ ಸ್ಥಾವರದ ನಿರ್ಮಾಣವಾಗಬೇಕು. ಕಳಚಿ ಅದನ್ನು ಎಲ್ಲೆಂದರಲ್ಲಿ ಹೊತ್ತೊಯ್ಯುವಂತಿರಬೇಕು.
- **ಚೀನಾ, ರಷ್ಯಾ ದೇಶಗಳು ಇಂಥ 'ಸ್ಮಾಲ್ ಮಾಡ್ಯೂಲರ್ ರಿಯಾಕ್ಟರ್' ಗಳ (ಎಸ್ಎಂಆರ್)** ನಿರ್ಮಾಣದಲ್ಲಿ ಮುಂದಿವೆ.
- **ರಷ್ಯಾ ಐದು ವರ್ಷಗಳ ಹಿಂದೆ ಉತ್ತರ ಧ್ರುವ ಸಮೀಪದ ಘೋರ ಚಳಿಯ ಪಟ್ಟಣದ ಬಳಿಯ ಹಿಮನದಿಯ ಮೇಲೆ 'ಜಗತ್ತಿನ ಏಕೈಕ ತೇಲುಸ್ಥಾವರ'** ಎಂಬ ಹೆಗ್ಗಳಿಕೆಯೊಂದಿಗೆ ಒಂದು ಪರಮಾಣು ವಿದ್ಯುತ್ ಘಟಕವನ್ನು ಸ್ಥಾಪಿಸಿ, ವಿದ್ಯುತ್ ಉತ್ಪಾದನೆ ಮಾಡುತ್ತಿದೆ.
- ಇತ್ತ ಚೀನಾ ಕೂಡ ನಾಲ್ಕು ವರ್ಷಗಳ ಹಿಂದೆಯೇ ಎಸ್ಸೆಮ್ಮಾರ್ ನಿರ್ಮಾಣದಲ್ಲಿ ಪರಿಣತಿ ಸಾಧಿಸಿದೆ. ದೇಶ- ವಿದೇಶಗಳಲ್ಲಿ ಮಾರಲೆಂದೇ ಅದು ಲಿಂಗ್ಲಾಂಗ್ ಯೋಜನೆಯಲ್ಲಿ ಹೊಸ ಮಾದರಿಗಳನ್ನು ನಿರ್ಮಿಸುತ್ತಿದೆ.
- ಅಮೆರಿಕದ ಸಾಧನೆ ಇದುವರೆಗೆ ಸೊನ್ನೆ. ಒಂದು ಎಸ್ಸೆಮ್ಮಾರ್ ನಿರ್ಮಿಸಲು ಹೋಗಿ ವೆಚ್ಚ ತೀರಾ ಜಾಸ್ತಿ ಆಯಿತೆಂದು ಎರಡು ವರ್ಷಗಳ ಹಿಂದೆ ಕೈಬಿಡಲಾಗಿದೆ.
- ಈಗ ಅಮೆಜಾನ್ ಮತ್ತು ಮೈಕ್ರೊಸಾಫ್ಟ್ ಕಂಪನಿಗಳು ಪುಟ್ಟ ಘಟಕಗಳನ್ನು ನಿರ್ಮಿಸುತ್ತಿರುವುದಾಗಿ ಹೇಳಿವೆ.
- ಇನ್ನೇನು ಧಿಗ್ಗನೆದ್ದು ದೊಡ್ಡಣ್ಣ ತೋಳೇರಿಸಿತೆಂದರೆ ಅದೇ ಮಾದರಿಯ ಪುಟ್ಟ ಸ್ಥಾವರಗಳ ನಿರ್ಮಾಣಕ್ಕೆ ವಿವಿಧ ದೇಶಗಳಲ್ಲಿ ದೊಡ್ಡ ಪೈಪೋಟಿ ನಡೆಯಲಿದೆ. ಅವುಗಳ ನಿರ್ಮಾಣಕ್ಕೆ ಎರಡೇ ವರ್ಷ ಸಾಕು. ಕಾರ್ಬನ್ ಹೊಗೆ ಇಲ್ಲ; ಸಣ್ಣ ಪಟ್ಟಣಗಳಿಗೆ, ಕಾರ್ಖಾನೆಗಳ ಸಂಕೀರ್ಣಕ್ಕೆ ವಿದ್ಯುತ್ ಬೇಕಿದ್ದರೂ ಎಲ್ಲೆಂದರಲ್ಲಿ ಇದನ್ನು ಸ್ಥಾಪಿಸಬಹುದು ಎಂದೆಲ್ಲ ಹೊಗಳುತ್ತ ಖಾಸಗಿ ಕಂಪನಿಗಳು ನಮ್ಮಲ್ಲೂ ಅಂಥವನ್ನು ಸ್ಥಾಪಿಸುತ್ತ ಹೋದರೆ ಮುಂದಿನದನ್ನು ನಾವು ಊಹಿಸಿಕೊಳ್ಳಬಹುದು.
- ಈಗೇನೋ ಕೈಗಾ, ಕಕ್ರಪಾರಾ, ಕಲ್ಪಾಕ್ಕಮ್, ಕೂಡಂಕುಲಂನ ದೊಡ್ಡ ಸ್ಥಾವರಗಳಲ್ಲಿ ಬಿಗಿ ಭದ್ರತೆ ಇದೆ. ಅಲ್ಲಿ ಹೊಮ್ಮುವ ಅಪಾಯಕಾರಿ ವಿಕಿರಣ ತ್ಯಾಜ್ಯಗಳನ್ನು ಮತ್ತು ಶಿಥಿಲ ಬಿಡಿಭಾಗಗಳನ್ನು ಅಲ್ಲಲ್ಲೇ ಇಟ್ಟಿರುತ್ತಾರೆ. ಅಲ್ಲಿ ಭಯೋತ್ಪಾದಕರು ಅಥವಾ ವೈರಿ ದೇಶಗಳು ಶೆಲ್ ದಾಳಿ ನಡೆಸದಂತೆ ರಡಾರ್ ಕಣ್ಗಾವಲು ಇದೆ. ಹೂಳಿಟ್ಟ ತ್ಯಾಜ್ಯಗಳ ಮೇಲೆ ಸಮಾಧಿ ಕಟ್ಟಿದರೂ ಅದನ್ನು ಲಕ್ಷಗಟ್ಟಲೆ ವರ್ಷ

ಕಾಯಬೇಕಾಗುತ್ತದೆ. ಯಾವ ಬಗೆಯ ಕಾಂಕ್ರೀಟಿನಲ್ಲಿ ಸಮಾಧಿ ಮಾಡುತ್ತಾರೊ, ಯಾವ ಭಾಷೆಯಲ್ಲಿ ಎಚ್ಚರಿಕೆ ಫಲಕ ಹಾಕುತ್ತಾರೊ ಯಾರಿಗೂ ಗೊತ್ತಿಲ್ಲ. ಯಾವುದೂ ಹತ್ತು ಸಾವಿರ ವರ್ಷಗಳವರೆಗೆ ಸ್ಥಿರವಾಗಿ ನಿಂತಿದ್ದು ನಮಗಂತೂ ಗೊತ್ತಿಲ್ಲ.

- ಪರಮಾಣು ತ್ಯಾಜ್ಯಗಳ ಪ್ರಶ್ನೆ ಬಂದಾಗ ಅಲ್ಲಿ ದೊಡ್ಡದು ಚಿಕ್ಕದು ಎಂಬ ವ್ಯತ್ಯಾಸ ಇರುವುದಿಲ್ಲ. **ಭೂಮಿಯ ಮೇಲೆ ಈಗ 2500 ಮೆಗಾವಾಟ್ ವಿದ್ಯುತ್ ಹೊಮ್ಮಿಸಬಲ್ಲ ಬೃಹತ್ ಸ್ಥಾವರಗಳಿವೆ. ಚಂದ್ರನ ಮೇಲೆ, ಅದರ ದಕ್ಷಿಣ ಧ್ರುವದ ಅರೆಗತ್ತಲಲ್ಲಿ ಸ್ಥಾಪಿಸಲೆಂದು ಅಮೆರಿಕ ಬರೀ 100 ಕಿಲೊವಾಟ್ (ಸಾವಿರ ಕಿಲೊವಾಟ್ ಅಂದರೆ ಒಂದು ಮೆಗಾವಾಟ್) ಸಾಮರ್ಥ್ಯದ ಚಿಕ್ಕ ಘಟಕವನ್ನು ಒಯ್ಯಲಿದೆಯಂತೆ**. ನಮ್ಮೂರಲ್ಲಾದರೆ ಅದು ನೂರು ಮನೆಗಳ ಪುಟ್ಟ ಹಳ್ಳಿಗೆ ಸಾಲುವಷ್ಟು ವಿದ್ಯುತ್ ಶಕ್ತಿಯನ್ನು ನೀಡುತ್ತದೆ.
- ಪುಟ್ಟ ಪರಮಾಣು ಸ್ಥಾವರಗಳು ಎಲ್ಲೆಂದರಲ್ಲಿ ಕೂತರೆ ಮುಂದಿನ ಪೀಳಿಗೆಗೆ ದೊಡ್ಡ ಪ್ರಶ್ನೆಗಳೇ ಎದುರಾಗಬಹುದು. ಪರಮಾಣು ಎಂದರೆ ಪ್ಲಾಸ್ಟಿಕ್ ಅಲ್ಲ. ಅತೀವ ಜಾಗೃತಿ, ಕಟ್ಟುನಿಟ್ಟಿನ ಶಿಸ್ತು, ಅಸ್ಖಲಿತ ಸಾಮಾಜಿಕ ಬದ್ಧತೆ ಎಲ್ಲವೂ ಇರಬೇಕಾಗುತ್ತದೆ. ನಮ್ಮಲ್ಲಿ ಅವೆಲ್ಲಿ? 1982ರಲ್ಲಿ ವಿಕ್ಟೋರಿಯಾ ಆಸ್ಪತ್ರೆಯ ಎಕ್ಸರೇ ಯಂತ್ರದಲ್ಲಿದ್ದ ಮುಷ್ಟಿಗಾತ್ರದ ಸೀಸಿಯಂ ಡಬ್ಬಿ ಕಳೆದು ಹೋಗಿದ್ದರಿಂದ ಭಾರೀ ರಂಪಾಟವಾಗಿತ್ತು. 1993ರಲ್ಲಿ ಮದ್ರಾಸಿನ ಕೂವಂ ನದಿಗೆ ಅಂಥದ್ದೇ ಕಿರು ಡಬ್ಬಿಯನ್ನು ಬಿಸಾಕಲಾಗಿತ್ತು. ಹಾಹಾಕಾರ ಎದ್ದು ಪರಮಾಣು ತಜ್ಞರು ದೇಶದ ವಿವಿಧ ಭಾಗಗಳಿಂದ ಧಾವಿಸಿ ಬಂದು ಕೆಸರಿನ ಕೂಪದಲ್ಲಿ ಮೂರು ದಿನ ತಡಕಾಡಿ ತೆಗೆಯಬೇಕಾಯಿತು.
- ಚಂದ್ರನ ನೆಲದಲ್ಲಿ ಹಾಗಾಗುವುದಿಲ್ಲ ಬಿಡಿ. ಅಲ್ಲಿ ನೀರೂ ಇಲ್ಲ, ಗಾಳಿಯೂ ಇಲ್ಲ, ಜನರೂ ದೀರ್ಘಕಾಲ ಇರುವಂತಿಲ್ಲ. ಹೋದ ಕೆಲವರೂ ಪರಮಾಣು ಸಾಧನಗಳನ್ನು ಕಂಡಲ್ಲಿ ಬಿಸಾಕುವಷ್ಟು ಅಶಿಸ್ತಿನ ಜನ ಆಗಿರುವುದಿಲ್ಲ. ಆದರೆ, ಚಂದ್ರನಿಗೆಂದು ರೂಪಿಸಿದ ಮಾದರಿಗಳು ನಾಳೆ ಚಂದ್ರಾ ಲೇಔಟಿಗೂ ಬಂದರೆ?

## ❖ ಪಿತೃತ್ವದ ಹಕ್ಕು: ಹೊಸ ಭರವಸೆ

- ಕಣ್ಣೆದುರಿಗೆ ಇದ್ದರೂ ಇವರೇ 'ಅಪ್ಪ' ಎಂದು ಕರೆಯಲಾಗದ ಸ್ಥಿತಿ ಮಕ್ಕಳದು. ಇವನೇ ನನ್ನ ಸಂಗಾತಿ, ಗಂಡ ಎಂದು ಎಲ್ಲರೆದುರೂ ಧೈರ್ಯವಾಗಿ ಹೇಳಲಾಗದ ಸಂಕಟ ಅಮ್ಮನದು. ಕತ್ತಲಿನಲ್ಲಿ ಜೊತೆಗಿರುವ ಆತ, ಬೆಳಗ್ಗೆ ಅವಳು ಅಪರಿಚಿತಳೇನೋ ಎಂಬಂತೆ ವರ್ತಿಸುತ್ತಾನೆ. ಇದು ದೇವದಾಸಿಯರ ಕುಟುಂಬದಲ್ಲಿ ಸಾಮಾನ್ಯ ಎನ್ನುವಂತಿರುವ ಸಂಕಟ, ಒಳಗುದಿ.
- **ಇತ್ತೀಚೆಗೆ ರಾಜ್ಯ ಸರ್ಕಾರ, 'ಕರ್ನಾಟಕ ದೇವದಾಸಿ ಪದ್ಧತಿ ತಡೆ ಮಸೂದೆ-2025'** ರೂಪಿಸುವ ಮೂಲಕ ದೇವದಾಸಿಯರ ಮಕ್ಕಳ ನೋವಿಗೆ ಮುಲಾಮು ಹಚ್ಚುವ ಪ್ರಯತ್ನಕ್ಕೆ ಮುಂದಾಗಿದೆ.
- ನೂತನ ಮಸೂದೆಯು ದೇವದಾಸಿಯರನ್ನು ಲೈಂಗಿಕವಾಗಿ ಬಳಸಿಕೊಂಡು ಅವರ ಮಕ್ಕಳಿಗೆ ಪಿತೃತ್ವದ ಹಕ್ಕು, ಮಮತೆ ನೀಡಲು ಹಿಂದೇಟು ಹಾಕುತ್ತಿದ್ದ ಪುರುಷರಿಗೆ ಚಾಟಿ ಬೀಸುವಂತಿದೆ. ಅಷ್ಟೇ ಅಲ್ಲ, ದೇವದಾಸಿ ಪದ್ಧತಿಯನ್ನು ತಡೆಗಟ್ಟುವಲ್ಲಿ ಮಹತ್ವದ ಪಾತ್ರವನ್ನೂ ವಹಿಸಲಿದೆ.
- ಈ ಹಿಂದೆ ಧಾರ್ಮಿಕ ಕಟ್ಟುಪಾಡೋ, ಸಾಮಾಜಿಕ ನೆಲೆಯೋ, ಜಾತಿ ವ್ಯವಸ್ಥೆಯ ಭಾಗವಾಗಿಯೋ ದೇವದಾಸಿ ಎನ್ನುವ ಅನಿಷ್ಟ ಪದ್ಧತಿಗೆ ಪ್ರೋತ್ಸಾಹ ಕೊಡುತ್ತಿದ್ದವರಿಗೆ ಮಸೂದೆ ನೇರವಾಗಿಯೇ ಕಡಿವಾಣ ಹಾಕಲಿದೆ.
- ಶೇ 99ರಷ್ಟು ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ಹೆಣ್ಣುಮಕ್ಕಳೇ ಇಂಥ ಅನಿಷ್ಟ ಪದ್ಧತಿಗೆ ಬಲಿಯಾಗಿ, ಘನತೆ ಮತ್ತು ಗೌರವದಿಂದ ಬಾಳಲಾಗದ ಸ್ಥಿತಿಯಲ್ಲಿದ್ದಾರೆ. ಅಂಥ ನತದೃಷ್ಟ ಮಹಿಳೆಯರ ಬದುಕನ್ನು ಸುಧಾರಿಸುವ ನಿಟ್ಟಿನಲ್ಲಿ ಮಸೂದೆ ಪರಿಣಾಮ ಬೀರಬಲ್ಲದು.

- ಹೊಸ ಮಸೂದೆಯು **'ಡಿಎನ್ಎ ಪರೀಕ್ಷೆ'** ಮೂಲಕ ಪಿತೃತ್ವದ ಹಕ್ಕನ್ನು ಪ್ರತಿಪಾದಿಸಲು ನೆರವಾಗಬಲ್ಲದು ಎಂಬುದೇನೋ ನಿಜ. ಆದರೆ, ಬಲವಂತವಾಗಿ ಇಂಥ ಪರೀಕ್ಷೆ ಮಾಡಿಸಿ, ಆ ಮಕ್ಕಳು ಕೌಟುಂಬಿಕ ಚೌಕಟ್ಟಿನ ನೆಲೆಯಲ್ಲಿ ದೊರಕಬಹುದಾದ ಅಪ್ಪನ ಪ್ರೀತಿಯನ್ನು ಪಡೆಯಲು ಸಾಧ್ಯವೇ ಎಂಬ ಪ್ರಶ್ನೆಯನ್ನೂ ನಾವು ಗಮನಿಸಬೇಕು. ಅಷ್ಟಕ್ಕೂ ಗಂಡಸೊಬ್ಬ ತನಗೆ ಹುಟ್ಟಿದ ಮಕ್ಕಳನ್ನು ತನ್ನವು ಎಂದು ಹೇಳಿಕೊಳ್ಳಲು ಇಂಥ ಪರೀಕ್ಷೆಗಳ ಅವಶ್ಯಕತೆ ಇಲ್ಲ. ಕಣ್ಣರಿಯದಿದ್ದರೂ, ಕರುಳರಿಯಲಾರದೇ?
- ಶಾಲಾ- ಕಾಲೇಜು ದಾಖಲಾತಿ, ಪಾಸ್‌ಪೋರ್ಟಿನ ಅರ್ಜಿಗಳಲ್ಲಿ, ಉದ್ಯೋಗ ಮತ್ತಿತರ ದಾಖಲಾತಿಗಳಲ್ಲಿ ಅಪ್ಪನ ಹೆಸರು ನಮೂದಿಸಿದ ಮಾತ್ರಕ್ಕೆ ದೇವದಾಸಿಯರ ಮಕ್ಕಳಿಗೆ ಹೆತ್ತಪ್ಪನ ನಿಜದ ನೆಲೆಯ ಪ್ರೀತಿ, ಮಮತೆ ದೊರೆಯಲು ಸಾಧ್ಯವೇ? ಒಬ್ಬರಿಗಿಂತ ಹೆಚ್ಚು ಸಂಗಾತಿಗಳ ಒಡನಾಟ ಹೊಂದಿದ ದೇವದಾಸಿ, ದೇಹಕ್ಕಿಂತಲೂ ಮಾನಸಿಕವಾಗಿ ಹತ್ತಿರವಾದ ಸಂಗಾತಿಯನ್ನೇ ತನ್ನ ಮಕ್ಕಳಿಗೆ ತಂದೆ ಎಂದು ಪರಿಚಯಿಸಿರುವ ಸಾಧ್ಯತೆ ಇರುವಾಗ, ಜೈವಿಕ ಕಾರಣಕ್ಕಾಗಿ ನೀಡಲಾಗುವ ಪಿತೃತ್ವದ ಹಕ್ಕು ತಾಕಲಾಟಕ್ಕೆ ಕಾರಣವಾಗಲಾರದೇ? ಒಬ್ಬ ದೇವದಾಸಿಗೆ ಇಬ್ಬರು ಸಂಗಾತಿಗಳೊಂದಿಗೆ ಸಾಂಗತ್ಯವಿದ್ದು, ಆ ಇಬ್ಬರಿಗೂ ಬೇರೆ ಬೇರೆ ಮಕ್ಕಳು ಹುಟ್ಟಿದಲ್ಲಿ, ಆ ಮಕ್ಕಳು ಪಿತೃತ್ವದ ಹಕ್ಕು ಪಡೆಯುವಾಗ ಎದುರಿಸುವ ಮಾನಸಿಕ ತಳಮಳಗಳಿಗೆ ಸಮಾಧಾನ ತಂದುಕೊಳ್ಳುವುದು ಹೇಗೆ? ಅಷ್ಟಕ್ಕೂ ತಂದೆಯ ಹೆಸರನ್ನು ಪ್ರತಿಪಾದಿಸುವುದು ಪಿತೃಪ್ರಧಾನ ವ್ಯವಸ್ಥೆಯ ಭಾಗವಾಗಿ, ಲಿಂಗ ತಾರತಮ್ಯದ ಮುಂದುವರಿಕೆ ಅನಿಸುವುದಿಲ್ಲವೇ ಎಂಬ ಪ್ರಶ್ನೆಯೂ ಮೂಡುತ್ತದೆ.
- ಪ್ರಶ್ನೆಗಳ ನಡುವೆಯೂ, ನೂತನ ಮಸೂದೆಯಿಂದಾಗಿ, ಕನಿಷ್ಠ ತಂದೆಯ ಹೆಸರು ಮತ್ತು ಮಕ್ಕಳಿಗೆ ಕಾನೂನು ರೀತ್ಯ ಒದಗಿಬರುವ ಜೀವನಾಂಶ ಹಾಗೂ ಆಸ್ತಿ ಹಕ್ಕಿಗಾದರೂ ಪಿತೃತ್ವದ ಹಕ್ಕು ನೆರವಾಗಬಲ್ಲದೆಂಬ ನಿರೀಕ್ಷೆ ಇದೆ.
- ಪಿತೃತ್ವದ ಹಕ್ಕಿನ ಜತೆಗೇ ಮಸೂದೆಯು ದೇವದಾಸಿ ಪದ್ಧತಿಯನ್ನು ಪ್ರೋತ್ಸಾಹಿಸುವವರಿಗೆ ಜಾಮೀನುರಹಿತ ಅಪರಾಧ ಎಂಬ ಶಿಕ್ಷೆಯನ್ನು ವಿಧಿಸುವ ಅವಕಾಶ ಮಾಡಿಕೊಡುವಂತೆ ಇದ್ದಿದ್ದರೆ ಮಸೂದೆ ಮತ್ತಷ್ಟು ಪರಿಣಾಮಕಾರಿ ಹಾಗೂ ಪ್ರಬಲವಾಗುವ ಸಾಧ್ಯತೆ ಇತ್ತು. ದೇವದಾಸಿಯರ ಮಕ್ಕಳನ್ನು ಶೈಕ್ಷಣಿಕ, ಔದ್ಯೋಗಿಕ ಮತ್ತು ಸಾಮಾಜಿಕತೆಯ ಮೂಲಕ ಮುಖ್ಯವಾಹಿನಿಗೆ ತರುವ ನಿಟ್ಟಿನಲ್ಲಿ ಶಿಕ್ಷಣ ಮತ್ತು ಉದ್ಯೋಗದಲ್ಲಿ ಮೀಸಲಾತಿ ನೀಡುವಂಥ ಸಾಧ್ಯತೆಗಳನ್ನೂ ಮಸೂದೆ ಒಳಗೊಂಡಿದ್ದರೆ ಹೆಚ್ಚು ಅರ್ಥಪೂರ್ಣ ಆಗುತ್ತಿತ್ತು.

# ನ್ಯಾಯಮೂರ್ತಿಗಳ ವಜಾ ಹಲವು ಹಂತಗಳ ಸಂಕೀರ್ಣ ಪ್ರಕ್ರಿಯೆ

ಅಲಹಾಬಾದ್ ಹೈಕೋರ್ಟ್‌ನ ನ್ಯಾಯಮೂರ್ತಿ ಯಶವಂತ ವರ್ಮಾ ಅವರ ಮನೆಯಲ್ಲಿ ನಗದು ಪತ್ತೆಯಾದ ಪ್ರಕರಣಕ್ಕೆ ಸಂಬಂಧಿಸಿದಂತೆ ಅವರನ್ನು ಪದಚ್ಯುತಿಗೊಳಿಸುವ ಪ್ರಕ್ರಿಯೆ ಆರಂಭವಾಗಿದೆ. ಹೈಕೋರ್ಟ್ ಮತ್ತು ಸುಪ್ರೀಂ ಕೋರ್ಟ್‌ನ ನ್ಯಾಯಮೂರ್ತಿಗಳ ವಜಾ ಪ್ರಕ್ರಿಯೆ ಬಹು ಹಂತಗಳಿಂದ ಕೂಡಿದ್ದು, ಸಂಕೀರ್ಣವಾಗಿದೆ. ಸಂಸತ್ತಿನ ಉಭಯ ಸದನಗಳಲ್ಲಿ ವಿಶೇಷ ಬಹುಮತದೊಂದಿಗೆ ಗೊತ್ತುವಳಿ ಅಂಗೀಕಾರವಾದರೆ ಮಾತ್ರ ನ್ಯಾಯಮೂರ್ತಿಗಳನ್ನು ವಜಾ ಮಾಡಲು ಅವಕಾಶವಿದೆ. ಇದುವರೆಗೆ ನ್ಯಾಯಮೂರ್ತಿಗಳನ್ನು ಪದಚ್ಯುತಗೊಳಿಸುವ ಏಳು ಪ್ರಯತ್ನಗಳು ನಡೆದಿವೆ. ಆದರೆ, ಒಮ್ಮೆಯೂ ಯಶಸ್ವಿಯಾಗಿಲ್ಲ



## ಮತ್ತೊಬ್ಬ ನ್ಯಾಯಮೂರ್ತಿ ವಿರುದ್ಧ ನೋಟಿಸ್

ನ್ಯಾಯಮೂರ್ತಿ ಯಶವಂತ ವರ್ಮಾ ಅವರ ಪದಚ್ಯುತಿಗೆ ಸಂಬಂಧಿಸಿದಂತೆ ಲೋಕಸಭೆಯಲ್ಲಿ ಪ್ರಕ್ರಿಯೆ ಆರಂಭವಾಗಿರುವಂತೆಯೇ ಕೋಮು ಪ್ರಚೋದಿತ ಭಾಷಣ ಮಾಡಿದ್ದಾರೆ ಎಂದು ಆರೋಪಿಸಿ ಅಲಹಾಬಾದ್ ಹೈಕೋರ್ಟ್‌ನ ಮತ್ತೊಬ್ಬ ನ್ಯಾಯಮೂರ್ತಿ ಶೇಖರ್ ಯಾದವ್ ಅವರ ಪದಚ್ಯುತಿಗೆ ಒತ್ತಾಯಿಸಿ ವಿರೋಧ ಪಕ್ಷಗಳ ಸದಸ್ಯರು ರಾಜ್ಯಸಭೆಯಲ್ಲಿ ಗೊತ್ತುವಳಿ ನೋಟಿಸ್ ನೀಡಿದ್ದಾರೆ. ಈ ಬಗ್ಗೆ ಸಭಾಪತಿಯವರು ಇನ್ನಷ್ಟೇ ನಿರ್ಧಾರ ಕೈಗೊಳ್ಳಬೇಕಾಗಿದೆ.

ಪ್ರಜಾವಾಣಿ ವಾರ್ತೆ

ಹೈಕೋರ್ಟ್ ಅಥವಾ ಸುಪ್ರೀಂ ಕೋರ್ಟ್‌ನ ನ್ಯಾಯಮೂರ್ತಿಯನ್ನು ಹುದ್ದೆಯಿಂದ ಪದಚ್ಯುತಗೊಳಿಸಲು, ಅವರ ದುರ್ನಡತೆ ಅಥವಾ ಅಸಮರ್ಥತೆ ಸಾಬೀತಾಗಬೇಕು. ಸುಪ್ರೀಂ ಕೋರ್ಟ್ ನ್ಯಾಯಮೂರ್ತಿಯನ್ನು ವಜಾಗೊಳಿಸುವ ಸಂಬಂಧದ ನಿಯಮಗಳು ಸಂವಿಧಾನದ 124(4)ನೇ ವಿಧಿಯಲ್ಲಿ ಮತ್ತು ಹೈಕೋರ್ಟ್‌ಗಳ ನ್ಯಾಯಮೂರ್ತಿಯನ್ನು ಪದಚ್ಯುತಗೊಳಿಸುವ ಬಗೆಗಿನ ನಿಯಮಗಳು ಸಂವಿಧಾನದ 218ನೇ ವಿಧಿಯಲ್ಲಿ ಅಡಕವಾಗಿವೆ.

ನಿಯಮಗಳ ಪ್ರಕಾರ, ಸಂಸತ್‌ನ ಎರಡೂ ಸದನಗಳಲ್ಲಿ ಅಂಗೀಕರಿಸಿರುವ ನಿರ್ಣಯವನ್ನು ಆಧರಿಸಿ ರಾಷ್ಟ್ರಪತಿಯವರು ನ್ಯಾಯಮೂರ್ತಿಯನ್ನು ಹುದ್ದೆಯಿಂದ ವಜಾ ಮಾಡುವ ಅಧಿಕಾರ ಹೊಂದಿರುತ್ತಾರೆ. ಈ ಪ್ರಕ್ರಿಯೆಯನ್ನು 'ನ್ಯಾಯಮೂರ್ತಿಗಳ (ತನಿಖಾ) ಕಾಯ್ದೆ–1968'ರಲ್ಲಿ ವಿವರಿಸಲಾಗಿದೆ. ನ್ಯಾಯಮೂರ್ತಿಯ ಪದಚ್ಯುತಿಯು ಹಲವು ಹಂತಗಳಲ್ಲಿ ನಡೆಯುವ ಸಂಕೀರ್ಣ ಪ್ರಕ್ರಿಯೆಯಾಗಿದೆ.

**ಆಂತರಿಕ ತನಿಖೆ:** ಅತ್ಯುನ್ನತ ನ್ಯಾಯಾಲಯಗಳ ನ್ಯಾಯಮೂರ್ತಿ ವಿರುದ್ಧ ಆರೋಪ ಕೇಳಿಬಂದರೆ, ಮೊದಲು ಆಂತರಿಕ ತನಿಖೆ ಮಾಡಲಾಗುತ್ತದೆ. 1999ರಲ್ಲಿ ಸುಪ್ರೀಂ ಕೋರ್ಟ್ ಆಂತರಿಕ ತನಿಖೆಗೆ ಮಾರ್ಗಸೂಚಿಗಳನ್ನು ಪ್ರಕಟಿಸಿತ್ತು.

ಒಂದು ವೇಳೆ ನ್ಯಾಯಮೂರ್ತಿ ವಿರುದ್ಧದ ಆರೋಪಗಳು ಸತ್ಯ ಎಂದು ಆಂತರಿಕ ಸಮಿತಿಯ ತನಿಖೆಯಲ್ಲಿ ಕಂಡುಬಂದು, ಅವು ಗಂಭೀರ ಸ್ವರೂಪದವಲ್ಲದಿದ್ದರೆ, ಮುಖ್ಯ ನ್ಯಾಯಮೂರ್ತಿಯು ಆರೋಪಿ ನ್ಯಾಯಮೂರ್ತಿಯೊಂದಿಗೆ ಚರ್ಚೆ ಮಾಡಲು ಅವಕಾಶವಿದೆ. ಆರೋಪಗಳು ಸುಳ್ಳು ಎನ್ನುವುದು ಕಂಡುಬಂದರೆ, ಆ ವಿಷಯ ಅಲ್ಲಿಗೆ ಮುಕ್ತಾಯವಾಗುತ್ತದೆ.

ಆಂತರಿಕ ಸಮಿತಿಯ ತನಿಖೆಯಲ್ಲಿ ಆರೋಪಗಳು ಸತ್ಯ ಎನ್ನುವುದು ಕಂಡುಬಂದರೆ, ಮುಖ್ಯ ನ್ಯಾಯಮೂರ್ತಿಯು ತಪ್ಪಿತಸ್ಥ ನ್ಯಾಯಮೂರ್ತಿಯ ರಾಜೀನಾಮೆ ಕೇಳಬಹುದು. ಆ ನ್ಯಾಯಮೂರ್ತಿ ರಾಜೀನಾಮೆ ನೀಡಲು ನಿರಾಕರಿಸಿದರೆ, ಅವರನ್ನು ಸಂಸದೀಯ ಪ್ರಕ್ರಿಯೆ ಮೂಲಕ ವಜಾ ಮಾಡಲು ಪ್ರಧಾನಿ ಮತ್ತು ರಾಷ್ಟ್ರಪತಿಗೆ ಮುಖ್ಯ ನ್ಯಾಯಮೂರ್ತಿಯು ಮನವಿ ಸಲ್ಲಿಸಬಹುದು.

**ಸಂಸದೀಯ ಪ್ರಕ್ರಿಯೆ:** ಸಂಸತ್ತಿನ ಯಾವುದಾದರೂ ಸದನದಲ್ಲಿ ಪದಚ್ಯುತಿ ಪ್ರಕ್ರಿಯೆ ಆರಂಭಿಸಬಹುದು. ಈ ಸಂಬಂಧದ ಗೊತ್ತುವಳಿಯನ್ನು ಲೋಕಸಭೆಯಲ್ಲಿ ಮಂಡಿಸಿದರೆ, ಕನಿಷ್ಠ 100 ಮಂದಿ ಸದಸ್ಯರು, ರಾಜ್ಯಸಭೆಯಲ್ಲಿ ಮಂಡಿಸಿದರೆ ಕನಿಷ್ಠ 50 ಸದಸ್ಯರ ಸಹಿಯ ಅಗತ್ಯವಿರುತ್ತದೆ. ಲೋಕಸಭೆಯ ಸ್ಪೀಕರ್/ರಾಜ್ಯಸಭೆಯ ಸಭಾಪತಿ ಗೊತ್ತುವಳಿಯನ್ನು ಅಂಗೀಕರಿಸಬಹುದು ಇಲ್ಲವೇ ತಿರಸ್ಕರಿಸಬಹುದು. ಗೊತ್ತುವಳಿಯನ್ನು ಅಂಗೀಕರಿಸಿದರೆ, ನ್ಯಾಯಮೂರ್ತಿ ವಿರುದ್ಧದ ಆರೋಪಗಳನ್ನು ತನಿಖೆ ಮಾಡಲು ಮೂವರು ಸದಸ್ಯರ ಸಮಿತಿಯನ್ನು ನೇಮಿಸಲಾಗುತ್ತದೆ. ಅದರಲ್ಲಿ ಸುಪ್ರೀಂ ಕೋರ್ಟ್ ನ್ಯಾಯಮೂರ್ತಿ, ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ ಮತ್ತು ಒಬ್ಬ ಕಾನೂನು ತಜ್ಞ ಇರುತ್ತಾರೆ.

ನ್ಯಾಯಮೂರ್ತಿ ತಪ್ಪಿತಸ್ಥರಲ್ಲ ಎಂದು ಸಮಿತಿ ವರದಿ ನೀಡಿದರೆ, ಪ್ರಕ್ರಿಯೆಯು ಅಲ್ಲಿಗೇ ಅಂತ್ಯವಾಗುತ್ತದೆ. ನ್ಯಾಯಮೂರ್ತಿಯು ಅಪರಾಧಿ ಎಂದು ಸಮಿತಿ ಹೇಳಿದರೆ, ಲೋಕಸಭೆ ಮತ್ತು ರಾಜ್ಯಸಭೆಯಲ್ಲಿ ಅದರ ಬಗ್ಗೆ ಚರ್ಚೆ ಮತ್ತು ಮತ ಚಲಾವಣೆ ನಡೆಯುತ್ತದೆ. ಆ ಸಂದರ್ಭದಲ್ಲಿ ಸದನದಲ್ಲಿ ವಾದ ಮಂಡಿಸಲು ಆರೋಪಿ ಅಥವಾ ಅವರ ವಕೀಲರಿಗೆ ಅವಕಾಶ ನೀಡಲಾಗುತ್ತದೆ. ಮತದಾನದ ವೇಳೆ ಸದನದ ಒಟ್ಟು ಬಲಾಬಲದಲ್ಲಿ ಶೇ 50ರಷ್ಟು ಹಾಜರಿರಬೇಕು ಮತ್ತು ಹಾಜರಿರುವವರ ಪೈಕಿ ಮೂರನೇ ಎರಡರಷ್ಟು ಸದಸ್ಯರು ಗೊತ್ತುವಳಿಯ ಪರವಾಗಿ ಮತ ಚಲಾವಣೆ ಮಾಡಬೇಕು.

ಮತ್ತೊಂದು ಸದನದಲ್ಲಿಯೂ ಇದೇ ಪುನರಾವರ್ತನೆ ಆಗುತ್ತದೆ. ಎರಡೂ ಸದನಗಳಲ್ಲಿ ಗೊತ್ತುವಳಿಯು ಅಂಗೀಕಾರವಾದರೆ, ನ್ಯಾಯಮೂರ್ತಿಯನ್ನು ವಜಾಗೊಳಿಸುವ ಸಂಸತ್ತಿನ ನಿರ್ಣಯವನ್ನು ರಾಷ್ಟ್ರಪತಿಗೆ ತಿಳಿಸಲಾಗುತ್ತದೆ. ರಾಷ್ಟ್ರಪತಿ ವಜಾ ಆದೇಶ ಹೊರಡಿಸುತ್ತಾರೆ.

## ಏಳು ಯತ್ನಗಳೂ ವಿಫಲ

**ದೇಶದ ಸಂಸತ್ತಿನ ಇತಿಹಾಸದಲ್ಲಿ ಇದುವರೆಗೆ ಏಳು ಮಂದಿ ಹೈಕೋರ್ಟ್ ಅಥವಾ ಸುಪ್ರೀಂ ಕೋರ್ಟ್‌ನ ನ್ಯಾಯಮೂರ್ತಿಗಳನ್ನು ಪದಚ್ಯುತಿಗೊಳಿಸುವ ಯತ್ನ ನಡೆದಿತ್ತು. ಆದರೆ, ಎಲ್ಲವೂ ಒಂದಿಲ್ಲೊಂದು ಕಾರಣಕ್ಕೆ ವಿಫಲವಾಗಿದ್ದವು**

1. **ನ್ಯಾ. ವಿ.ರಾಮಸ್ವಾಮಿ:** ಪಂಜಾಬ್ ಮತ್ತು ಹರಿಯಾಣ ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿಯಾಗಿದ್ದ ವಿ.ರಾಮಸ್ವಾಮಿ ಅವರನ್ನು 1993ರಲ್ಲಿ ವಜಾ ಮಾಡಲು ಯತ್ನಿಸಿದ್ದು ದೇಶದ ಮೊದಲ ಪ್ರಕರಣ. ಅವರು 1990ರಲ್ಲಿ ಮುಖ್ಯ ನ್ಯಾಯಮೂರ್ತಿಯಾಗಿದ್ದಾಗ ಅಧಿಕೃತ ನಿವಾಸಕ್ಕಾಗಿ ಅನಗತ್ಯ ವೆಚ್ಚ ಮಾಡಿ ಹಣ ದುರ್ಬಳಕೆ ಮಾಡಿದ್ದಾರೆ ಎಂದು ಆರೋಪಿಸಲಾಗಿತ್ತು. ಈ ಬಗ್ಗೆ ತನಿಖೆ ನಡೆಸುವುದಕ್ಕಾಗಿ ರಚಿಸಿದ್ದ ಸಮಿತಿಯು ರಾಮಸ್ವಾಮಿ ಅವರು ತಪ್ಪಿತಸ್ಥ ಎಂದು ಹೇಳಿತ್ತು. ಆದರೆ, ಗೊತ್ತುವಳಿಯನ್ನು ಲೋಕಸಭೆಯಲ್ಲಿ ಮಂಡಿಸಿದಾಗ ಆಗಿನ ಆಡಳಿತಾರೂಢ ಕಾಂಗ್ರೆಸ್ ಸಂಸದರು ಮತದಾನದಿಂದ ಹಿಂದೆ ಸರಿದಿದ್ದರು. ಇದರಿಂದಾಗಿ ಮೂರನೇ ಎರಡರಷ್ಟು ಬಹುಮತ ಇಲ್ಲದೆ ಗೊತ್ತುವಳಿ ಸೂಚನೆ ಅಂಗೀಕಾರವಾಗಿರಲಿಲ್ಲ. ಹಾಗಾಗಿ, ರಾಮಸ್ವಾಮಿಯವರ ಪದಚ್ಯುತಿ ಸಾಧ್ಯವಾಗಿರಲಿಲ್ಲ.
2. **ನ್ಯಾ. ಸೌಮಿತ್ರ ಸೇನ್:** 2011ರಲ್ಲಿ ಕಲ್ಕತ್ತಾ ಹೈಕೋರ್ಟ್‌ನ ನ್ಯಾಯಮೂರ್ತಿಯಾಗಿದ್ದ ಸೌಮಿತ್ರ ಸೇನ್ ಅವರ ವಿರುದ್ಧ ರಾಜ್ಯಸಭೆಯಲ್ಲಿ ಪದಚ್ಯುತಿ ಗೊತ್ತುವಳಿ ಸೂಚನೆಯನ್ನು ಅಂಗೀಕರಿಸಲಾಗಿತ್ತು. ಸೇನ್ ಅವರು ವಕೀಲರಾಗಿದ್ದಾಗ ಪ್ರಕರಣವೊಂದರಲ್ಲಿ ನ್ಯಾಯಾಲಯವು ಅವರನ್ನು ರಿಸೀವರ್ ಆಗಿ ನೇಮಿಸಿತ್ತು. ಆಗ ಅವರ ವಿರುದ್ಧ ₹33.23 ಲಕ್ಷ ಹಣವನ್ನು ದುರ್ಬಳಕೆ ಮಾಡಿದ ಆರೋಪ ಕೇಳಿಬಂದಿತ್ತು. ತನಿಖಾ ಸಮಿತಿಯು ಅವರನ್ನು ತಪ್ಪಿತಸ್ಥ ಎಂದು ಹೇಳಿತ್ತು. ಮೇಲ್ಮನೆಯಲ್ಲಿ ಗೊತ್ತುವಳಿ ಅಂಗೀಕಾರಗೊಂಡು, ಅದನ್ನು ಚರ್ಚೆಗೆ ಕೈಗೆತ್ತಿಕೊಳ್ಳುವುದಕ್ಕೂ ಮುನ್ನ ಸೇನ್ ಅವರು ನ್ಯಾಯಮೂರ್ತಿ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರು. ಹೀಗೆ ಪದಚ್ಯುತಿಯಿಂದ ಅವರು ತಪ್ಪಿಸಿಕೊಂಡಿದ್ದರು.
3. **ನ್ಯಾ. ಪಿ.ಡಿ.ದಿನಕರನ್:** ಭೂಕಬಳಿಕೆ, ಭ್ರಷ್ಟಾಚಾರ ನಡೆಸಿರುವ ಆರೋಪ ಹೊತ್ತಿದ್ದ ಸಿಕ್ಕಿಂ ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿಯಾಗಿದ್ದ ಪಿ.ಡಿ.ದಿನಕರನ್ ವಿರುದ್ಧ ರಾಜ್ಯಸಭೆಯಲ್ಲಿ 2011ರಲ್ಲಿ ಪದಚ್ಯುತಿ ನೋಟಿಸ್ ನೀಡಲಾಗಿತ್ತು. ಅಂದಿನ ಸಭಾಪತಿ ಅವರು ತನಿಖೆಗೆ ಸಮಿತಿಯನ್ನೂ ರಚಿಸಿದ್ದರು. ಆದರೆ, ಪದಚ್ಯುತಿ ಪ್ರಕ್ರಿಯೆ ಆರಂಭವಾಗುವುದಕ್ಕೂ ಮೊದಲೇ, ಆ ವರ್ಷದ ಜುಲೈನಲ್ಲಿ ಅವರು ತಮ್ಮ ಹುದ್ದೆಗೆ ರಾಜೀನಾಮೆ ನೀಡಿದ್ದರು.
4. **ನ್ಯಾ. ಜೆ.ಬಿ.ಪಾರ್ದೀವಾಲಾ:** ಹಾಲಿ ಸುಪ್ರೀಂ ಕೋರ್ಟ್ ನ್ಯಾಯಮೂರ್ತಿ ಜೆ.ಬಿ.ಪಾರ್ದೀವಾಲಾ ಅವರು 2015ರಲ್ಲಿ ಗುಜರಾತ್‌ನ ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿಯಾಗಿದ್ದಾಗ, ಪ್ರಕರಣವೊಂದರ ತೀರ್ಪಿನಲ್ಲಿ ಮೀಸಲಾತಿಗೆ ಸಂಬಂಧಿಸಿದಂತೆ ವ್ಯಕ್ತಪಡಿಸಿದ ಅಭಿಪ್ರಾಯ (ಭಾರತ ಅಭಿವೃದ್ಧಿ ಹೊಂದದೇ ಇರಲು ಮೀಸಲಾತಿ ವ್ಯವಸ್ಥೆ ಕಾರಣ ಎಂಬರ್ಥದಲ್ಲಿ ಹೇಳಿದ್ದರು) ವಿವಾದ ಸೃಷ್ಟಿಸಿತ್ತು. ಈ ಹೇಳಿಕೆಯನ್ನು ಖಂಡಿಸಿ ರಾಜ್ಯಸಭೆಯಲ್ಲಿ ಅವರ ವಿರುದ್ಧ ಪದಚ್ಯುತಿ ನೋಟಿಸ್ ನೀಡಲಾಗಿತ್ತು. ನಂತರ ಪಾರ್ದೀವಾಲಾ ಅವರು ತೀರ್ಪಿನಿಂದ ಆ ಅಭಿಪ್ರಾಯವನ್ನು ತೆಗೆದುಹಾಕಿದ್ದರಿಂದ ಅವರ ವಿರುದ್ಧದ ಪದಚ್ಯುತಿ ಗೊತ್ತುವಳಿ ನೋಟಿಸ್ ಕೈಬಿಡಲಾಗಿತ್ತು.
5. **ನ್ಯಾ. ಎಸ್.ಕೆ.ಗಂಗೆಲೆ:** 2015ರಲ್ಲಿ ಮಧ್ಯಪ್ರದೇಶ ಹೈಕೋರ್ಟ್‌ನ ನ್ಯಾಯಮೂರ್ತಿಯಾಗಿದ್ದ ಎಸ್.ಕೆ.ಗಂಗೆಲೆ ಅವರ ಪದಚ್ಯುತಿಗಾಗಿ ರಾಜ್ಯಸಭೆಯಲ್ಲಿ ಗೊತ್ತುವಳಿ ಸೂಚನೆ ನೀಡಲಾಗಿತ್ತು. ಗಂಗೆಲೆ ಅವರು ತಮ್ಮೊಂದಿಗೆ ಲೈಂಗಿಕ ದುರ್ನಡತೆ ತೋರಿದ್ದಾರೆ ಎಂದು ಜಿಲ್ಲಾ ಮಟ್ಟದ ಮಹಿಳಾ ನ್ಯಾಯಾಧೀಶರೊಬ್ಬರು ಆರೋಪಿಸಿದ್ದರು. 58 ಸಂಸದರ ಸಹಿ ಇದ್ದ ಸೂಚನೆಯನ್ನು ಆಗಿನ ಸಭಾಪತಿ ಹಮೀದ್ ಅನ್ಸಾರಿ ಅಂಗೀಕರಿಸಿದ್ದರು. ಪ್ರಕರಣದ ತನಿಖೆಗಾಗಿ ಸಮಿತಿಯನ್ನೂ ರಚಿಸಲಾಗಿತ್ತು. ಆದರೆ, ಸಮಿತಿಯು ಅವರು ತಪ್ಪು ಮಾಡಿಲ್ಲ ಎಂದು ಹೇಳಿದ್ದರಿಂದ ಸಂಸತ್ತಿನಲ್ಲಿ (2017ರಲ್ಲಿ) ಗೊತ್ತುವಳಿ ಸೂಚನೆ ಬಿದ್ದು ಹೋಗಿತ್ತು.
6. **ನ್ಯಾ. ಸಿ.ವಿ.ನಾಗಾರ್ಜುನ ರೆಡ್ಡಿ:** ದಲಿತ ನ್ಯಾಯಾಧೀಶರೊಬ್ಬರ ವಿಚಾರದಲ್ಲಿ ತಾರತಮ್ಯ ಎಸಗಿದ ಆರೋಪದಲ್ಲಿ ಆಂಧ್ರ ಪ್ರದೇಶ ಮತ್ತು ತೆಲಂಗಾಣ ಹೈಕೋರ್ಟ್‌ನ ನ್ಯಾಯಮೂರ್ತಿಯಾಗಿದ್ದ ಸಿ.ವಿ.ನಾಗಾರ್ಜುನ ರೆಡ್ಡಿ ಅವರ ಪದಚ್ಯುತಿಗಾಗಿ 2016 ಮತ್ತು 2017ರಲ್ಲಿ ರಾಜ್ಯಸಭೆಯಲ್ಲಿ ಗೊತ್ತುವಳಿ ನೋಟಿಸ್ ನೀಡಲಾಗಿತ್ತು. ಆದರೆ, ನೋಟಿಸ್‌ಗೆ ಸಹಿ ಹಾಕಿದ್ದ ಕೆಲವು ಸಂಸದರು ಎರಡೂ ಬಾರಿಯೂ ತಮ್ಮ ಒಪ್ಪಿಗೆಯನ್ನು ವಾಪಸ್ ಪಡೆದಿದ್ದರಿಂದ ಪದಚ್ಯುತಿ ಪ್ರಕ್ರಿಯೆ ಮುಂದುವರಿಯಲಿಲ್ಲ.
7. **ನ್ಯಾ. ದೀಪಕ್ ಮಿಶ್ರಾ:** ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿಯಾಗಿದ್ದ ದೀಪಕ್ ಮಿಶ್ರಾ ಅವರ ಕಾರ್ಯವೈಖರಿ ಮತ್ತು ಅವರು ಪ್ರಕರಣಗಳನ್ನು ಹಂಚುವ ರೀತಿಯನ್ನು ಟೀಕಿಸಿ 2018ರಲ್ಲಿ ಐವರು ನ್ಯಾಯಮೂರ್ತಿಗಳು ಬಹಿರಂಗವಾಗಿ ಸುದ್ದಿಗೋಷ್ಠಿ ನಡೆಸಿದ ಬಳಿಕ ಕೆಲವು ಸಂಸದರು ಮಿಶ್ರಾ ಪದಚ್ಯುತಿಗೆ ಒತ್ತಾಯಿಸಿ ಗೊತ್ತುವಳಿ ನೋಟಿಸ್ ನೀಡಿದ್ದರು. ಆದರೆ, ಅಂದಿನ ಸಭಾಪತಿ ವೆಂಕಯ್ಯ ನಾಯ್ಡು ಅವರು, ಇದು ಸುಪ್ರೀಂ ಕೋರ್ಟ್‌ನ ಆಂತರಿಕ ವಿಚಾರ ಎಂದು ಹೇಳಿ ನೋಟಿಸ್ ತಿರಸ್ಕರಿಸಿದ್ದರು.

## ❖ 'ಬಾಲ ಗರ್ಭಿಣಿಯರು ಹೆಚ್ಚಲು ಜಾಲತಾಣ ಕಾರಣ'

- 'ರಾಜ್ಯದಲ್ಲಿ ಬಾಲ ಗರ್ಭಿಣಿಯರ ಸಂಖ್ಯೆ ಹೆಚ್ಚಲು ಸಾಮಾಜಿಕ ಜಾಲತಾಣಗಳಲ್ಲಿ ಲಂಗೂ ಲಗಾಮು ಇಲ್ಲದೇ ಪ್ರಸಾರವಾಗುವ ಅಶ್ಲೀಲ, ಲೈಂಗಿಕ ಕಾರ್ಯಕ್ರಮಗಳೇ ಕಾರಣ.
- ವಿಧಾನಸಭೆಯಲ್ಲಿ ಪ್ರಶ್ನೋತ್ತರ ಅವಧಿಯಲ್ಲಿ ವಿಷಯ ಪ್ರಸ್ತಾಪ, 'ಕಳೆದ 20 ತಿಂಗಳಲ್ಲಿ 26,463 ಬಾಲಕಿಯರು ಗರ್ಭ ಧರಿಸಿದ್ದಾರೆ. 'ಇನ್ನೂ ಪ್ರಪಂಚದ ಅರಿವೇ ಇಲ್ಲದ ಸಮಯದಲ್ಲಿ ಪ್ರೀತಿ-ಪ್ರೇಮ ಎಂದು ಬಾಲಕಿಯರು ಮೋಸ ಹೋಗುತ್ತಿದ್ದಾರೆ.

## ❖ ಬ್ರಿಟನ್‌ಗೆ ಇ.ವಿ ರಫ್ತು: ಮಹೀಂದ್ರ ಚಿಂತನೆ

- ಬ್ರಿಟನ್‌ಗೆ ವಿದ್ಯುತ್‌ಚಾಲಿತ ವಾಹನಗಳನ್ನು (ಇ.ವಿ) ರಫ್ತು ಮಾಡಲು ಮಹೀಂದ್ರ ಆ್ಯಂಡ್ ಮಹೀಂದ್ರ ಕಂಪನಿಯು ಯೋಜಿಸಿದೆ.
- **ಭಾರತ ಮತ್ತು ಬ್ರಿಟನ್ ನಡುವಿನ ಮುಕ್ತ ವ್ಯಾಪಾರ ಒಪ್ಪಂದದಿಂದ (ಎಫ್‌ಟಿಎ)** ವ್ಯಾಪಾರದ ಅವಕಾಶಗಳು ಹೆಚ್ಚಲಿವೆ ಎಂದು ಕಂಪನಿಯ ಸಿಇಒ ಮತ್ತು ವ್ಯವಸ್ಥಾಪಕ ನಿರ್ದೇಶಕ ಅನೀಶ್ ಶಾ ಹೇಳಿದ್ದಾರೆ.
- 2030ರ ವೇಳೆಗೆ ತನ್ನ ಒಟ್ಟು ವಾಹನಗಳ ಮಾರಾಟದಲ್ಲಿ ವಿದ್ಯುತ್‌ಚಾಲಿತ ವಾಹನಗಳ ಪಾಲು ಶೇ 30ರಷ್ಟು ಆಗಬೇಕು ಎಂದು ಕಂಪನಿಯು ಬಯಸಿದೆ. ಇ.ವಿ ರಫ್ತಿನಿಂದ ಬ್ರಿಟನ್ ಮಾರುಕಟ್ಟೆಯಲ್ಲಿ ಹೆಚ್ಚಿನ ಪಾಲನ್ನು ಪಡೆಯಲು ಉದ್ದೇಶಿಸಲಾಗಿದೆ. ಈ ಒಪ್ಪಂದವು ದೇಶದಲ್ಲಿ ನಾವೀನ್ಯತೆಗೆ ಮತ್ತು ತಯಾರಿಕೆಗೆ ಉತ್ತೇಜನ ನೀಡಲಿದೆ ಎಂದು ತಿಳಿಸಿದ್ದಾರೆ.
- ಈ ಒಪ್ಪಂದವು ಬ್ರಿಟನ್ ಸರಕುಗಳಿಗೆ ಭಾರತದ ಮಾರುಕಟ್ಟೆಯನ್ನು ತೆರೆಯಲಿದೆ ಮತ್ತು ದೇಶದ ರಫ್ತಿನ ಅವಕಾಶಗಳ ಹೆಚ್ಚಳಕ್ಕೆ ಸಹಾಯಕವಾಗಲಿದೆ ಎಂದು ಹೇಳಿದ್ದಾರೆ.

## ❖ ಸುಂಕ: ಭಾರತದ ಬೆಳವಣಿಗೆಗೆ ಧಕ್ಕೆ ಇಲ್ಲ

- ಭಾರತದ ಸರಕುಗಳ ಮೇಲೆ ಅಮೆರಿಕವು ವಿಧಿಸಿರುವ ಸುಂಕವು ಭಾರತದ ಆರ್ಥಿಕ ಬೆಳವಣಿಗೆಯ ಮೇಲೆ ದುಷ್ಪರಿಣಾಮ ಬೀರುವುದಿಲ್ಲ ಎಂದು ಜಾಗತಿಕ ರೇಟಿಂಗ್ಸ್ ಸಂಸ್ಥೆ ಎಸ್ ಆ್ಯಂಡ್ ಪಿ ಹೇಳಿದೆ.
- 'ಭಾರತವು ಬಾಹ್ಯ ವ್ಯಾಪಾರವನ್ನು ಆಧರಿಸಿರುವ ಅರ್ಥ ವ್ಯವಸ್ಥೆಯನ್ನು ಹೊಂದಿಲ್ಲ. ಭಾರತದ ರೇಟಿಂಗ್ ಮುನ್ನೋಟ ಕೂಡ ಸಕಾರಾತ್ಮಕವಾ ಗಿಯೇ ಇರಲಿದೆ' ಎಂದು ಎಸ್ ಆ್ಯಂಡ್ ಪಿ ಸಂಸ್ಥೆಯ ಜಾಗತಿಕ ರೇಟಿಂಗ್ಸ್ ವಿಭಾಗದ ನಿರ್ದೇಶಕ ಯೀಫಾರ್ನ್ ಫೂಆ ಹೇಳಿದ್ದಾರೆ.
- ಕಳೆದ ವರ್ಷದ ಮೇ ತಿಂಗಳಲ್ಲಿ ಎಸ್ ಆ್ಯಂಡ್ ಪಿ ಸಂಸ್ಥೆಯು ಭಾರತದ ರೇಟಿಂಗ್ ಮುನ್ನೋಟ 'ಬಿಬಿಬಿ-' ಇದ್ದಿದ್ದನ್ನು 'ಧನಾತ್ಮಕ' ಎಂದು ಪರಿಷ್ಕರಿಸಿದೆ. ದೇಶದ ಆರ್ಥಿಕ ಬೆಳವಣಿಗೆಯು ಚೆನ್ನಾಗಿ ಇರುವುದನ್ನು ಗಮನಿಸಿ ಅದು ಈ ರೇಟಿಂಗ್ ಪರಿಷ್ಕರಣೆ ಮಾಡಿದೆ.
- ಭಾರತದಿಂದ ಆಮದು ಮಾಡಿಕೊಳ್ಳುವ ಸರಕುಗಳ ಮೇಲೆ ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಶೇ 25ರಷ್ಟು ಸುಂಕ ವಿಧಿಸಿರುವುದಲ್ಲದೆ, ಹೆಚ್ಚುವರಿಯಾಗಿ ಶೇ 25ರಷ್ಟು ಸುಂಕ ಹೇರಿದ್ದಾರೆ. ಹೆಚ್ಚುವರಿ ಸುಂಕವು ಆಗಸ್ಟ್ 27ರಿಂದ ಅನ್ವಯ ಆಗಲಿದೆ.
- ಪ್ರಸಕ್ತ ಹಣಕಾಸು ವರ್ಷದಲ್ಲಿ ದೇಶದ ಜಿಡಿಪಿ ಬೆಳವಣಿಗೆ ದರವು ಶೇ 6.5ರಷ್ಟು ಇರಲಿದೆ ಎಂದು ಎಸ್ ಆ್ಯಂಡ್ ಪಿ ಅಂದಾಜು ಮಾಡಿದೆ. ಔಷಧ ಹಾಗೂ ಗ್ರಾಹಕ ಬಳಕೆಯ ಎಲೆಕ್ಟ್ರಾನಿಕ್ಸ್ ಉತ್ಪನ್ನಗಳನ್ನು ಅಮೆರಿಕವು ಹೆಚ್ಚಿನ ಸುಂಕದ ವ್ಯಾಪ್ತಿಯಿಂದ ಹೊರಗೆ ಇರಿಸಿದೆ ಎಂದು ಯೀಫಾರ್ನ್ ಹೇಳಿದ್ದಾರೆ.

Dr. Rajkumar IAS/KAS Academy

- ‘ಹೆಚ್ಚಿನ ಸುಂಕವು ದೀರ್ಘಾವಧಿಯಲ್ಲಿ ಭಾರತದ ಅರ್ಥ ವ್ಯವಸ್ಥೆಗೆ ಏಟು ನೀಡುತ್ತದೆ ಎಂದು ನಾವು ಭಾವಿಸಿಲ್ಲ. ಹೀಗಾಗಿ, ಭಾರತದ ಕುರಿತ ಧನಾತ್ಮಕ ಮುನ್ನೋಟವು ಮುಂದುವರಿಯಲಿದೆ’ ಎಂದು ಅವರು ಏಷ್ಯಾ-ಪೆಸಿಫಿಕ್ ದೇಶಗಳ ರೇಟಿಂಗ್ ಕುರಿತ ಕಾರ್ಯಕ್ರಮವೊಂದರಲ್ಲಿ ಹೇಳಿದ್ದಾರೆ.
- ಹೆಚ್ಚಿನ ಪ್ರಮಾಣದ ಸುಂಕವು ಭಾರತಕ್ಕೆ ವಿದೇಶಿ ಬಂಡವಾಳದ ಹರಿವಿನ ಮೇಲೆ ಕೆಟ್ಟ ಪರಿಣಾಮ ಉಂಟುಮಾಡಲಿದೆಯೇ ಎಂಬ ಪ್ರಶ್ನೆಗೆ ಅವರು, ‘ಚೀನಾ ಜೊತೆ ಇನ್ನೂ ಒಂದು ದೇಶದಲ್ಲಿ ತಯಾರಿಕಾ ಘಟಕ ಆರಂಭಿಸುವ ಕಾರ್ಯತಂತ್ರವು ಕೆಲವು ವರ್ಷಗಳಿಂದ ಚಾಲ್ತಿಯಲ್ಲಿ ಇದೆ. ಕಂಪನಿಗಳು ಭಾರತದ ಆಂತರಿಕ ಬೇಡಿಕೆಗಳನ್ನು ಪೂರೈಸಲು ಭಾರತದಲ್ಲೇ ಘಟಕಗಳನ್ನು ತೆರೆಯುತ್ತಿವೆ’ ಎಂದು ವಿವರಣೆ ನೀಡಿದ್ದಾರೆ.
- ‘ಹಲವು ಉದ್ದಿಮೆಗಳು ಭಾರತದಲ್ಲಿ ಘಟಕ ಆರಂಭಿಸುತ್ತಿರು ವುದು ಅಮೆರಿಕಕ್ಕೆ ಉತ್ಪನ್ನ ರಫ್ತು ಮಾಡುವ ಒಂದೇ ಉದ್ದೇಶದಿಂದ ಅಲ್ಲ. ಭಾರತದಲ್ಲಿನ ದೊಡ್ಡ ಮಾರುಕಟ್ಟೆಯನ್ನೂ ಗಮನಿಸಿ ಅವು ಘಟಕ ಆರಂಭಿಸುತ್ತಿವೆ. ಭಾರತದಲ್ಲಿನ ಮಧ್ಯಮ ವರ್ಗವು ಬೆಳೆಯುತ್ತಿದೆ. ಹೀಗಾಗಿ, ಭಾರತದಲ್ಲಿ ಹೂಡಿಕೆ ಮಾಡಲು, ರಫ್ತು ಮಾಡಲು ಅವಕಾಶ ಅರಸುತ್ತಿರುವವರಿಗೆ ಅಮೆರಿಕವೊಂದೇ ಗಮ್ಯವಾಗಿರಬೇಕು ಎಂದೇನೂ ಇಲ್ಲ’ ಎಂದು ಉತ್ತರ ನೀಡಿದ್ದಾರೆ.

## ❖ ಟ್ರಂಪ್ – ಪುಟಿನ್ ಶೃಂಗಸಭೆಗೂ ಮುನ್ನ ಬರ್ಲಿನ್‌ಗೆ ಭೇಟಿ ನೀಡಲಿರುವ ಝೆಲೆನ್‌ಸ್ಕಿ

- ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ ಬರ್ಲಿನ್‌ಗೆ ಭೇಟಿ ನೀಡಲಿದ್ದು, ಈ ವೇಳೆ ಅವರು ಜರ್ಮನಿಯ ಚಾನ್ಸಲರ್ ಫ್ರಿಡ್‌ರಿಚ್ ಮೆರ್ಜ್ ಜೊತೆಗೆ ಹಾಗೂ ಯುರೋಪ್, ಅಮೆರಿಕದ ನಾಯಕರೊಂದಿಗೆ ಮಾತುಕತೆ ನಡೆಸಲಿದ್ದಾರೆ ಎಂದು ಎಂದು ಜರ್ಮನಿ ಸರ್ಕಾರ ಹೇಳಿದೆ.
- ಟ್ರಂಪ್-ಪುಟಿನ್ ಶೃಂಗಸಭೆಯಿಂದ ತಮ್ಮನ್ನು ದೂರವಿಟ್ಟಿರುವ ಹಿನ್ನೆಲೆಯಲ್ಲಿ, ಯುರೋಪ್ ಮತ್ತು ಉಕ್ರೇನ್ ನಾಯಕರ ಅಭಿಪ್ರಾಯಗಳನ್ನು ಕೇಳಲು ಮೆರ್ಜ್ ಅವರು ಸರಣಿ ವರ್ಚುವಲ್ ಸಭೆಗಳನ್ನು ಆಯೋಜಿಸಿದ್ದಾರೆ.

## ❖ ಭಯೋತ್ಪಾದನೆ ನಿಗ್ರಹ: ಅಮೆರಿಕ, ಪಾಕ್ ಮಾತುಕತೆ

- ಬಲೂಚಿಸ್ತಾನ್ ಲಿಬರೇಷನ್ ಆರ್ಮಿ (ಬಿಎಲ್‌ಎ), ಇಸ್ಲಾಮಿಕ್ ಸ್ಟೇಟ್- ಖೊರಾಸಾನ್, ತಾಲಿಬಾನ್ ಸೇರಿದಂತೆ ಪ್ರಮುಖ ಭಯೋತ್ಪಾದನಾ ಸಂಘಟನೆಗಳನ್ನು ಸಮರ್ಪಕವಾಗಿ ನಿಗ್ರಹಿಸಲು ದ್ವಿಪಕ್ಷೀಯ ಸಹಕಾರವನ್ನು ಇನ್ನಷ್ಟು ವೃದ್ಧಿಸಲು ಪಾಕಿಸ್ತಾನ ಮತ್ತು ಅಮೆರಿಕ ಸಮ್ಮತಿ ನೀಡಿವೆ.
- ಪಾಕಿಸ್ತಾನ ಮೂಲದ ಬಿಎಲ್‌ಎ ಅನ್ನು ವಿದೇಶಿ ಭಯೋತ್ಪಾದಕ ಸಂಘಟನೆ ಎಂದು ಅಮೆರಿಕ ಘೋಷಿಸಿದ ಬೆನ್ನಲ್ಲೇ ಉಭಯ ದೇಶಗಳ ನಡುವೆ ಭಯೋತ್ಪಾದನೆ ನಿಗ್ರಹ ಕುರಿತು ದ್ವಿಪಕ್ಷೀಯ ಮಾತುಕತೆಗಳು ನಡೆದಿವೆ.
- ವಿಶ್ವಸಂಸ್ಥೆಯಲ್ಲಿನ ಪಾಕಿಸ್ತಾನದ ವಿಶೇಷ ಕಾರ್ಯದರ್ಶಿ ನಬೀಲ್ ಮುನೀರ್ ಅವರ ನೇತೃತ್ವದಲ್ಲಿ ನಡೆದ ಚರ್ಚೆಯಲ್ಲಿ ಅಮೆರಿಕದ ವಿದೇಶಾಂಗ ಸಚಿವಾಲಯದ ಭಯೋತ್ಪಾದನಾ ನಿಗ್ರಹದ ಕಾರ್ಯಕಾರಿ ಸಂಯೋಜಕರಾದ ಗೊರಿ ಡಿ. ಲೋಗೆರ್ಫೊ ಭಾಗವಹಿಸಿದ್ದರು.
- ಎರಡೂ ದೇಶಗಳ ನಡುವೆ ದೀರ್ಘಕಾಲದಿಂದ ಸ್ನೇಹ ಮತ್ತು ಪಾಲುದಾರಿಕೆಯಿದ್ದು, ಭಯೋತ್ಪಾದನೆ ನಿಗ್ರಹ ವಿಷಯದಲ್ಲಿ ಬದ್ಧತೆಯನ್ನು ತೋರಿದ್ದೇವೆ. ಶಾಂತಿ ಮತ್ತು ಸುಸ್ಥಿರ ಅಭಿವೃದ್ಧಿಗೂ ಇದು ಸಹಕಾರವಾಗಲಿದೆ ಎಂದು ಜಂಟಿ ಪ್ರಕಟಣೆ ತಿಳಿಸಿದೆ.

Dr. Rajkumar IAS/KAS Academy

## ❖ ಬಿಡ್ ಅನುಮೋದಿಸಿದ ಐಒಎ

- 2030ರ ಕಾಮನ್ವೆಲ್ತ್ ಕ್ರೀಡೆಗಳ ಆತಿಥ್ಯ ವಹಿಸಲು ಭಾರತ ಸಲ್ಲಿಸಿರುವ ಬಿಡ್‌ಅನ್ನು ಭಾರತ ಒಲಿಂಪಿಕ್ ಸಂಸ್ಥೆ (ಐಒಎ) ವಿಶೇಷ ಮಹಾಸಭೆಯಲ್ಲಿ ಅನುಮೋದಿಸಿತು.
- ‘ಪದಕ ಗೆಲ್ಲುವ ಕ್ರೀಡೆಗಳನ್ನೂ ಸೇರ್ಪಡೆ ಮಾಡುವ ಮೂಲಕ ಭಾರತ ಒಳಗೊಳ್ಳುವಿಕೆಯೊಡನೆ ಕ್ರೀಡೆಗಳನ್ನು ನಡೆಸಲಿದೆ’ ಎಂದು ಸಂಸ್ಥೆಯ ಉನ್ನತ ಅಧಿಕಾರಿಗಳು ವಿಶ್ವಾಸ ವ್ಯಕ್ತಪಡಿಸಿದರು.
- ಅಹಮದಾಬಾದ್‌ಅನ್ನು ಆತಿಥ್ಯದ ನಗರವಾಗಿ ಹೆಸರಿಸಿ 2030ರ ಕ್ರೀಡೆಗಳನ್ನು ನಡೆಸಲು ಕೇಂದ್ರ ಸರ್ಕಾರ ಈಗಾಗಲೇ ಆಸಕ್ತಿಪತ್ರ ಸಲ್ಲಿಸಿದೆ. ಆದರೆ ಪ್ರಸ್ತಾವಗಳೊಂದಿಗೆ ಭಾರತವು ಆಗಸ್ಟ್ 31ರ ಗಡುವಿನ ಒಳಗೆ ಅಂತಿಮ ಬಿಡ್ ಸಲ್ಲಿಸಬೇಕಾಗುತ್ತದೆ.
- ಅಹಮದಾಬಾದ್ ಜೊತೆಗೆ 2010ರಲ್ಲಿ ಆತಿಥ್ಯ ವಹಿಸಿದ್ದ ದೆಹಲಿ ಮತ್ತು ಭುವನೇಶ್ವರ ನಗರಗಳನ್ನೂ ಆತಿಥ್ಯಕ್ಕೆ ಪರಿಗಣಿಸಲಾಗುತ್ತದೆ ಎಂದು ಐಒಎ ಅಧ್ಯಕ್ಷೆ ಪಿ.ಟಿ.ಉಷಾ ತಿಳಿಸಿದರು. ಅಂತಿಮವಾಗಿ ಆತಿಥ್ಯ ವಹಿಸುವ ನಗರ ಯಾವುದೆಂಬುದನ್ನು ಶೀಘ್ರವೇ ತಿಳಿಸಲಾಗುವುದು ಎಂದೂ ಹೇಳಿದರು.
- ‘2026ರ ಗ್ಲಾಸ್ಗೊ ಕ್ರೀಡೆಗಳಲ್ಲಿ ಕೆಲವು ಆಟಗಳಿಗೆ ಕತ್ತರಿ ಹಾಕಲಾಗಿದೆ. ಆದರೆ ನಾವು 2010ರಲ್ಲಿ ನಡೆಸಿದಂತೆ ಪೂರ್ಣ ಪ್ರಮಾಣದಲ್ಲಿ ಕ್ರೀಡೆಗಳನ್ನು ನಡೆಸಲಿದ್ದೇವೆ’ ಎಂದರು. ಗ್ಲಾಸ್ಗೊ ಕೂಟಕ್ಕೆ ಪ್ರಮುಖ ಕ್ರೀಡೆಗಳಾದ ಹಾಕಿ, ಬ್ಯಾಡ್ಮಿಂಟನ್, ಕುಸ್ತಿ, ಶೂಟಿಂಗ್ ಅನ್ನು ಕೈಬಿಡಲಾಗಿದೆ. ವೆಚ್ಚ ತಗ್ಗಿಸಲು ಆಯೋಜಕರು ಈ ನಿರ್ಧಾರಕ್ಕೆ ಬಂದಿದ್ದಾರೆ.
- **2030ರ ಆತಿಥ್ಯಕ್ಕೆ ಆಸಕ್ತಿ ತೋರಿದ್ದ ಕೆನಡಾ ಹಿಂದೆ ಸರಿದಿದೆ**. ಹೀಗಾಗಿ ಭಾರತಕ್ಕೆ ಆತಿಥ್ಯ ದೊರೆಯುವ ಅವಕಾಶ ಸಾಧ್ಯತೆ ಹೆಚ್ಚಾಗಿದೆ.

## ❖ ಐಸಿಸಿ ರ‍್ಯಾಂಕಿಂಗ್: ಎರಡನೇ ಸ್ಥಾನಕ್ಕೆ ರೋಹಿತ್ ಶರ್ಮಾ

- ಭಾರತ ತಂಡದ ಆರಂಭಿಕ ಬ್ಯಾಟರ್ ರೋಹಿತ್ ಶರ್ಮಾ ಅವರು ಕಳೆದ ಕೆಲವು ತಿಂಗಳುಗಳಿಂದ ಯಾವುದೇ ಅಂತರ ರಾಷ್ಟ್ರೀಯ ಕ್ರಿಕೆಟ್ ಪಂದ್ಯಗಳನ್ನು ಆಡಿಲ್ಲ. ಆದರೂ ಐಸಿಸಿ ಏಕದಿನ ಬ್ಯಾಟರ್‌ಗಳ ರ‍್ಯಾಂಕಿಂಗ್‌ನಲ್ಲಿ ಎರಡನೇ ಸ್ಥಾನಕ್ಕೇರಿದ್ದಾರೆ.
- ಮೂರನೇ ಸ್ಥಾನದಲ್ಲಿದ್ದ ರೋಹಿತ್ ಅವರು ಒಂದು ಸ್ಥಾನ ಬಡ್ತಿ ಗಳಿಸಿ ಪಾಕಿಸ್ತಾನದ ಬಾಬರ್ ಆಜಂ ಅವರನ್ನು ಹಿಂದಿಕ್ಕಿದ್ದಾರೆ. ಈ ವಿಭಾಗದಲ್ಲಿ ಭಾರತದ ಶುಭಮನ್ ಗಿಲ್ ಅವರು ಅಗ್ರಸ್ಥಾನದಲ್ಲಿದ್ದಾರೆ. ನಾಲ್ಕನೇ ಸ್ಥಾನದಲ್ಲಿ ವಿರಾಟ್ ಕೊಹ್ಲಿ ಮುಂದುವರಿದಿದ್ದಾರೆ.
- ರೋಹಿತ್ ಅವರ ಖಾತೆಯಲ್ಲಿ 756 ಅಂಕಗಳು ಮತ್ತು ಶುಭಮನ್ ಗಿಲ್ 784 ಅಂಕಗಳಿವೆ. ವಿರಾಟ್ ಅಂಕಗಳನ್ನು ಗಳಿಸಿದ್ದಾರೆ.

Dr. Rajkumar IAS/KAS Academy

## ❖ ಸ್ಪರ್ಧೆ ಮಾಡದ 10 ಪಕ್ಷಗಳು

- ಕಳೆದ ಆರು ವರ್ಷಗಳಿಂದ ಯಾವುದೇ ಚುನಾವಣೆಯಲ್ಲಿ ಸ್ಪರ್ಧೆ ಮಾಡದ ರಾಜ್ಯದಲ್ಲಿನ 10 ರಾಜಕಿಯ ಪಕ್ಷಗಳನ್ನು ಚುನಾವಣಾ ಆಯೋಗ ಪಟ್ಟಿ ಮಾಡಿದೆ.
- ಅಖಿಲ ಭಾರತೀಯ ರೈತ ಪಾರ್ಟಿ, ಬಡವರ ಶ್ರಮಿಕರ ರೈತರ ಕಾಂಗ್ರೆಸ್ ಪಾರ್ಟಿ, ಭಾರತೀಯ ಜನಶಕ್ತಿ ಕಾಂಗ್ರೆಸ್, ಭಾರತೀಯ ರಾಷ್ಟ್ರೀಯ ಮಹಿಳಾ ಸರ್ವೋದಯ ಕಾಂಗ್ರೆಸ್, ಡಾ. ಅಂಬೇಡ್ಕರ್ ಸಮಾಜವಾದಿ ಡೆಮಾಕ್ರಟಿಕ್ ಪಾರ್ಟಿ, ಜನ ಸಾಮಾನ್ಯರ ಪಾರ್ಟಿ, ಮಾನವ ಪಾರ್ಟಿ, ಪ್ರಜಾ ಪರಿವರ್ತನ ಪಾರ್ಟಿ, ಶುಭ ಕರ್ನಾಟಕ, ಯಂಗ್ ಇಂಡಿಯಾ ಕಾಂಗ್ರೆಸ್ ಪಾರ್ಟಿ ಇವು ಚುನಾವಣಾ ಆಯೋಗವು ಪಟ್ಟಿ ಮಾಡಲಾದ ಪಕ್ಷಗಳಾಗಿವೆ.
- ಈ ಪಕ್ಷಗಳಿಂದ ವಿವರ ಪಡೆದು ರಾಜಕೀಯ ಪಕ್ಷಗಳ ಪಟ್ಟಿಯಿಂದ ಕೈಬಿಡಲು ಇಲ್ಲವೇ ಮುಂದುವರಿಸಲು ಕ್ರಮ ಕೈಗೊಳ್ಳುವಂತೆ ಭಾರತೀಯ ಚುನಾವಣಾ ಆಯೋಗವು ರಾಜ್ಯದ ಮುಖ್ಯ ಚುನಾವಣಾಧಿಕಾರಿಗೆ ತಿಳಿಸಿದೆ.

## ❖ ನೇಪಾಳದ ಮಧೇಶ್ ಪ್ರಾಂತ್ಯದಲ್ಲಿ ಬರ: ಭಾರತೀಯ ನಿಯೋಗ ಭೇಟಿ

- ಭಾರತದ ಜಲಶಕ್ತಿ ಸಚಿವಾಲಯದ ಮೂವರು ಸದಸ್ಯರ ನಿಯೋಗ ನೇಪಾಳದ ಮಧೇಶ್ ಪ್ರಾಂತ್ಯದ ಮುಖ್ಯಮಂತ್ರಿ ಸತೀಶ್ ಕುಮಾರ್ ಸಿಂಗ್ ಅವರನ್ನು ಭೇಟಿ ಮಾಡಿತು. ಮುಂಗಾರು ವಿಳಂಬದಿಂದ ನೇಪಾಳದಲ್ಲಿ ಉಂಟಾ ಗಿರುವ ಬರ ಪರಿಸ್ಥಿತಿಗೆ ಪರಿಹಾರ ಒದಗಿಸುವ ನಿಟ್ಟಿನಲ್ಲಿ ಸಭೆ ನಡೆಸಿತು.
- ಭಾರತದ ನಿಯೋಗವು ಪ್ರಾಂತ್ಯದ ನೀರಿನ ಕೊರತೆಯನ್ನು ನೀಗಿಸಲು ಅತ್ಯಮೂಲ್ಯ ಮಾಹಿತಿಯನ್ನು ಒದಗಿಸಿತು.

## ❖ ಇಂದಿನಿಂದ ವಾರ್ಷಿಕ ಫಾಸ್ಟ್‌ಟ್ಯಾಗ್ ಪಾಸ್ ಜಾರಿ

- ಫಾಸ್ಟ್‌ಟ್ಯಾಗ್ ಆಧಾರಿತ ವಾರ್ಷಿಕ ಹೆದ್ದಾರಿ ಟೋಲ್ ಪಾಸ್ ವ್ಯವಸ್ಥೆ ಜಾರಿಗೆ ಬರಲಿದೆ.
- ಈ ವಾರ್ಷಿಕ ಪಾಸ್‌ನ ಮೌಲ್ಯ ₹3 ಸಾವಿರ. ರಾಷ್ಟ್ರೀಯ ಹೆದ್ದಾರಿ ಮತ್ತು ಎಕ್ಸ್‌ಪ್ರೆಸ್ ವೇಗಳನ್ನು ಬಳಸುವ ವಾಣಿಜ್ಯೇತರ ವಾಹನಗಳು (ಖಾಸಗಿ ಕಾರು, ಜೀಪ್, ವ್ಯಾನ್‌ಗಳು) 200 ಟ್ರಿಪ್ ಗಳವರೆಗೆ ಈ ಪಾಸ್ ಬಳಸಬಹುದು. ಅಷ್ಟು ಟ್ರಿಪ್ ಪೂರ್ಣಗೊಂಡ ನಂತರ ಪಾಸ್‌ಗಳನ್ನು ಮತ್ತೆ ರೀಚಾರ್ಜ್ ಮಾಡಿಕೊಳ್ಳಬಹುದು. ವಾಹನಗಳಲ್ಲಿ ಫಾಸ್ಟ್‌ಟ್ಯಾಗ್ ಇರುವವರು ಹೊಸದಾಗಿ ಖರೀದಿಸುವ ಅಗತ್ಯ ಇಲ್ಲ.
- ರಾಜ್‌ಮಾರ್ಗ್ ಯಾತ್ರಾ ಆ್ಯಪ್, ಎನ್‌ಎಚ್‌ಎಐ ಹಾಗೂ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವಾಲಯದ ವೆಬ್‌ಸೈಟ್‌ನಲ್ಲಿರುವ ಲಿಂಕ್ ಬಳಸಿ, ಪಾಸ್ ಪಡೆಯಬಹುದಾಗಿದೆ.

## ❖ ಭಾರತದ ರೇಟಿಂಗ್ ಹೆಚ್ಚಿಸಿದ ಎಸ್‌ಆ್ಯಂಡ್‌ಪಿ

- ಜಾಗತಿಕ ರೇಟಿಂಗ್ಸ್ ಸಂಸ್ಥೆ ಎಸ್ ಆ್ಯಂಡ್ ಪಿ ಭಾರತದ ರೇಟಿಂಗ್‌ಅನ್ನು 18 ವರ್ಷಗಳ ನಂತರ ಮೇಲ್ದರ್ಜೆಗೆ ಏರಿಸಿದೆ. ಸಂಸ್ಥೆಯು ಭಾರತಕ್ಕೆ ‘ಬಿಬಿಬಿ’ ರೇಟಿಂಗ್ ನೀಡಿದೆ.
- ಭಾರತದ ಆರ್ಥಿಕ ಬೆಳವಣಿಗೆ, ಸರ್ಕಾರದ ಸಾಲಗಳನ್ನು ಹಾಗೂ ಬಜೆಟ್ ಕೊರತೆಯನ್ನು ತಗ್ಗಿಸುವಲ್ಲಿ ರಾಜಕೀಯ ನಾಯಕತ್ವವು ಹೊಂದಿರುವ ಬದ್ಧತೆ, ಹಣದುಬ್ಬರವನ್ನು ನಿಯಂತ್ರಣದಲ್ಲಿ ಇರಿಸಲು ಪೂರಕವಾಗಿರುವ ಹಣಕಾಸಿನ ನೀತಿಯನ್ನು ಉಲ್ಲೇಖಿಸಿ ಎಸ್ ಆ್ಯಂಡ್ ಪಿ ಸಂಸ್ಥೆಯು ದೇಶದ ಆರ್ಥಿಕ ಮುನ್ನೋಟವು ಸ್ಥಿರವಾಗಿದೆ ಎಂದು ಹೇಳಿದೆ.
- ‘ಜಗತ್ತಿನಲ್ಲಿ ಅತ್ಯುತ್ತಮ ಸಾಧನೆ ತೋರುತ್ತಿರುವ ಅರ್ಥ ವ್ಯವಸ್ಥೆಗಳಲ್ಲಿ ಭಾರತದ ಅರ್ಥ ವ್ಯವಸ್ಥೆಯೂ ಒಂದಾಗಿದೆ... ಕಳೆದ ಐದಾರು ವರ್ಷಗಳ ಅವಧಿಯಲ್ಲಿ ಸರ್ಕಾರಿ ವೆಚ್ಚಗಳ ಗುಣಮಟ್ಟವು ಸುಧಾರಿಸಿದೆ’ ಎಂದು ಎಸ್ ಆ್ಯಂಡ್ ಪಿ ಹೇಳಿದೆ.

Dr. Rajkumar IAS/KAS Academy

- ಅಮೆರಿಕವು ಭಾರತದ ಸರಕುಗಳ ಆಮದಿನ ಮೇಲೆ ವಿಧಿಸಿರುವ ಸುಂಕದ ಪರಿಣಾಮವು 'ನಿಭಾಯಿಸಬಹುದಾದ' ಮಟ್ಟದಲ್ಲಿ ಇದೆ ಎಂದು ಕೂಡ ಅದು ಹೇಳಿದೆ. 'ಭಾರತವು ಬಾಹ್ಯ ವ್ಯಾಪಾರದ ಮೇಲೆ ಹೆಚ್ಚಿನ ಅವಲಂಬನೆ ಹೊಂದಿಲ್ಲ, ದೇಶದ ಅರ್ಥ ವ್ಯವಸ್ಥೆಯ ಬೆಳವಣಿಗೆಯಲ್ಲಿ ಶೇಕಡ 60ರಷ್ಟು ಕೊಡುಗೆಯು ಆಂತರಿಕ ಬೇಡಿಕೆಗಳಿಂದ ಬರುತ್ತದೆ' ಎಂದು ಅದು ಉಲ್ಲೇಖಿಸಿದೆ.
- ರೇಟಿಂಗ್ ಮೇಲ್ದರ್ಜೆಗೆ ಏರಿಕೆ ಮಾಡಿರುವುದನ್ನು ಕೇಂದ್ರ ಹಣಕಾಸು ಸಚಿವಾಲಯವು ಸ್ವಾಗತಿಸಿದೆ. 'ಪ್ರಧಾನಿ ನರೇಂದ್ರ ಮೋದಿ ಅವರ ನಾಯಕತ್ವದ ಅಡಿಯಲ್ಲಿ ಭಾರತದ ಅರ್ಥ ವ್ಯವಸ್ಥೆಯು ನಿಜವಾಗಿಯೂ ಲವಲವಿಕೆ ಹೊಂದಿರುವುದನ್ನು, ಸದಾ ಚಟುವಟಿಕೆಯಿಂದ ಕೂಡಿರುವುದನ್ನು, ಗಟ್ಟಿಯಾಗಿ ಇರುವುದನ್ನು ಇದು ದೃಢಪಡಿಸಿದೆ' ಎಂದು ಹೇಳಿದೆ.
- ಸರ್ಕಾರದ ಸಾಲವನ್ನು ಹಾಗೂ ಬಜೆಟ್ ಕೊರತೆಯನ್ನು ಕಡಿಮೆ ಮಾಡುವುದಕ್ಕೆ ಆದ್ಯತೆ ನೀಡಲಾಗಿದೆ. ಇದೇ ಸಂದರ್ಭದಲ್ಲಿ ಮೂಲಸೌಕರ್ಯ ಸೃಷ್ಟಿಗಾಗಿ ಮತ್ತು ಎಲ್ಲರನ್ನೂ ಒಳಗೊಳ್ಳುವ ಬೆಳವಣಿಗೆಗಾಗಿ ಕೈಗೊಂಡಿ ರುವ ಕಾರ್ಯಗಳನ್ನು ಮುಂದುವರಿ ಸಲಾಗಿದೆ. ಈ ಕಾರಣಗಳಿಂದಾಗಿ ರೇಟಿಂಗ್ ಮೇಲ್ದರ್ಜೆಗೆ ಏರಿಕೆ ಆಗಿದೆ ಎಂದು ಸಚಿವಾಲಯವು ಹೇಳಿದೆ.
- ಭಾರತದ ಅರ್ಥ ವ್ಯವಸ್ಥೆಯು ನಿರ್ಜೀವವಾಗಿದೆ ಎಂದು ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಹೇಳಿದ ಕೆಲವೇ ದಿನಗಳ ನಂತರದಲ್ಲಿ, ಅಮೆರಿಕ ಮೂಲದ ಸಂಸ್ಥೆಯಿಂದ ಭಾರತದ ರೇಟಿಂಗ್ ಹೆಚ್ಚಳ ಆಗಿದೆ. ಎಸ್ ಆ್ಯಂಡ್ ಪಿ ಸಂಸ್ಥೆಯು 2007ರಲ್ಲಿ ಭಾರತಕ್ಕೆ 'ಬಿಬಿಬಿ-' ರೇಟಿಂಗ್ ನೀಡಿತ್ತು. ಈ ವರ್ಷದ ಆರಂಭದಲ್ಲಿ ಮಾರ್ನಿಂಗ್‌ಸ್ಟಾರ್ ಡಿಬಿಆರ್‌ಎಸ್ ರೇಟಿಂಗ್ ಸಂಸ್ಥೆಯು ಭಾರತದ ರೇಟಿಂಗ್‌ಅನ್ನು ಮೇಲ್ದರ್ಜೆಗೆ ಏರಿಸಿತ್ತು.
- 'ಭಾರತದ ಅರ್ಥ ವ್ಯವಸ್ಥೆಯು ಕೋವಿಡ್ ಸಾಂಕ್ರಾಮಿಕದ ಸಂದರ್ಭದಲ್ಲಿ ತಲುಪಿದ್ದ ಕೆಳಮಟ್ಟದಿಂದ ನಂತರದ ದಿನಗಳಲ್ಲಿ ಚೇತರಿಕೆ ಕಂಡುಕೊಂಡ ಕಾರಣ, ಪ್ರವರ್ಧಮಾನಕ್ಕೆ ಬರುತ್ತಿರುವ ಅರ್ಥವ್ಯವಸ್ಥೆಗಳ ಪೈಕಿ ಅತ್ಯುತ್ತಮ ಅರ್ಥವ್ಯವಸ್ಥೆ ಆಗಿದೆ... ಪ್ರಸಕ್ತ ಆರ್ಥಿಕ ವರ್ಷದಲ್ಲಿ ದೇಶದ ಜಿಡಿಪಿ ಬೆಳವಣಿಗೆ ದರವು ಶೇ 6.5ರಷ್ಟು ಇರಲಿದೆ, ಮುಂದಿನ ಮೂರು ವರ್ಷಗಳಲ್ಲಿ ಅದು ಸರಾಸರಿ ಶೇ 6.8ರಷ್ಟು ಇರಲಿದೆ ಎಂಬುದು ನಮ್ಮ ಅಂದಾಜು' ಎಂದು ಸಂಸ್ಥೆಯು ಹೇಳಿದೆ.

### ರೇಟಿಂಗ್ ಬಗ್ಗೆ ಒಂದಿಷ್ಟು ವಿವರ

- ಅಮೆರಿಕ ಮೂಲದ ಎಸ್ ಆ್ಯಂಡ್ ಪಿ ಸಂಸ್ಥೆಯು ವಿವಿಧ ದೇಶಗಳಿಗೆ ಅಲ್ಲಿನ ಆರ್ಥಿಕ ಸ್ಥಿತಿಗತಿ ಆಧರಿಸಿ ರೇಟಿಂಗ್ ನೀಡುತ್ತದೆ. ಸಂಸ್ಥೆಯು ಈಗ ಭಾರತದ ನೀಡಿರುವುದು 'ಹೂಡಿಕೆ ದರ್ಜೆಯ ರೇಟಿಂಗ್' .
- ಸಂಸ್ಥೆಯು ಈಗ ನೀಡಿರುವ 'ಬಿಬಿಬಿ' ರೇಟಿಂಗ್ ಅರ್ಥ 'ದೇಶವು ತನ್ನ ಹಣಕಾಸಿನ ಹೊಣೆಗಳನ್ನು ನಿಭಾಯಿಸಲು ಬೇಕಿರುವ ಸಾಮರ್ಥ್ಯ ಹೊಂದಿದೆ. ಆದರೆ ಅರ್ಥ ವ್ಯವಸ್ಥೆಯಲ್ಲಿ ನಕಾರಾತ್ಮಕ ಬೆಳವಣಿಗೆಗಳು ಆದಲ್ಲಿ ಸಮಸ್ಯೆ ಎದುರಾಗುತ್ತದೆ' ಎಂದಾಗಿದೆ. ಈ ಹಿಂದೆ ದೇಶಕ್ಕೆ ನೀಡಿದ್ದ 'ಬಿಬಿಬಿ-' ರೇಟಿಂಗ್ 'ಹೂಡಿಕೆ ದರ್ಜೆ' ಯಲ್ಲಿ ಅತ್ಯಂತ ಕಡಿಮೆ ಮಟ್ಟದ್ದಾಗಿತ್ತು.
- ಈಗಿನ ರೇಟಿಂಗ್ ಪರಿಷ್ಕರಣೆಯ ಪರಿಣಾಮ?: ಈಗ ರೇಟಿಂಗ್ ಮೇಲ್ದರ್ಜೆಗೆ ಏರಿಕೆ ಆಗಿರುವ ಪರಿಣಾಮವಾಗಿ ಭಾರತದ ಕಂಪನಿಗಳಿಗೆ ಅಂತರರಾಷ್ಟ್ರೀಯ ಮಾರುಕಟ್ಟೆಯಿಂದ ಕಡಿಮೆ ವೆಚ್ಚಕ್ಕೆ ಸಾಲ ಪಡೆಯಲು ಸಾಧ್ಯವಾಗುತ್ತದೆ.

## ❖ ಅಗ್ನಿವೀರರಿಗೆ ವಿಶೇಷ ಸಾಲ ಯೋಜನೆ: ಎಸ್‌ಬಿಐ

- ದೇಶದ ರಕ್ಷಣೆಗಾಗಿ ಶ್ರಮಿಸುತ್ತಿರುವ ಅಗ್ನಿವೀರರಿಗೆ ವಿಶೇಷ ವೈಯಕ್ತಿಕ ಸಾಲದ ಯೋಜನೆಯನ್ನು ಭಾರತೀಯ ಸ್ಟೇಟ್ ಬ್ಯಾಂಕ್ (ಎಸ್‌ಬಿಐ) ಆರಂಭಿಸಿದೆ.
- 79ನೇ ಸ್ವಾತಂತ್ರ್ಯ ದಿನಾಚರಣೆ ಸಂದರ್ಭದಲ್ಲಿ ಬ್ಯಾಂಕ್ ಈ ಹೊಸ ಯೋಜನೆ ಘೋಷಿಸಿದೆ.
- ಎಸ್‌ಬಿಐನಲ್ಲಿ ವೇತನ ಖಾತೆ ಹೊಂದಿರುವ ಅಗ್ನಿವೀರರು ಈ ಯೋಜನೆಯ ಅಡಿ ₹4 ಲಕ್ಷದವರೆಗೆ ಅಡಮಾನ ಇಲ್ಲದೇ ಸಾಲ ಪಡೆಯಬಹುದು. ಜೊತೆಗೆ ಸಂಸ್ಕರಣಾ ಶುಲ್ಕವೂ ಇರುವುದಿಲ್ಲ.

Dr Rajkumar IAS/KAS Academy

- ಸೆಪ್ಟೆಂಬರ್ 30ರವರೆಗೆ ಎಲ್ಲ ರಕ್ಷಣಾ ಸಿಬ್ಬಂದಿಗೆ ಶೇ 10.50 ಬಡ್ಡಿ ದರದಲ್ಲಿ ಸಾಲ ನೀಡಲಾಗುವುದು ಎಂದು ಬ್ಯಾಂಕ್ ತಿಳಿಸಿದೆ.

## ❖ ವ್ಯಾಪಾರ ಕೊರತೆ: 8 ತಿಂಗಳ ಗರಿಷ್ಠ


- ದೇಶದ ವ್ಯಾಪಾರ ಕೊರತೆ ಜುಲೈ ತಿಂಗಳಿನಲ್ಲಿ ₹2.39 ಲಕ್ಷ ಕೋಟಿ ಆಗಿದೆ. ಇದು ಎಂಟು ತಿಂಗಳ ಗರಿಷ್ಠ ಮಟ್ಟವಾಗಿದೆ ಎಂದು ಕೇಂದ್ರ ವಾಣಿಜ್ಯ ಸಚಿವಾಲಯ ತಿಳಿಸಿದೆ.
- ಆದರೆ ಇದೇ ಅವಧಿಯಲ್ಲಿ ದೇಶದ ರಫ್ತು ಪ್ರಮಾಣವು ಶೇ 7.29ರಷ್ಟು ಹೆಚ್ಚಳವಾಗಿದ್ದು, ₹3.26 ಲಕ್ಷ ಕೋಟಿಯಾಗಿದೆ. ಆಮದು ಶೇ 8.6ರಷ್ಟು ಏರಿಕೆಯಾಗಿದ್ದು, ₹5.65 ಲಕ್ಷ ಕೋಟಿಯಾಗಿದೆ. ಕಳೆದ ವರ್ಷದ ನವೆಂಬರ್ ನಂತರದ ಅತಿಹೆಚ್ಚಿನ ವ್ಯಾಪಾರ ಕೊರತೆ ಜುಲೈನಲ್ಲಿ ದಾಖಲಾಗಿದೆ.
- ಏಪ್ರಿಲ್-ಜುಲೈ ಅವಧಿಯಲ್ಲಿ ರಫ್ತು ಶೇ 3ರಷ್ಟು ಏರಿಕೆಯಾಗಿದ್ದು, ₹13 ಲಕ್ಷ ಕೋಟಿಯಾಗಿದೆ. ಆಮದು ಶೇ 5ರಷ್ಟು ಹೆಚ್ಚಳವಾಗಿದ್ದು, ₹21.37 ಲಕ್ಷ ಕೋಟಿಯಷ್ಟಾಗಿದೆ. ಪ್ರಸಕ್ತ ಆರ್ಥಿಕ ವರ್ಷದ ಮೊದಲ ನಾಲ್ಕು ತಿಂಗಳಿನಲ್ಲಿ ವ್ಯಾಪಾರ ಕೊರತೆ ₹8.30 ಲಕ್ಷ ಕೋಟಿಯಾಗಿದೆ ಎಂದು ತಿಳಿಸಿದೆ.
- ರಫ್ತು ಮೌಲ್ಯಕ್ಕಿಂತ ಆಮದು ಮೌಲ್ಯ ಹೆಚ್ಚಿದ್ದರೆ ಅದನ್ನು ವ್ಯಾಪಾರ ಕೊರತೆ ಎಂದು ಕರೆಯಲಾಗುತ್ತದೆ.
- ‘ಜಾಗತಿಕ ಆರ್ಥಿಕ ಅನಿಶ್ಚಿತತೆಯ ನಡುವೆಯೂ ದೇಶದ ಸರಕು ಮತ್ತು ಸೇವೆಗಳ ರಫ್ತು ಉತ್ತಮವಾಗಿದೆ. ಎಂಜಿನಿಯರಿಂಗ್, ಎಲೆಕ್ಟ್ರಾನಿಕ್ಸ್, ಹರಳು ಮತ್ತು ಆಭರಣಗಳು, ಔಷಧಗಳು ಮತ್ತು ರಾಸಾಯನಿಕ ವಲಯದ ಉತ್ಪನ್ನಗಳು ಹೆಚ್ಚಾಗಿ ರಫ್ತಾಗಿದ್ದು, ಬೆಳವಣಿಗೆಗೆ ಕಾರಣವಾಗಿದೆ’ ಎಂದು ಕೇಂದ್ರ ವಾಣಿಜ್ಯ ಸಚಿವಾಲಯದ ಕಾರ್ಯದರ್ಶಿ ಸುನಿಲ್ ಬರ್ತ್ವಾಲ್ ಹೇಳಿದ್ದಾರೆ.

## ❖ ಯುಪಿಐ ಬಳಸಿ ಹಣ ಕೇಳುವ ವಹಿವಾಟಿಗೆ ಅಂಕುಶ

- ಯುಪಿಐ ಆ್ಯಪ್ ಬಳಸಿ ‘ಹಣ ಕೊಡಿ’ ಎಂದು ಬೇರೊಬ್ಬರಿಗೆ ಕೋರಿಕೆ ಸಲ್ಲಿಸಲು ಅಕ್ಟೋಬರ್ 1ರಿಂದ ಅವಕಾಶ ಇರುವುದಿಲ್ಲ.
- ಈ ಸೌಲಭ್ಯವನ್ನು ಅಕ್ಟೋಬರ್ 1ರಿಂದ ಸ್ಥಗಿತಗೊಳಿಸುವಂತೆ ರಾಷ್ಟ್ರೀಯ ಪಾವತಿ ನಿಗಮವು (ಎನ್‌ಪಿಸಿಐ) ಬ್ಯಾಂಕುಗಳು ಹಾಗೂ ಯುಪಿಐ ಪಾವತಿ ಸೇವೆ ಒದಗಿಸುವ ಆ್ಯಪ್‌ಗಳಿಗೆ ಸೂಚನೆ ನೀಡಿದೆ. ಹಣಕಾಸಿನ ವಂಚನೆಯನ್ನು ತಡೆಯುವ ಉದ್ದೇಶದಿಂದ ಎನ್‌ಪಿಸಿಐ ಈ ಕ್ರಮ ಕೈಗೊಂಡಿದೆ.
- ಎನ್‌ಪಿಸಿಐ ಈ ಸೂಚನೆಯನ್ನು ಜುಲೈ 29ರಂದೇ ರವಾನಿಸಿದೆ. ಇದು ಜಾರಿಗೆ ಬಂದ ನಂತರದಲ್ಲಿ ಫೋನ್‌ಪೇ, ಗೂಗಲ್ ಪೇ, ಪೇಟಿಎಂ, ಭೀಮ್ ಸೇರಿದಂತೆ ಯಾವುದೇ ಯುಪಿಐ ಆ್ಯಪ್‌ಗಳು, ಯುಪಿಐ ಸದಸ್ಯ ಬ್ಯಾಂಕ್‌ಗಳು ಈ ಬಗೆಯಲ್ಲಿ ವ್ಯಕ್ತಿಗಳ ನಡುವೆ ‘ಹಣ ಕೇಳುವ’ ವಹಿವಾಟು ಸೇವೆ ಒದಗಿಸಲು ಅವಕಾಶ ಇರುವುದಿಲ್ಲ.
- ಯುಪಿಐ ಆ್ಯಪ್‌ಗಳನ್ನು ಬಳಸಿ ವ್ಯಕ್ತಿಯು ಇನ್ನೊಬ್ಬ ವ್ಯಕ್ತಿಯಿಂದ ಹಣವನ್ನು ಕೇಳಬಹುದು. ಹೀಗೆ ಒಬ್ಬ ವ್ಯಕ್ತಿಯು ಆ್ಯಪ್ ಮೂಲಕ ಹಣಕ್ಕೆ ಕೋರಿಕೆ ಸಲ್ಲಿಸಿದಾಗ, ಕೋರಿಕೆ ಸ್ವೀಕರಿಸಿದ ವ್ಯಕ್ತಿಯ ಸ್ಮಾರ್ಟ್‌ಫೋನ್‌ನಲ್ಲಿ ಅದರ ಬಗ್ಗೆ ಒಂದು ನೋಟಿಫಿಕೇಷನ್ ಬರುತ್ತದೆ. ಆ ನೋಟಿಫಿಕೇಷನ್‌ಗೆ ಸ್ಪಂದಿಸಿ, ಆತ ಯುಪಿಐ ಗುಪ್ತಸಂಖ್ಯೆ ನಮೂದಿಸಿದರೆ ಆತನಿಂದ ಹಣದ ಪಾವತಿ ಆಗುತ್ತದೆ. ಆದರೆ ಈ ಸೌಲಭ್ಯವನ್ನು ಬಳಸಿ ವಂಚನೆಗಳು ನಡೆದಿರುವ ಕಾರಣಕ್ಕೆ ಎನ್‌ಪಿಸಿಐ ಈ ಕ್ರಮ ಕೈಗೊಂಡಿದೆ.
- ಈಗಿರುವ ನಿಯಮಗಳ ಅನ್ವಯ ಈ ಬಗೆಯ ಪ್ರತಿ ವಹಿವಾಟಿನಲ್ಲಿ ವ್ಯಕ್ತಿಯೊಬ್ಬ ಇನ್ನೊಬ್ಬ ವ್ಯಕ್ತಿಯಿಂದ ಗರಿಷ್ಠ ₹2,000 ಪಡೆಯಬಹುದು. ದಿನವೊಂದಕ್ಕೆ ಇಂತಹ 50 ವಹಿವಾಟುಗಳನ್ನು ನಡೆಸಲು ಅವಕಾಶ ಇದೆ.
- ‘ಈ ಸೌಲಭ್ಯವನ್ನು ಇನ್ನಿಲ್ಲವಾಗಿಸುವ ಮೂಲಕ ಯುಪಿಐ ವ್ಯವಸ್ಥೆಯು ತಾನು ಸುರಕ್ಷಿತ, ವಿಶ್ವಾಸಾರ್ಹ ಕೂಡ ಹೌದು ಎಂಬುದನ್ನು ಹೇಳುತ್ತಿದೆ. ಈ ಬದಲಾವಣೆಯು ವಂಚನೆಗಳನ್ನು ಗಮನಾರ್ಹವಾಗಿ ಕಡಿಮೆ ಮಾಡುತ್ತದೆ’ ಎಂದು ಎನ್‌ಟಿಟಿ ಡೇಟಾ ಪೇಮೆಂಟ್ ಸರ್ವಿಸಸ್ ಇಂಡಿಯಾ ಕಂಪನಿಯ ಮುಖ್ಯ ಹಣಕಾಸು ಅಧಿಕಾರಿ ರಾಹುಲ್ ಜೈನ್ ಹೇಳಿದ್ದಾರೆ.

## ❖ ಸಗಟು ಹಣದುಬ್ಬರ ಎರಡು ವರ್ಷಗಳ ಕನಿಷ್ಠ

- ಸಗಟು ಹಣದುಬ್ಬರ ದರವು ಜುಲೈ ತಿಂಗಳಲ್ಲಿ ಎರಡು ವರ್ಷಗಳ ಕನಿಷ್ಠ ಮಟ್ಟವಾದ ಶೇಕಡ (–)0.58ಕ್ಕೆ ಇಳಿಕೆ ಕಂಡಿದೆ. ಆಹಾರ ವಸ್ತುಗಳ ಬೆಲೆ ಇಳಿಕೆಯು ಸಗಟು ಹಣದುಬ್ಬರ ದರವು ಸತತ ಎರಡನೆಯ ತಿಂಗಳಲ್ಲಿಯೂ ಶೂನ್ಯಕ್ಕಿಂತ ಕಡಿಮೆ ಮಟ್ಟದಲ್ಲಿ ಇರುವಂತೆ ಮಾಡಿದೆ.
- ಆದರೆ, ಸಗಟು ಹಣದುಬ್ಬರ ಪ್ರಮಾಣವು ಆಗಸ್ಟ್ ತಿಂಗಳಲ್ಲಿ ಹೆಚ್ಚಳ ಕಾಣಲಿದೆ ಎಂದು ತಜ್ಞರು ಅಂದಾಜು ಮಾಡಿದ್ದಾರೆ. ಸಗಟು ಹಣದುಬ್ಬರವು ಜೂನ್ ತಿಂಗಳಲ್ಲಿ ಶೇ (–)0.13ರಷ್ಟು ಇತ್ತು, 2024ರ ಜುಲೈನಲ್ಲಿ ಇದು ಶೇ 2.10ರಷ್ಟು ದಾಖಲಾಗಿತ್ತು.
- ‘ಜುಲೈನಲ್ಲಿ ಸಗಟು ಹಣದುಬ್ಬರ ಪ್ರಮಾಣವು ಶೂನ್ಯಕ್ಕಿಂತ ಕೆಳಕ್ಕೆ ಇಳಿದಿರುವುದಕ್ಕೆ ಆಹಾರ ವಸ್ತುಗಳು, ಖನಿಜ ತೈಲಗಳು, ಕಚ್ಚಾ ಪೆಟ್ರೋಲಿಯಂ, ನೈಸರ್ಗಿಕ ಅನಿಲ, ಮೂಲ ಲೋಹದ ತಯಾರಿಕೆಯ ಬೆಲೆಯಲ್ಲಿನ ಇಳಿಕೆ ಕಾರಣ’ ಎಂದು ಕೇಂದ್ರ ಕೈಗಾರಿಕಾ ಸಚಿವಾಲಯವು ಪ್ರಕಟಣೆಯಲ್ಲಿ ಹೇಳಿದೆ.



## ❖ ಜಿಎಸ್‌ಟಿ: ತಗ್ಗಲಿದೆ ಗ್ರಾಹಕರ ಹೊರೆ




- ಸರಕು ಮತ್ತು ಸೇವಾ ತೆರಿಗೆಯಲ್ಲಿ (ಜಿಎಸ್‌ಟಿ) ಮಹತ್ತರ ಸುಧಾರಣೆ ತರಲು ಕೇಂದ್ರ ಸರ್ಕಾರ ಉದ್ದೇಶಿಸಿದೆ. **ಬಹುತೇಕ ಎಲ್ಲಾ ಸರಕು ಮತ್ತು ಸೇವೆಗಳನ್ನು ಶೇ 5 ಮತ್ತು ಶೇ 18ರ ಸ್ಲ್ಯಾಬ್ ವ್ಯಾಪ್ತಿಗೆ ತರಲು ನಿರ್ಧರಿಸಲಾಗಿದ್ದು,** ಈ ದೀಪಾವಳಿ ಯಿಂದಲೇ ನೂತನ ಬದಲಾವಣೆಯು ಅನುಷ್ಠಾನಕ್ಕೆ ಬರಲಿದೆ ಎಂದು ಉನ್ನತ ಮೂಲಗಳು ತಿಳಿಸಿವೆ.
- **ಪ್ರಸ್ತುತ, ಅಗತ್ಯ ವಸ್ತುಗಳಿಗೆ ಶೂನ್ಯ, ದಿನನಿತ್ಯದ ಬಳಕೆ ವಸ್ತುಗಳಿಗೆ ಶೇ 5ರಷ್ಟು, ಗುಣಮಟ್ಟದ ಸರಕುಗಳಿಗೆ ಶೇ 12ರಷ್ಟು ಹಾಗೂ ಎಲೆಕ್ಟ್ರಾನಿಕ್ ಮತ್ತು ಸೇವೆಗಳಿಗೆ ಶೇ 18ರಷ್ಟು, ಐಷಾರಾಮಿ ಮತ್ತು ಅಪಾಯಕಾರಿ ಸರಕುಗಳಿಗೆ ಶೇ 28ರಷ್ಟು ತೆರಿಗೆ ವಿಧಿಸಲಾಗುತ್ತಿದೆ.** ಸ್ಲ್ಯಾಬ್‌ಗಳ ಬದಲಾವಣೆ ಜಾರಿಯಾದ ಮೇಲೆ ಗ್ರಾಹಕರ ಮೇಲಿನ ತೆರಿಗೆ ಹೊರೆ ತಗ್ಗಲಿದೆ ಎಂದು ಆ ಮೂಲಗಳು ಮಾಹಿತಿ ನೀಡಿವೆ.
- ***ಜಿಎಸ್‌ಟಿ ಮಂಡಳಿಯು ಪರಿಷ್ಕೃತ ವ್ಯವಸ್ಥೆಗೆ ಅನುಮೋದನೆ ನೀಡಿದ ನಂತರ, ಶೇ 12ರ ಸ್ಲ್ಯಾಬ್ ನಲ್ಲಿರುವ ಶೇ 99ರಷ್ಟು ಸರಕುಗಳು ಶೇ 5ರ ತೆರಿಗೆ ವ್ಯಾಪ್ತಿಗೆ ಬರಲಿವೆ. ಅದೇ ರೀತಿ, ಶೇ 28ರ ಸ್ಲ್ಯಾಬ್ ನಲ್ಲಿರುವ 90ರಷ್ಟು ಸರಕು ಮತ್ತು ಸೇವೆಗಳು ಶೇ 18ರ ತೆರಿಗೆ ವ್ಯಾಪ್ತಿಗೆ ಬರಲಿವೆ. ಕೇವಲ ಏಳು ವಸ್ತುಗಳ ಮೇಲೆ ಶೇ 40ರಷ್ಟು ವಿಶೇಷ ತೆರಿಗೆ ವಿಧಿಸಲಾಗುತ್ತದೆ. ತಂಬಾಕನ್ನು ಸಹ ಈ ಪಟ್ಟಿಗೆ ಸೇರ್ಪಡೆ ಮಾಡಲಾಗಿದೆ ಎಂದೂ ತಿಳಿಸಿವೆ.***
- ಜಿಎಸ್‌ಟಿ ಪರಿಷ್ಕರಣೆಯು ಖರೀದಿಗೆ ಗ್ರಾಹಕರಿಗೆ ಉತ್ತೇಜನ ನೀಡಲಿದೆ. ಕಳೆದ ಬಾರಿಯ ಜಿಎಸ್‌ಟಿ ಪರಿಷ್ಕರಣೆ ನಂತರ ಉಂಟಾದ ನಷ್ಟವನ್ನು ಇದು ಸರಿದೂಗಿಸಬಹುದು ಎಂಬ ನಿರೀಕ್ಷೆಯನ್ನೂ ಸರ್ಕಾರ ಹೊಂದಿದೆ. **ವಜ್ರ ಮತ್ತು ಅಮೂಲ್ಯ ವಸ್ತುಗಳಂತಹ ರಫ್ತು ಆಧಾರಿತ ವಲಯಗಳು ಅಸ್ತಿತ್ವದಲ್ಲಿರುವ ತೆರಿಗೆ ವ್ಯಾಪ್ತಿಯಲ್ಲಿಯೇ ಮುಂದುವರಿಯಲಿವೆ.**

## ❖ ದೇಶ ರಕ್ಷಣೆಗೆ 'ಸುದರ್ಶನ ಚಕ್ರ'

- ದೇಶದ ಪ್ರಮುಖ ಸೇನಾ ನೆಲೆಗಳನ್ನು ರಕ್ಷಿಸಲು ಮತ್ತು ಶತ್ರುವಿನ ಬೆದರಿಕೆಗೆ ನಿರ್ಣಾಯಕ ಪ್ರತ್ಯುತ್ತರ ನೀಡಲು ಸ್ವದೇಶಿ ತಂತ್ರಜ್ಞಾನ ಬಳಸಿ **'ಸುದರ್ಶನ ಚಕ್ರ' ಹೆಸರಿನ ವಾಯು ರಕ್ಷಣಾ ವ್ಯವಸ್ಥೆ** ಅಭಿವೃದ್ಧಿಪಡಿಸುವ ಮಹತ್ವಾಕಾಂಕ್ಷೆಯ ಯೋಜನೆಯನ್ನು ಪ್ರಧಾನಿ ನರೇಂದ್ರ ಮೋದಿ ಘೋಷಿಸಿದರು.
- ನೆರೆ ರಾಷ್ಟ್ರಗಳಾದ ಪಾಕಿಸ್ತಾನ ಮತ್ತು ಚೀನಾ ಒಡ್ಡಿರುವ ಭದ್ರತಾ ಸವಾಲುಗಳ ನಡುವೆಯೇ ಪ್ರಧಾನಿ ಈ ಮಹತ್ವದ ಹೇಳಿಕೆ ನೀಡಿದ್ದಾರೆ.
- ಭಾರತದಲ್ಲೇ ತಯಾರಾಗುವ ಯುದ್ಧ ವಿಮಾನಗಳಿಗೆ ಬೇಕಾದ ಜೆಟ್ ಎಂಜಿನ್‌ಗಳನ್ನು ಸ್ವದೇಶದಲ್ಲೇ ಅಭಿವೃದ್ಧಿಪಡಿಸಲು ಕರೆ ನೀಡಿದ ಅವರು, ಮಿಲಿಟರಿ ಸಲಕರಣೆಗಳಿಗೆ ವಿದೇಶಿ ತಂತ್ರಜ್ಞಾನಗಳ ಮೇಲಿನ ಅವಲಂಬನೆಯನ್ನು ಕಡಿಮೆ ಮಾಡಬೇಕೆಂದು ಸಲಹೆ ನೀಡಿದರು.

### ಪ್ರಧಾನಿಯ ಪ್ರಮುಖ ಘೋಷಣೆಗಳು

- ಸುದರ್ಶನ ಚಕ್ರ: ವಾಯು ರಕ್ಷಣಾ ವ್ಯವಸ್ಥೆಯನ್ನು 'ವಿಸ್ತರಿಸಲು, ಬಲಪಡಿಸಲು ಮತ್ತು ಆಧುನೀಕರಣಗೊಳಿಸಲು' ಭಾರತವು 'ಸುದರ್ಶನ ಚಕ್ರ' ಎಂಬ ಯೋಜನೆ ಪ್ರಾರಂಭಿಸಲಿದೆ ಎಂದು ಪ್ರಧಾನಿ ಪ್ರಕಟಿಸಿದರು.
- ರಕ್ಷಣಾ ಕ್ಷೇತ್ರದಲ್ಲಿ ಸ್ವಾವಲಂಬನೆಯ ಅಗತ್ಯವನ್ನು ಒತ್ತಿಹೇಳಿದ ಅವರು, '2035ರ ವೇಳೆಗೆ ರಾಷ್ಟ್ರವು ತನ್ನ ಭದ್ರತಾ ವ್ಯವಸ್ಥೆಯನ್ನು ಬಲಪಡಿಸಲು ಪ್ರಯತ್ನಿಸುತ್ತಿದೆ. ಅದಕ್ಕಾಗಿ ಭಗವಾನ್ ಶ್ರೀ ಕೃಷ್ಣನ ಸುದರ್ಶನ ಚಕ್ರದಿಂದ ಸ್ಫೂರ್ತಿ ಪಡೆಯುತ್ತಿದೆ' ಎಂದು ಹೇಳಿದರು.

- ‘ಸುದರ್ಶನ ಚಕ್ರ, ಇಸ್ರೇಲ್‌ನ ‘ಐರನ್ ಡೋಮ್’ ವಾಯು ರಕ್ಷಣಾ ವ್ಯವಸ್ಥೆಯ ಮಾದರಿಯಲ್ಲಿ ಇರಬಹುದು ಎಂದು ತಜ್ಞರು ಹೇಳಿದ್ದಾರೆ.

103 ನಿಮಿಷಗಳ ಭಾಷಣ

- **ಪ್ರಧಾನಿ ಮೋದಿ ಅವರು ಸುದೀರ್ಘ 103 ನಿಮಿಷ ಮಾತನಾಡಿ, ತಮ್ಮದೇ ಹೆಸರಿನಲ್ಲಿದ್ದ ಸುದೀರ್ಘ ಭಾಷಣದ ದಾಖಲೆ ಮುರಿದರು.** ಕಳೆದ ವರ್ಷ 98 ನಿಮಿಷಗಳ ಭಾಷಣ ಮಾಡಿದ್ದು ಅವರ ಸುದೀರ್ಘ ಭಾಷಣ ಎನಿಸಿತ್ತು. 2016ರಲ್ಲಿ ಅವರು 96 ನಿಮಿಷ ಭಾಷಣ ಮಾಡಿದ್ದರು. 2017ರ ಸ್ವಾತಂತ್ರ್ಯ ದಿನಾಚರಣೆ ಅಂಗವಾಗಿ ಮಾಡಿದ್ದ 56 ನಿಮಿಷಗಳ ಭಾಷಣ ಅವರ ಅತ್ಯಂತ ಕಡಿಮೆ ಅವಧಿಯ ಭಾಷಣವಾಗಿತ್ತು.
- **ಸತತ 12ನೇ ಭಾಷಣ: ಮೋದಿ ಅವರು ಕೆಂಪು ಕೋಟೆಯಿಂದ ಸತತ 12 ಭಾಷಣಗಳನ್ನು ಮಾಡುವ ಮೂಲಕ ಮಾಜಿ ಪ್ರಧಾನಿ ಇಂದಿರಾ ಗಾಂಧಿ ಅವರನ್ನು ಹಿಂದಿಕ್ಕಿದರು. ಮಾಜಿ ಪ್ರಧಾನಿ ಜವಾಹರಲಾಲ್ ಅವರು ಸತತ 17 ಸ್ವಾತಂತ್ರ್ಯ ದಿನಾಚರಣೆ ಭಾಷಣ ಮಾಡಿದ್ದಾರೆ. ಇಂದಿರಾ ಅವರು ಒಟ್ಟು 16 ಭಾಷಣ ಮಾಡಿದ್ದರೂ, ಅದರಲ್ಲಿ 11 ಭಾಷಣ (1966ರಿಂದ 1977ರವರೆಗೆ) ಸತತವಾಗಿದ್ದವು.**

## ❖ ಅಮೆರಿಕಕ್ಕೆ ರಫ್ತು ಶೇ 20ರಷ್ಟು ಏರಿಕೆ

- ಜುಲೈ ತಿಂಗಳಿನಲ್ಲಿ ಅಮೆರಿಕಕ್ಕೆ ದೇಶದ ಸರಕುಗಳ ರಫ್ತು ಶೇ 20ರಷ್ಟು ಏರಿಕೆಯಾಗಿದೆ. ಇದರ ಒಟ್ಟು ಮೌಲ್ಯ ₹70,208 ಕೋಟಿಯಾಗಿದೆ ಎಂದು ಕೇಂದ್ರ ವಾಣಿಜ್ಯ ಸಚಿವಾಲಯ ತಿಳಿಸಿದೆ.
- ಇದೇ ಅವಧಿಯಲ್ಲಿ ಆಮದು ಶೇ 13ರಷ್ಟು ಹೆಚ್ಚಳವಾಗಿದ್ದು, ₹39,881 ಕೋಟಿಯಾಗಿದೆ ಎಂದು ತಿಳಿಸಿದೆ.
- ಏಪ್ರಿಲ್-ಜುಲೈ ಅವಧಿಯಲ್ಲಿ ದೇಶದ ರಫ್ತು ಶೇ 21ರಷ್ಟು ಹೆಚ್ಚಳವಾಗಿದ್ದು, ₹2.93 ಲಕ್ಷ ಕೋಟಿಯಾಗಿದೆ. ಆಮದು ₹1.52 ಲಕ್ಷ ಕೋಟಿಯಾಗಿದ್ದು, ಶೇ 12ರಷ್ಟು ಏರಿಕೆಯಾಗಿದೆ. **ಅಮೆರಿಕದ ದೇಶದ ಅತಿದೊಡ್ಡ ವ್ಯಾಪಾರ ಪಾಲುದಾರ ರಾಷ್ಟ್ರವಾಗಿದ್ದು, ₹1.10 ಲಕ್ಷ ಕೋಟಿ ದ್ವಿಪಕ್ಷೀಯ ವ್ಯಾಪಾರ ಹೊಂದಿದೆ.**
- ಏಪ್ರಿಲ್‌ನಿಂದ ಅಮೆರಿಕಕ್ಕೆ ದೇಶದ ರಫ್ತು ಸಕಾರಾತ್ಮಕ ಬೆಳವಣಿಗೆ ದಾಖಲಿಸಿದೆ.
- ದ್ವಿಪಕ್ಷೀಯ ವ್ಯಾಪಾರ ಒಪ್ಪಂದದ ಬಗ್ಗೆ ಭಾರತ ಮತ್ತು ಅಮೆರಿಕ ಮಾತುಕತೆ ನಡೆಸುತ್ತಿವೆ. ಆಗಸ್ಟ್ 25ಕ್ಕೆ ಅಮೆರಿಕದ ತಂಡವು ಭಾರತಕ್ಕೆ ಭೇಟಿ ನೀಡಿ, ಒಪ್ಪಂದದ ಬಗ್ಗೆ ಮಾತುಕತೆ ನಡೆಸಲಿದೆ.

## ❖ ಹಣಕಾಸು ಸಂಸ್ಥೆಗಳ ರೇಟಿಂಗ್ ಮೇಲ್ದರ್ಜೆಗೆ: ಎಸ್ ಆ್ಯಂಡ್ ಪಿ

- ಜಾಗತಿಕ ರೇಟಿಂಗ್ ಸಂಸ್ಥೆ ಎಸ್ ಆ್ಯಂಡ್ ಪಿ ಗ್ಲೋಬಲ್, ಎಸ್‌ಬಿಐ, ಎಚ್‌ಡಿಎಫ್‌ಸಿ ಬ್ಯಾಂಕ್, ಟಾಟಾ ಕ್ಯಾಪಿಟಲ್ ಸೇರಿದಂತೆ ದೇಶದ ಪ್ರಮುಖ 10 ಹಣಕಾಸು ಸಂಸ್ಥೆಗಳ ರೇಟಿಂಗ್ ಅನ್ನು ಮೇಲ್ದರ್ಜೆಗೇರಿಸಿದೆ.
- ಭಾರತದ ಹಣಕಾಸು ಸಂಸ್ಥೆಗಳು ದೇಶದ ಉತ್ತಮ ಆರ್ಥಿಕ ಬೆಳವಣಿಗೆಯ ವೇಗಕ್ಕೆ ನಿರಂತರವಾಗಿ ಚಾಲನೆ ನೀಡುತ್ತಿವೆ. ಈ ಸಂಸ್ಥೆಗಳು ವಸೂಲಾಗದ ಸಾಲದ ಪ್ರಮಾಣದಲ್ಲಿ ಸುಧಾರಣೆ ಕಂಡಿವೆ ಎಂದು ಹೇಳಿದೆ. ಭಾರತದ ಬ್ಯಾಂಕ್‌ಗಳು ಮುಂದಿನ 12 ತಿಂಗಳಿನಿಂದ 14 ತಿಂಗಳಿನಲ್ಲಿ ಉತ್ತಮ ಲಾಭದಾಯಕತೆ ಮತ್ತು ಬಂಡವಾಳವನ್ನು ಹೊಂದುವ ನಿರೀಕ್ಷೆಯಿದೆ ಎಂದು ಹೇಳಿದೆ.

## ❖ ಕದನ ವಿರಾಮ: ಅನಿಶ್ಚಿತತೆ ನಡುವೆ ಸಭೆ

- ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹಾಗೂ ರಷ್ಯಾ ಅಧ್ಯಕ್ಷ ವ್ಲಾದಿಮಿರ್ ಪುಟಿನ್ ಅವರು ಅಲಾಸ್ಕದಲ್ಲಿ ಬಂದಿಳಿದರು.
- ಉಭಯ ನಾಯಕರು ಇಲ್ಲಿಗೆ ಬಂದಿಳಿದ ನಂತರ ಹಸ್ತಲಾಘವ ಮಾಡಿ, ಸಭೆ ಆರಂಭಿಸಿದರು.
- ರಷ್ಯಾ-ಉಕ್ರೇನ್ ನಡುವಿನ ಯುದ್ಧ ಕೊನೆಗಾಣಿಸಿ, ಕದನ ವಿರಾಮ ಘೋಷಿಸಲು ಅಂತಿಮ ಒಪ್ಪಂದಕ್ಕೆ ಬರುವ ಕುರಿತು ಸಭೆಯಲ್ಲಿ ಉಭಯ ನಾಯಕರು ಚರ್ಚಿಸಲಿದ್ದಾರೆ.

- ಪುಟಿನ್ ಅವರ ಆಗಮನಕ್ಕೂ ಮುನ್ನ ಸುದ್ದಿಗಾರರೊಂದಿಗೆ ಮಾತನಾಡಿದ ಟ್ರಂಪ್, 'ಉಕ್ರೇನ್ ಮತ್ತು ರಷ್ಯಾ ನಡುವೆ ತ್ವರಿತವಾಗಿ ಕದನ ವಿರಾಮ ಘೋಷಣೆ ಆಗಬೇಕು ಎಂಬುದು ನನ್ನ ಬಯಕೆ. ಇಂದಿನ ಈ ಸಭೆಯಲ್ಲಿ ಇದು ಸಾಧ್ಯವಾಗ ಲಿದೆಯೇ ಎಂಬುದು ನನಗೆ ತಿಳಿಯದು' ಎಂದು ಹೇಳಿದರು.
- 'ಒಪ್ಪಂದ ಕುರಿತಂತೆ ಯಾವುದೇ ನಿರ್ದಿಷ್ಟವಾಗಿ ಯಾವುದೂ ನಿರ್ಧಾರವಾಗಿಲ್ಲ' ಎನ್ನುವ ಮೂಲಕ ಅವರು, ಇಂದಿನ ಸಭೆ ಉದ್ದೇಶಿತ ಗುರಿ ಸಾಧಿಸುವಲ್ಲಿ ಸಫಲವಾಗುವ ಅನಿಶ್ಚಿತತೆ ಇರುವುದನ್ನು ಸೂಚ್ಯವಾಗಿ ಹೇಳಿದರು.
- 'ಕದನ ವಿರಾಮಕ್ಕೆ ಒಂದು ವೇಳೆ ಪುಟಿನ್ ಅವರು ಒಪ್ಪದಿದ್ದಲ್ಲಿ ನಾನು ಸಭೆ ಯಿಂದ ಹೊರನಡೆಯುವುದು ಖಚಿತ' ಎಂದು ವಿಮಾನದಲ್ಲಿ ಪ್ರಯಾಣಿಸುವ ವೇಳೆ, ಫಾಕ್ಸ್ ನ್ಯೂಸ್‌ಗೆ ನೀಡಿದ ಪ್ರತ್ಯೇಕ ಸಂದರ್ಶನದಲ್ಲಿ ಟ್ರಂಪ್ ಹೇಳಿದ್ದಾರೆ.
- 'ಹೆಚ್ಚುವರಿ ಸುಂಕವೇ ಕಾರಣ' : ಅಲಾಸ್ಕಕ್ಕೆ ತೆರಳುವ ಮುನ್ನ ಸುದ್ದಿಗಾರರೊಂದಿಗೆ ಮಾತನಾಡಿದ ಟ್ರಂಪ್, 'ರಷ್ಯಾದಿಂದ ಎರಡನೇ ಅತಿ ಹೆಚ್ಚು ಕಚ್ಚಾತೈಲ ಖರೀದಿ ಸುತ್ತಿದ್ದ ಭಾರತದ ಮೇಲೆ ಹೆಚ್ಚುವರಿ ಸುಂಕ ವಿಧಿಸಿದ್ದ ರಿಂದಲೇ, ರಷ್ಯಾವು-ಅಮೆರಿಕದ ಜೊತೆಗೆ ಮಾತುಕತೆಗೆ ಮುಂದಾಯಿತು' ಎಂದು ತಿಳಿಸಿದ್ದಾರೆ.
- 'ನೀವು ರಷ್ಯಾದಿಂದ ಕಚ್ಚಾತೈಲ ಖರೀದಿಸುತ್ತಿದ್ದು, ನಿಮಗೆ ಹೆಚ್ಚುವರಿ ತೆರಿಗೆ ವಿಧಿಸಲಾಗುವುದು ಎಂದು ಭಾರತಕ್ಕೆ ಮೊದಲೇ ಎಚ್ಚರಿಕೆ ನೀಡಲಾಗಿತ್ತು. ಅದೇ ರಷ್ಯಾ ಮಾತುಕತೆ ನಡೆಸಲು ಕಾರಣ ವಾಗಿದೆ' ಎಂದು ಟ್ರಂಪ್ ತಿಳಿಸಿದ್ದಾರೆ.
- ಬದಲಾವಣೆ ಇಲ್ಲ: 'ರಷ್ಯಾದಿಂದ ತೈಲ ಆಮದು ನಿಲ್ಲಿಸಿಲ್ಲ. ಭಾರತವೂ ಮುಂದೆಯೂ ಖರೀದಿಸಲಿದ್ದು, ಈ ನಿರ್ಧಾರದಲ್ಲಿ ಬದಲಾವಣೆಯಿಲ್ಲ' ಎಂದು ಐಒಸಿಎಲ್‌ನ ಮುಖ್ಯಸ್ಥ ಎ.ಎಸ್. ಸಾಹ್ನಿ ತಿಳಿಸಿದ್ದಾರೆ.

## ❖ ಜಾಗತಿಕ ವ್ಯವಹಾರದಲ್ಲಿ ಭಾರತದ ಪ್ರಾಬಲ್ಯ: ವ್ಲಾದಿಮಿರ್ ಪುಟಿನ್ ಶ್ಲಾಘನೆ

- 'ಜಾಗತಿಕ ವ್ಯವಹಾರಗಳಲ್ಲಿ ಭಾರತವು ಸ್ಪಷ್ಟವಾದ ಪ್ರಾಬಲ್ಯ ಹೊಂದಿದೆ' ಎಂದು ರಷ್ಯಾ ಅಧ್ಯಕ್ಷ ವ್ಲಾದಿಮಿರ್ ಪುಟಿನ್ ತಿಳಿಸಿದ್ದಾರೆ. ಅಂತರರಾಷ್ಟ್ರೀಯ ಪ್ರಮುಖ ವಿಚಾರಗಳಲ್ಲಿ ಭಾರತವು ಸಕ್ರಿಯ ಪಾತ್ರವನ್ನು ಉಲ್ಲೇಖಿಸಿ ಈ ಅಭಿಪ್ರಾಯಪಟ್ಟಿದ್ದಾರೆ.
- ಸ್ವಾತಂತ್ರ್ಯ ದಿನದ ಅಂಗವಾಗಿ ರಾಷ್ಟ್ರಪತಿ ದ್ರೌಪದಿ ಮುರ್ಮು, ಪ್ರಧಾನಿ ನರೇಂದ್ರ ಮೋದಿ ಅವರಿಗೆ ಸಂದೇಶ ಕಳುಹಿಸಿರುವ ಅವರು, 'ಎರಡು ರಾಷ್ಟ್ರಗಳ ನಡುವೆ ವಿಶೇಷ ಕಾರ್ಯತಂತ್ರದ ಪಾಲುದಾರಿಕೆಯನ್ನು ಮತ್ತಷ್ಟು ಬಲಪಡಿಸಲು ರಷ್ಯಾ ಬದ್ಧವಾಗಿದೆ' ಎಂದು ಪುಟಿನ್ ಒತ್ತಿ ಹೇಳಿದ್ದಾರೆ.

## ❖ ರಷ್ಯಾದಿಂದ 20 ಲಕ್ಷ ಬ್ಯಾರೆಲ್ ತೈಲ ಖರೀದಿ

- ರಷ್ಯಾದಿಂದ ಭಾರತವು ಪ್ರತಿ ನಿತ್ಯ ಖರೀದಿಸುವ ಕಚ್ಚಾ ತೈಲದ ಪ್ರಮಾಣವು ಆಗಸ್ಟ್ ತಿಂಗಳ ಮೊದಲಾರ್ಧದಲ್ಲಿ 20 ಲಕ್ಷ ಬ್ಯಾರೆಲ್‌ಗೆ ಏರಿಕೆಯಾಗಿದೆ ಎಂದು ಜಾಗತಿಕ ವ್ಯಾಪಾರ ವಿಶ್ಲೇಷಕ ಸಂಸ್ಥೆ ಕೆಪ್ಲೆರ್ ತಿಳಿಸಿದೆ.
- ಪ್ರಸಕ್ತ ತಿಂಗಳ ಮೊದಲಾರ್ಧದಲ್ಲಿ ದಿನಕ್ಕೆ ಅಂದಾಜು 52 ಲಕ್ಷ ಬ್ಯಾರೆಲ್ ಕಚ್ಚಾ ತೈಲವು ದೇಶಕ್ಕೆ ಆಮದಾಗಿದೆ. ಈ ಪೈಕಿ ಶೇ 38ರಷ್ಟು ರಷ್ಯಾದಿಂದ ಬಂದಿದೆ ಎಂದು ತಿಳಿಸಿದೆ.
- ಜುಲೈ ತಿಂಗಳಿನಲ್ಲಿ ರಷ್ಯಾದಿಂದ ಪ್ರತಿ ನಿತ್ಯ 16 ಲಕ್ಷ ಬ್ಯಾರೆಲ್ ತೈಲ ಆಮದಾ ಗಿತ್ತು. ಇದು ಆಗಸ್ಟ್‌ನಲ್ಲಿ 20 ಲಕ್ಷ ಬ್ಯಾರೆಲ್‌ಗೆ ಹೆಚ್ಚಳವಾಗಿದೆ. ಇರಾಕ್, ಸೌದಿ ಅರೇಬಿಯಾದಿಂದ ಆಮದು ಕಡಿಮೆಯಾಗಿದೆ ಎಂದು ತಿಳಿಸಿದೆ.
- 'ಆಗಸ್ಟ್ ತಿಂಗಳಿಗೆ ಬೇಕಾದ ದಾಸ್ತಾನಿಗೆ ಜೂನ್ ಮತ್ತು ಜುಲೈನಲ್ಲಿ ಬೇಡಿಕೆ ಸಲ್ಲಿಸಲಾಗಿರುತ್ತದೆ. ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ಸುಂಕ ನಿರ್ಧಾರದ ಪರಿಣಾಮವು ಸೆಪ್ಟೆಂಬರ್ ನಂತರ ಇರಲಿದೆ' ಎಂದು ಕೆಪ್ಲೆರ್‌ನ ಸಂಶೋಧನಾ ವಿಶ್ಲೇಷಕ (ಸಂಸ್ಕರಣೆ ಮತ್ತು ಮಾಡೆಲಿಂಗ್) ಸುಮಿತ್ ರಿಟೋಲಿಯಾ ಹೇಳಿದ್ದಾರೆ.

Dr.Rajkumar IAS/KAS Academy

## ❖ ಭಾರತ-ಅಮೆರಿಕ ಜತೆಯಾಗಿ ಸಮಸ್ಯೆ ಬಗೆಹರಿಸಿಕೊಳ್ಳಲಿವೆ: ರುಬಿಯೊ

- 'ಭಾರತ ಮತ್ತು ಅಮೆರಿಕ ಒಟ್ಟಾಗಿ ಆಧುನಿಕ ಸವಾಲುಗಳನ್ನು ಎದುರಿಸಲಿದ್ದು, ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಲಿವೆ' ಎಂದು ಅಮೆರಿಕದ ವಿದೇಶಾಂಗ ಕಾರ್ಯದರ್ಶಿ ಮಾರ್ಕೊ ರುಬಿಯೊ ಹೇಳಿದ್ದಾರೆ.
- 'ಭಾರತ ಮತ್ತು ಅಮೆರಿಕದ ನಡುವಿನ ಸಂಬಂಧಕ್ಕೆ ದೀರ್ಘಾವಧಿ ಮತ್ತು ಐತಿಹಾಸಿಕ ಮಹತ್ವ ಇದೆ. ಉಭಯ ದೇಶಗಳು ಒಟ್ಟಿಗೆ ಉಜ್ವಲವಾದ ಭವಿಷ್ಯ ರೂಪಿಸಿಕೊಳ್ಳಲಿವೆ' ಎಂದು ರುಬಿಯೊ ಭಾರತಕ್ಕೆ ಸ್ವಾತಂತ್ರ್ಯ ದಿನದ ಶುಭಾಶಯ ಕೋರಿದ ಸಂದರ್ಭದಲ್ಲಿ ತಿಳಿಸಿದ್ದಾರೆ.

## ❖ ಅಂಕಿತಾ ರಾಷ್ಟ್ರೀಯ ದಾಖಲೆ

- ಒಲಿಂಪಿಯನ್ ಅಂಕಿತಾ ಧ್ಯಾನಿ ಅವರು ಇಸ್ರೇಲ್‌ನಲ್ಲಿ ನಡೆಯುತ್ತಿರುವ ಗ್ರ್ಯಾನ್‌ಸ್ಲ್ಯಾಮ್ ಜೇರುಸಲೆಂ ಅಥ್ಲೆಟಿಕ್ ಕೂಟದಲ್ಲಿ ಮಹಿಳೆಯರ 2000 ಮೀಟರ್ಸ್ ಸ್ಟೀಪಲ್‌ಚೇಸ್‌ನಲ್ಲಿ ಚಿನ್ನದ ಪದಕ ಗೆದ್ದರು. ಅದರೊಂದಿಗೆ ರಾಷ್ಟ್ರೀಯ ದಾಖಲೆಯನ್ನೂ ನಿರ್ಮಿಸಿದರು.
- 23 ವರ್ಷದ ಅಂಕಿತಾ 6 ನಿಮಿಷ, 13.92 ಸೆಕೆಂಡುಗಳಲ್ಲಿ ಗುರಿ ಮುಟ್ಟಿದರು. ಈ ಹಿಂದೆ ಪಾರುಲ್ ಚೌಧರಿ ಅವರು ಮಾಡಿದ್ದ ದಾಖಲೆ (6ನಿ,14.38ಸೆ) ದಾಖಲೆಯನ್ನು ಮೀರಿ ನಿಂತರು.
- ಈ ಗೆಲುವಿನೊಂದಿಗೆ ಅಂಕಿತಾ ಅವರ ರ‍್ಯಾಂಕಿಂಗ್ ಪಾಯಿಂಟ್ಸ್‌ಗಳಲ್ಲಿ ಹೆಚ್ಚಳವಾಗಿದೆ. ಇದರೊಂದಿಗೆ ಅವರು ಮುಂದಿನ ತಿಂಗಳು ಟೋಕಿಯೊದಲ್ಲಿ ನಡೆಯುವ ವಿಶ್ವ ಚಾಂಪಿಯನ್‌ಷಿಪ್‌ಗೆ (3000 ಮೀ ಸ್ಟೀಪಲ್‌ಚೇಸ್) ಅರ್ಹತೆ ಪಡೆಯುವ ಸಾಧ್ಯತೆ ಹೆಚ್ಚಿದೆ.
- 'ಹೌದು. ನಿಯಮದ ಪ್ರಕಾರ ಇಲ್ಲಿ 2000 ಮೀ ಸ್ಟೀಪಲ್‌ಚೇಸ್‌ನಲ್ಲಿ ಮಾಡಿದ ಸಾಧನೆಯು ವಿಶ್ವ ರ‍್ಯಾಂಕಿಂಗ್‌ಗೆ ಪರಿಗಣಿತವಾಗಲಿದೆ. ಅಲ್ಲದೇ ವಿಶ್ವ ಚಾಂಪಿಯನ್‌ಷಿಪ್ 3000 ಮೀ ಸ್ಟೀಪಲ್‌ಚೇಸ್‌ಗೂ ಅರ್ಹತೆ ಪಡೆಯಲು ಅವಕಾಶವಿದೆ' ಎಂದು ಭಾರತ ಅಥ್ಲೆಟಿಕ್ಸ್ ತಂಡದ ಮುಖ್ಯಕೋಚ್ ರಾಧಾಕೃಷ್ಣನ್ ನಾಯರ್ ಹೇಳಿದ್ದಾರೆ.
- ಗ್ರ್ಯಾನ್‌ಸ್ಲ್ಯಾಮ್ ಜೆರುಸಲೇಂ ಕೂಟವು ವಿಶ್ವ ಅಥ್ಲೆಟಿಕ್ಸ್ ಕಾಂಟಿನೆಂಟರ್ ಟೂರ್ ಸಿಲ್ವರ್ ಲೆವೆಲ್ (ಬಿ ಕೆಟಗರಿ) ಕೂಟವಾಗಿದೆ. ಇಸ್ರೇಲ್‌ನ ಅದ್ವಾ ಕೊಹೆನ್ ಮತ್ತು ಡೆನ್ಮಾರ್ಕಿನ ಜೂಲಿ ಯನ್ ಹವಿದ್ ಕ್ರಮವಾಗಿ ದ್ವಿತೀಯ (6ನಿ,15.20ಸೆ) ಮತ್ತು ತೃತೀಯ (6ನಿ, 17.80ಸೆ) ಸ್ಥಾನ ಪಡೆದರು.
- ಹೋದ ತಿಂಗಳು ನಡೆದಿದ್ದ ವಿಶ್ವ ಯುನಿವರ್ಸಿಟಿ ಗೇಮ್ಸ್‌ನಲ್ಲಿ ಅಂಕಿತಾ ಅವರು 3000 ಮೀ ಸ್ಟೀಪಲ್ ಚೇಸ್‌ನಲ್ಲಿ ಬೆಳ್ಳಿ ಪದಕ ಗಳಿಸಿದ್ದರು. ಅಲ್ಲಿ ಅವರು ತಮ್ಮ ವೈಯಕ್ತಿಕ ಶ್ರೇಷ್ಠ ಸಮಯ (9ನಿ,31.99ಸೆ) ದಾಖಲಿಸಿದ್ದರು.
- 2024ರ ಪ್ಯಾರಿಸ್ ಒಲಿಂಪಿಕ್ ಕೂಟದಲ್ಲಿ ಅವರು ಮಹಿಳೆಯರ 5000 ಮೀ ಓಟದಲ್ಲಿ ಸ್ಪರ್ಧಿಸಿದ್ದರು. 2023ರಲ್ಲಿ ಬ್ಯಾಂಕಾಕ್‌ನಲ್ಲಿ ನಡೆದಿದ್ದ ಏಷ್ಯನ್ ಅಥ್ಲೆಟಿಕ್ಸ್‌ನಲ್ಲಿ ಅವರು 5000 ಮೀ ಓಟದಲ್ಲಿ ಕಂಚು ಪಡೆದಿದ್ದರು.

-------------------------------------ಶುಭವಂದನೆಗಳು----------------------------------------

Dr. Rajkumar IAS/KAS Academy